
ಗೌ
ರಿ
ಲಂಕೇಶ್
ಅಕ್ಟೋಬರ್ 15, 2008 ರೂ. 12/-







ಸವ ತತ್ವ ಮರೆತ ಲಿಂಗಾಯತರು



ಬರಲಿದ್ದಾನೆಯೇ ದಲಿತ ಉತ್ತರಾಧಿಕಾರಿ?




ಬ್ರಾಹ್ಮಣ್ಯದಿಂದ ಮುಕ್ತಿ ಎಂದು?



ಬಸವಾ... ಮತ್ತೆ ಹುಟ್ಟಿ ಬಾ!



ಬಸವರಾಜನ್ ಗೋಲ್‌ಮಾಲ್‌ಗಳು



ರುಡಾಚಾರನೊಂದಿಗೆ 300 ಕೋಟಿ ಡೀಲ್






ಚೆಡ್ಡಿಗಳ ಕುತಂತ್ರಕ್ಕೆ ಬಲಿ

ನಗ್ಗಲ ಮುಳ್ಳು


ಗಾಂಧಿ ಕಾಟ

'ಹಬ್ಬಕ್ಕೂ ಮಾಂಸ, ಮದುವೆಗೂ ಮಾಂಸ, ಸಾವಿಗೂ ಮಾಂಸ' ಅನ್ನೋ ಸಾಬರಿಗೆ, 'ಮಗನ್ನ ಮಾರಾದ್ರೂ ಮಾರ್ನಮಿ ಮಾಡು' ಅನ್ನೋ ಶೂದ್ರರಿಗೆ ಈ ಗಾಂಧಿ ಅನ್ನೋನು ಶ್ಯಾನೆ ಬಿಕ್ಕಟ್ಟು ತರ್ತಿದಾನೆ. ಗಾಂಧಿ ಆಶಯಗಳನ್ನು ಗಾಳಿಗೆ ತೂರಿದ್ದರೂ ಸರ್ಕಾರ ಅನ್ನೋದು ಅವನ ಗೌರವಾರ್ಥ ಅವನು ಹುಟ್ಟಿದ ದಿನ ಮಾಂಸ ಮಾರಬಾರದು ಅಂತ ಕಾನೂನು ಮಾಡಿದೆ. ಆ ದಿನ ಅವತ್ತೇ ಬರುತ್ತೆ, ಅದರಲ್ಲಿ ಯಾವ ಬದಲಾವಣೆಯೂ ಇರಲ್ಲ. ಹಬ್ಬಗಳು ಹಾಗಲ್ಲ, ಐಲುಪೈಲಾಗಿ ಯಾವ ಯಾವತ್ತೋ ಬರ್ತವೆ. ಈ ಸಾಲಿನಲ್ಲಿ ಗಾಂಧಿ ಜಯಂತಿಯಂದೇ ಅವು ವಕ್ಕರಿಸಿ ಹಬ್ಬ ಆಚರಿಸುವವರ ಉತ್ಸಾಹವನ್ನೇ ಹಿಂಗಿಸುತ್ತಿವೆ. ಗಾಂಧಿ ಜಯಂತಿಯಂದು ಯಾವ ಹಬ್ಬವೂ ಬರಬಾರದು ಅಂತ ಧರ್ಮಶಾಸ್ತ್ರಗಳಲ್ಲಿ ನಮೂದಿಸಿದರೇ ವಾಸಿ! ಸಾಬರ ಕಂಡರೇ ಸಿಡಿಮಿಡಿಯಾಗುವ ಸಂಘ ಪರಿವಾರದವರಿಗೆ ಒಂದು ರೀತಿಯ ವಿಕೃತ ತೃಪ್ತಿ–ಈ ಬಡ್ಡೀಮಕ್ಕಳು ಹೆಂಗೆ ಹಬ್ಬ ಮಾಡ್ತಾರೆ ನೋಡ್ತೀವಿ. ಮಾಂಸಕ್ಕೆ ಅಂತ ಕೋಳಿ, ಕುರಿ, ದನ ಕಡುದ್ರೆ ಹಿಡಿದು ತದುಕಬಹುದಲ್ಲಾ ಅಂತ ಆನಂದದಿಂದ ಕುಣೀತಾ ಕುಂತವಂತೆ. ಸಂಘಿಗಳು ಚಾಪೆ ಕೆಳಗೆ ತೂರಿದರೆ ಕರಾವಳಿ ಸಾಬರು ರಂಗೋಲಿ ಕೆಳಗೆ ನುಸುಳಿ ಹಬ್ಬದ ಹಿಂದಿನ ದಿನವೇ ಭರ್ಜರಿಯಾಗಿ ರಂಜಾನ್ ಆಚರಿಸಿ ಮಾಂಸದ ಊಟ ಚಪ್ಪರಿಸಿದರಂತೆ. ಆದರೆ ಇತರ ಕಡೆ ಸಾಬರು ಹಾಗೆ ಮಾಡಲಿಲ್ಲವಂತೆ. ಆ ಚಂದ್ರ ಅನ್ನೋನು ಕಾಣುವವರೆವಿಗೂ ಹಬ್ಬ ಮಾಡುವುದಿಲ್ಲ ಅಂತ ಮೊಂಡು ಹಿಡಿದು ಗಾಂಧಿ ಜಯಂತಿಯಂದೇ ಮಾಡುತ್ತಾರಂತೆ. ಧರ್ಮಗುರುಗಳೇನೋ ಸಿಹಿ ಅಡುಗೆ ಮಾಡಿ ಹಬ್ಬ ಆಚರಿಸ್ತೀವಿ ಅಂತ ಹೇಳಿದ್ದಾರೆ ನಿಜ. ಸಿಹಿ ತಿಂದ್ರೆ ಬಿರ್ಯಾನಿ ತಿಂದ ಮಜ ಸಿಗುತ್ತಾ, ಅದು ಸಾಬರ ಹಬ್ಬ ಅನ್ನಿಸಿಕೊಳ್ಳುತ್ತಾ ಅನ್ನುವ ಯೋಜನೆಯಲ್ಲಿದ್ದೆ. ಸಿಲ್ವಾರದ ಪಾತ್ರೆಗಳನ್ನು ಮಾರುತ್ತಾ ಒಬ್ಬ ಸಾಬಿ ಬಂದ. 'ಹಬ್ಬ ಇಲ್ವೇನೋ ಸಾಹೇಬ' ಅಂದೆ. 'ಅರೆ ಅದು ನಾಳೀಕೆ ಅಲ್ಲಾಸಾಬ್' ಅಂದ ಅವ. 'ಅಲ್ಲ ಸಾಹೇಬು ನಾಳೆ ಗಾಂಧಿ ಜಯಂತಿ, ಮಾಂಸ ಮಾರಲ್ಲವಲ್ಲ' ಅಂದೆ. 'ಅದ್ಕೇಯ ಸಾಬ್ ಇವತ್ತು ರಾತ್ರಿಯೇ ಮರಿ ಕದೀತಾರೆ' ಅಂದ ಅವ!



ಗಾಂಧಿ ಜಯಂತಿ ಅಂದ್ರೆ... ಪ್ರಾಣಿಗಳ ಆಯಸ್ಸು ಒಂದು ದಿವಸ ಕಡಿಮೆ ಆಗುವ ಸಂದರ್ಭ ಎಂದೇನಾದರೂ ಅರ್ಥ ಇದೆಯಾ ಅಂತ ಅನರ್ಥ ಕೋಶ ಹುಡುಕಲಾರಂಭಿಸಿದೆ.

ಟಿವಿಯಲ್ಲಿ ಸುದ್ದಿ ಬಂತು. 'ಗಾಂಧಿ ಜಯಂತಿಯಂದು ಮಾಂಸ ಮಾರಾಟಕ್ಕೆ ವಿಶೇಷ ರಿಯಾಯಿತಿ.' ಹೇಗಿದ್ದರೂ ತಿಂದೇ ತಿನ್ತಾರೆ, ಕಾನೂನು ರೀತೀಲೆ ತಿನ್ನಲಿ ಅಂತಾನಾ!



ಪೇಜಾವರರಿಗೆ ಪರ್ಯಾಯ

ಹಿಂದೂಗಳ ಸಂಖ್ಯೆ ದಿನೇದಿನೇ ಕಡಿಮೆಯಾಗುತ್ತಿರುವುದು ಸಂಘ ಪರಿವಾರಿಗಳ ಅಂತರ್‌ದೃಷ್ಟಿಗೆ ಗೋಚರಿಸುತ್ತಿದೆ. ಮತಾಂತರದಿಂದ ಅದು ಇನ್ನೂ ಇಳಿಮುಖವಾಗುತ್ತಿರುವುದು ಅವರನ್ನು ಕಂಗಾಲಾಗಿಸಿದೆ. 'ಮಕ್ಕಳನ್ನು ಹುಟ್ಟಿಸಿ ಹಿಂದೂ ಧರ್ಮ ಉಳಿಸಿ' ಎಂದು ಫರ್ಮಾನು ಹೊರಡಿಸಿದರೂ ಯಾರೂ ಇದರತ್ತ ಗಮನಹರಿಸಿಲ್ಲವೋ ಅಥವಾ ಅವರಲ್ಲಿ ಸಂತಾನ ಪಡೆಯುವ ಶಕ್ತಿಯೇ ಇಂಗಿ ಹೋಗಿದೆಯೋ ತಿಳಿದುಬರುತ್ತಿಲ್ಲ. ಇವೆಲ್ಲದರಿಂದ ಕಳವಳಗೊಂಡ ಪೇಜಾವರ ಶ್ರೀಗಳ ನೇತೃತ್ವದಲ್ಲಿ ಹಲವು ಸ್ವಾಮಿಗಳು ಮತಾಂತರ ನಿಷೇಧ ಕಾನೂನು ಜಾರಿಗೆ ತರಲು ಒತ್ತಾಯಿಸಿದ್ದಾರೆ. ಹಿಂದೂಗಳ ಸಂಖ್ಯೆಯನ್ನು ವೃದ್ಧಿಸಲು ಮಾವಳ್ಳಿ ಶಂಕರ್ ಒಂದು ಅಭೂತಪೂರ್ವ ಸಲಹೆ ನೀಡಿದ್ದಾರೆ. ಪೇಜಾವರ ಶ್ರೀಗಳೇ ವಿವಾಹವಾಗಿ ಈ ಮಹಾನ್ ಕಾರ್ಯದ ಮಾರ್ಗದರ್ಶಿಯಾಗಲಿ ಎಂಬುದೇ ಈ ಸಲಹೆ. ಇದು ಇತರೆ ಸ್ವಾಮಿಗಳಿಗೂ ಅನ್ವಯಿಸುತ್ತದೆಯೇ ಎಂಬುದು ತಿಳಿದುಬಂದಿಲ್ಲ. ಕೆಲವು ಕಚ್ಚೆಹರುಕ, ಲಂಪಟ ಬಿರುದಾಂಕಿತ ಮಠಾಧೀಶರೇ ಅಲ್ಲದೆ ಇಂತಹ ಗುಣವಾಚಕಗಳು ಯಾವೂ ಇಲ್ಲದಿದ್ದರೂ ಯಶಸ್ವಿಯಾಗಿ ಈ ವೃತ್ತಿಯಲ್ಲಿ ನಿರತರಾಗಿದ್ದು, ಹಿಂದೂ ಧರ್ಮದ ಏಳಿಗೆಗಾಗಿ ಸಂತಾನ ದಾನ ಮಾಡಿರುವವರೂ ಹಲವು ಕಾವಿಧಾರಿಗಳಿದ್ದಾರೆ. ಆದರೆ ಅದು ಬೇರೆ ಸದ್ ಗೃಹಸ್ಥರ ಹೆಸರಿನಲ್ಲಿ ದಾಖಲಾಗುತ್ತದೆ ಅಷ್ಟೇ. ಹೆಂಡತಿ ಮಕ್ಕಳನ್ನು ಹೊಂದಿರುವ ಕೆಲವು ಕಿರಿಸ್ತಾನ ಪಾದರಿಗಳ ಮಾರ್ಗವನ್ನು ಇವರೂ ತುಳಿಯಲಿ ಎಂಬುದು ಇವರ ಇಂಗಿತವೇ ಎಂಬುದು ತಿಳಿದುಬಂದಿಲ್ಲ. ಪೇಜಾವರ ಶ್ರೀಗಳಿಗೆ ನೀಡಿರುವ ಈ ಸಲಹೆ ಈ ಇಳಿವಯಸ್ಸಿನಲ್ಲಿ ವ್ಯರ್ಥ ಶ್ರಮ ಆಗಬಹುದು. ಸಂತಾನ ಅಭಿವೃದ್ಧಿ ವಯಸ್ಸು ಮೀರಿರುವುದರಿಂದ ಇದಕ್ಕೆ ಅವರು ಪರ್ಯಾಯ ಸ್ವಾಮಿಗಳನ್ನು ಬಳಸಬಹುದೆ ಎಂಬುದನ್ನು ವಿವರಿಸಿದರೆ ಭೇಷಿತ್ತು ಅಲ್ಲವಾ....

ಇಫ್ತಾರ್ ಹೊರಕ್ಕೆ!


ರಮಝಾನ್ ಹಬ್ಬದ ಪ್ರಯುಕ್ತ ಇಫ್ತಾರ್ ಔತಣ ಕೂಟವನ್ನು ಏರ್ಪಡಿಸಬೇಕು ಅನ್ನೊ ಸಂಪ್ರದಾಯ ಯಡ್ಡಿ ಸರ್ಕಾರಕ್ಕೆ ಬಿಸಿ ತುಪ್ಪ ಆಗಿ ಪರಿಣಮಿಸಿತು. ಕೊಡಲ್ಲ ಅಂದರೆ 'ಸರ್ಕಾರ ಸಾಬರ ವಿರೋಧಿ' ಅಂತ ಕೂಗ್ತಾರೆ; ಕೊಡ್ತೀವಿ ಅಂದ್ರೆ ಕೇಶವಕೃಪ ಗರಂ ಆಗುತ್ತೆ. ಅದೂ ಇದನ್ನು ಕೊಡೋದು ವಿಧಾನಸೌಧದ ಬಾಂಕ್ವೆಟ್ ಹಾಲಿನಲ್ಲಿ ಅಂದರೆ ಅವರು ಕೆರಳಿ ಕೆಂಡ ಆಗುವುದು ಖಾತರಿ. ದೇವರಾಜ ಅರಸು ಕಾಲದಿಂದಲೂ ಇದೇ ಸಂಪ್ರದಾಯ ಅಂದರೆ ಅದನ್ನ ಮುರೀಲಿ ಅಂತಾನೆ ಅಲ್ಲಾ ನಿನ್ನ ಕುರ್ಚಿ ಮೇಲೆ ಕೂರಿಸಿರೋದು, ನಾವು ಸೂತ್ರ ಹಿಡಿದು ಆಡಿಸ್ತಿರೋದು ಎಂಬುದನ್ನ ನೆನಪಿಗೆ ತರ್ತಾರೆ. ಅದಕ್ಕೆ ಏನು ಮಾಡಿದರು ಮೇಧಾವಿ ಯಡ್ಡಿ ಅಂದರೆ ಶಿವಾಜಿನಗರದ ಖಾಸಗಿ ಸಮುದಾಯ ಭವನದಲ್ಲಿ ಏರ್ಪಡಿಸಿದರು. ಇದಕ್ಕೆ ಸಮಜಾಯಿಷಿಯನ್ನೇನೂ ಕೊಡಬೇಕಾಗಿರಲಿಲ್ಲ. ಜಾಹಿರಾತು ಋಣದಲ್ಲಿ ಬಿದ್ದು ಒದ್ದಾಡುತ್ತಿರೋ ಯಾವ ಪತ್ರಕರ್ತನೂ ಇಂತಹ ಮುಜುಗರದ ಪ್ರಶ್ನೆ ಕೇಳಲ್ಲ ಬಿಡಿ. ಆದರೂ ಜನ ಮೆಚ್ಚಿಸಬೇಕಲ್ಲ, 'ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಸರಣಿ ಬಾಂಬ್ ಸ್ಫೋಟದ ಹಿನ್ನೆಲೆಯಲ್ಲಿ ರಕ್ಷಣೆಯ ದೃಷ್ಟಿಯಿಂದ ಹೀಗೆ ಮಾಡಲಾಯಿತು' ಅಂತ ಹೇಳಿಕೆ ನೀಡಿಸಿದರು. ಯಾರಿಂದ ಅಂತೀರಿ, ತಮ್ಮ ಮುದ್ದಿನ ಗುಲಾಮ ಮಂತ್ರಿ ಮಮ್ತಾಜ್ ಅಲಿಖಾನ್ ಅವರ ಬಾಯಿಂದ! ಅಷ್ಟೇ ಅಲ್ಲ ಸ್ಥಳೀಯ ಮುಖಂಡರಿಗೆ ಹಾರ ಹಾಕುವ ನೆಪದಲ್ಲಿ ಸಂಪ್ರದಾಯಿಕ ನಮಾಜ್‌ನಿಂದಲೂ ತಪ್ಪಿಸಿಕೊಂಡರು. ಅಲ್ಲಾ ಮತ್ತೆ ಇವರು ನಮಾಝ್ ಮಾಡಿದರೆ ಹಿಂದೂ ದೇವರಿಗೆ ಅವಮಾನ ಆಗಲ್ವಾ! 'ವಸುದೈವ ಕುಟುಂಬಕಂ' ಅಂತ ಚೀರಾಡೋ ಚೆಡ್ಡಿ ಇದು!

■ ಹೆಚ್.ಎಲ್. ಕೇಶವಮೂರ್ತಿ



Quote-Unquote

ಅಮೆರಿಕದಲ್ಲಿ ಸೃಷ್ಟಿಯಾಗಿರುವ ಆರ್ಥಿಕ ಬಿಕ್ಕಟ್ಟಿನಿಂದ ಬೆಂಗಳೂರಿನ ಟೆಕ್ಕಿಗಳೂ ಕಂಗೆಟ್ಟಿದ್ದಾರೆ. ಯಾವ ಮಟ್ಟಕ್ಕೆಂದರೆ ಸಿಲ್ವರ್ ಮೇನರ್, ಗೋಲ್ಡನ್ ಎನ್‌ಕ್ಲೇವ್ ಮತ್ತು ಪ್ಲಾಟಿನಮ್ ಸಿಟಿ ಎಂಬಂತಹ 20 ಕೋಟಿ ರೂಪಾಯಿ. ಬೆಲೆ ಬಾಳುವ ಅರಮನೆಗಳನ್ನು ಕೊಳ್ಳುತ್ತಿದ್ದ ಟೆಕ್ಕಿಗಳು ಈಗ 20 ಲಕ್ಷ ರೂಪಾಯಿ ಬೆಲೆ ಬಾಳುವ ಮನೆಗಳನ್ನು ಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲ, ಇತ್ತೀಚಿನವರೆಗೂ ತಮ್ಮ ಸಂಬಳದಲ್ಲಿ ಪ್ರತಿ ವರ್ಷ 30 ರಷ್ಟು ಉಲ್ಬಣ ಕಾಣುತ್ತಿದ್ದ ಟೆಕ್ಕಿಗಳು ಈಗ ಸಾಮಾನ್ಯರಂತೆ ಶೇ. 1 ರಷ್ಟು ಉಲ್ಬಣ ಕಂಡರೇ ಹೆಚ್ಚುಗಾರಿಕೆಯಾಗಿದೆ.



ಸ್ವತಃ ವಿಪ್ರೋದ ಮಾಲೀಕ ಅಜೀಮ್ ಪ್ರೇಮ್‌ಜಿ ತಮ್ಮ ಸಂಸ್ಥೆಯ ಟಾಯ್ಲೆಟ್‌ನಲ್ಲಿರುವ ಟಾಯ್ಲೆಟ್ ಪೇಪರ್‌ರನ್ನು ಕಡಿಮೆ ಮಾಡಿಸಿದ್ದಾರಲ್ಲದೆ ಪ್ರತಿ ನೌಕರನೂ ಹೊರಡುವ ಮುನ್ನ ದೀಪಗಳನ್ನಲ್ಲದೆ ಹವಾನಿಯಂತ್ರಣ ಯಂತ್ರಗಳನ್ನು ಬಂದ್ ಮಾಡಬೇಕು ಎಂಬ ಸುತ್ತೋಲೆ ಹೊರಡಿಸಿದ್ದಾರೆ.

-ಸೋತಾ ರೈ, ಸಿಲಿಕಾನ್ ಡಾಟ್‌ಕಾಮ್ ವೆಬ್‌ಸೈಟ್‌ನಲ್ಲಿ

ಭಜರಂಗದಳದ ಧ್ಯೇಯ "ಸೇವೆ, ಸುರಕ್ಷತೆ ಮತ್ತು ಸಂಸ್ಕೃತಿ". ಆದರೆ ಅವರ ಪ್ರಕಾರ, ಸೇವೆ ಎಂದರೆ ಕ್ರಿಶ್ಚಿಯನ್ನರಿಗೆ ಬದುಕೆಂಬ ಯಾತನೆಯಿಂದ ಮೋಕ್ಷ ಸಿಗುವಂತೆ ಮಾಡುವುದಾಗಿದೆ. ಅದರಲ್ಲೂ 'ಹಿಂದೂ' ಸಂಪ್ರದಾಯದಂತೆ ಕ್ರಿಶ್ಚಿಯನ್ನರನ್ನು ಚಿತೆ ಇಲ್ಲದೆ ದಹಿಸುವುದೆಂದರೆ ಇನ್ನೂ ಹೆಚ್ಚು ಸೇವೆ ಮಾಡಿದಂತೆಯೇ ಅರ್ಥ. ಈ ಹಿಂದೆ ಕರ್ 'ಸೇವೆ' ಹೆಸರಲ್ಲಿ ಬಾಬ್ರಿ ಮಸೀದಿಯನ್ನು ಉರುಳಿಸಿದವರು ಭಜರಂಗಿಗಳು.


ಇನ್ನು ಭಜರಂಗದಳದ ಪ್ರಕಾರ ಸುರಕ್ಷತೆ ಎಂದರೆ ಮುಸಲ್ಮಾನರ ಮತ್ತು ಕ್ರಿಶ್ಚಿಯನ್ನರ ಮೇಲೆ ದಾಳಿ ನಡೆಸುವುದೇ ಆಗಿದೆ. ಹಾಗೆಯೇ ಸಂಸ್ಕೃತಿ ಎಂಬುದು ಗ್ಯಾಲರಿಗಳಲ್ಲಿ, ಚಿತ್ರಮಂದಿರಗಳಲ್ಲಿ, ರಂಗಭೂಮಿಗಳಲ್ಲಿ ವ್ಯಕ್ತವಾಗುವ ಕಲಾಕೃತಿಗಳನ್ನು ನಾಶಪಡಿಸುವುದು, ಪಾರ್ಕ್‌ಗಳ ಸಂದಿಗಳಲ್ಲಿ ಏಕಾಂತತೆ ಬಯಸುವ ಪ್ರೇಮಿಗಳ ಮೇಲೆ ದಾಳಿ ಮಾಡುವುದೇ ಆಗಿದೆ.

-ನೀಲಭ್ ಮಿಶ್ರ, 'ಔಟ್‌ಲುಕ್' ಹಿಂದಿ ಪತ್ರಿಕೆಯ ಸಂಪಾದಕ

ಭಾರತ ಮತ್ತು ಅಮೆರಿಕ ನಡುವಿನ ಅಣುಒಪ್ಪಂದಕ್ಕೆ ಅಮೆರಿಕದ ಸೆನೆಟ್‌ನಿಂದ ಅಂಗೀಕಾರ ಸಿಕ್ಕಿರುವುದರಿಂದ ಭಾರತ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡಿದೆ ಎಂದು ಎಡ ಮತ್ತು ಬಲ ಪಕ್ಷಗಳು ಹೇಳಿವೆ. ಅವರು ಹೇಳಿರುವಂತೆ ನಾವೀಗ ಸ್ವಾತಂತ್ರ್ಯ ಸಂಗ್ರಾಮವನ್ನು ಪ್ರಾರಂಭಿಸಬೇಕಿದೆ. ಈ ಸಂಗ್ರಾಮ ಯಶಸ್ವಿಯಾಗುವುದಕ್ಕೆ ಎಡ ಮತ್ತು ಬಲಪಕ್ಷಗಳು ಒಂದುಗೂಡಬೇಕಿದೆ. ಇದರ ಮುಂದಾಳತ್ವವನ್ನು ಬಿಜೆಪಿಯ ಅರುಣ್ ಶೌರಿ ಮತ್ತು ಕಮ್ಯುನಿಸ್ಟ್ ಪಕ್ಷದ ಪ್ರಕಾಶ್ ಕಾರಟ್ ವಹಿಸಲಿ ಎಂದು ನಾವು ಆಶಿಸಬೇಕಿದೆ. ಅವರಿಬ್ಬರೂ ಜೊತೆಗೂಡಿ 'ಲೆಫ್ಟ್, ರೈಟ್, ಲೆಫ್ಟ್, ರೈಟ್' ಎಂದು ಹೆಜ್ಜೆ ಇಡಬೇಕಿದೆ.

-ರಾಜೆಂದರ್ ಪೂರಿ, ಇಂಗ್ಲಿಷ್ ಅಂಕಣಕಾರ

ಜಗತ್ತಿನ ಅತಿ ಸುಂದರವಾದ ಕಟ್ಟಡಗಳಲ್ಲಿ 17 ನೇ ಶತಮಾನದಲ್ಲಿ ನಿರ್ಮಿಸಲ್ಪಟ್ಟ ತಾಜ್ ಮಹಲ್ ಕೂಡ ಒಂದು. ಇದು ಎಷ್ಟು ಅದ್ಭುತವಾಗಿದೆ ಎಂದರೆ ಅದನ್ನು ನಿರ್ಮಿಸಿದ್ದು ತಾವು ಎಂದು ಹಲವಾರು ಸಮುದಾಯಗಳು ಹಿಂದಿನಿಂದಲೂ ಪ್ರತಿಪಾದಿಸುತ್ತಾ ಬಂದಿವೆ. ಈ ಪ್ರವೃತ್ತಿ ಪ್ರಾರಂಭಗೊಂಡಿದ್ದು ಈಸ್ಟ್ ಇಂಡಿಯಾ ಕಂಪನಿಯವರಿಂದ. ಅವರು ತಾಜ್ ಮಹಲ್‌ನ ಚಿತ್ರಗಳಲ್ಲಿ ಅದರ ಸುತ್ತಲೂ ಭಾರತಕ್ಕೆ ಅಪರಿಚಿತವಾದ, ಆದರೆ ಇಂಗ್ಲೆಂಡಿನಲ್ಲಿ ಕಂಡುಬರುವಂತಹ ಮರಗಿಡಗಳನ್ನು ಚಿತ್ರಿಸಿದರು. ಅದರಲ್ಲೂ ಡೀನಿಯಲ್ಸ್ ಎಂಬ ಕಲಾವಿದ ಬಿಡಿಸಿರುವ ತಾಜ್ ಮಹಲ್ ಚಿತ್ರಗಳನ್ನು ನೋಡಿದರೆ ಅದು ಭಾರತದಲ್ಲೇ ಇಲ್ಲ, ಬದಲಾಗಿ ಇಂಗ್ಲೆಂಡಿನ ಯಾವುದೋ ಪ್ರದೇಶದಲ್ಲಿದೆ ಎಂದೇ ಭಾಸವಾಗುತ್ತದೆ.



ಈಸ್ಟ್ ಇಂಡಿಯಾ ಕಂಪನಿ ಹೋಗಿ ಅದರ ಜಾಗದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಆಡಳಿತ ಬಂದಾಗಲೂ ಇದು ಇನ್ನೊಂದು ರೀತಿಯಲ್ಲಿ ಮುಂದುವರೆದಿತ್ತು. ಭಾರತೀಯರು ಅನಾಗರಿಕರು, ಸಂಸ್ಕೃತಿಹೀನರು ಎಂದೇ ನಂಬಿದ್ದ ಬಿಳಿಯರಾದ ತಾವು ಇತರೆ ಜನಾಂಗಗಳಿಗಿಂತ ಶ್ರೇಷ್ಠರು ಎಂದೇ ಪ್ರತಿಪಾದಿಸುತ್ತಿದ್ದ ವಿಕ್ಟೋರಿಯಾ ಕಾಲದ ಜನ ಒಂದು ಹೊಸ ಸಿದ್ಧಾಂತವನ್ನೇ ಮುಂದಿಟ್ಟರು. ಅದರ ಪ್ರಕಾರ ತಾಜ್‌ಮಹಲ್–ಇದು ಯಾವುದೇ ರೀತಿಯಿಂದಲೂ ಯುರೋಪಿನ ವಾಸ್ತುಶಿಲ್ಪ ಶೈಲಿಯಿಂದ ಪ್ರಭಾವಿತವಾಗಿರದಿದ್ದರೂ– ಕಟ್ಟಡದ ವಾಸ್ತುಶಿಲ್ಪವನ್ನು ರೂಪಿಸಿದ್ದು ಬೋರ್ಡೋದ ಆಸ್ಟಿನ್ ಅಥವಾ ಗೆರೋನಿಮೋ ವೆರೋನಿಯೊ ಎಂಬ ಯೂರೋಪಿನ ವಾಸ್ತುಶಿಲ್ಪಿಗಳು. ಇದಕ್ಕೆ ಅವರು ಕೊಟ್ಟ ಕಾರಣ ತಾಜ್‌ಮಹಲ್ ನಿರ್ಮಾಣವಾದ ಸಂದರ್ಭದಲ್ಲಿ ಅವರಿಬ್ಬರೂ ಆಗ್ರಾದ ಹತ್ತಿರವೇ ವಾಸವಾಗಿದ್ದರು ಎಂಬುದು. ಇದರ ಹಿಂದಿದ್ದ ಕುತರ್ಕ ಇಷ್ಟೇ: ತಮ್ಮ ಎಲ್ಲಾ ವಾಸ್ತುಶಿಲ್ಪವನ್ನು ಮೀರಿಸುವಂತಹ ಕಟ್ಟಡ ಭಾರತದಲ್ಲಿ ನಿರ್ಮಾಣವಾಗಿದ್ದು.

ಇನ್ನು ತಾವು ಅತಿಯಾಗಿ ದ್ವೇಷಿಸುವ ಮುಸಲ್ಮಾನರು ಇಂತಹ ಸುಂದರ ಕಟ್ಟಡವನ್ನು ಕಟ್ಟಿಸಿದ್ದರು ಎಂಬುದರ ಬಗ್ಗೆ ಹಿಂದೂತ್ವವಾದಿಗಳಿಗೆ ಹಿಂದಿನಿಂದಲೂ ಹೊಟ್ಟೆಯುರಿ ಇದೆ. ಆದ್ದರಿಂದ ಅವರು ಅದಕ್ಕೊಂದು ಸುಳ್ಳು ಇತಿಹಾಸವನ್ನೇ ಸೃಷ್ಟಿಸಲು ಹಲವು ಬಾರಿ ಪ್ರಯತ್ನಿಸಿದ್ದಾರೆ. 1976 ರಲ್ಲಿ ರಾಮನಾಥ್ ಎಂಬ ವಾಸ್ತುಶಿಲ್ಪಿ ತಾಜ್‌ಮಹಲ್ ಮೊಘಲ್–ಟಿಮುರಿದ್ ವಾಸ್ತುಶಿಲ್ಪ ಶೈಲಿಯಲ್ಲಿದ್ದರೂ "ಅದು ಇಸ್ಲಾಮ್ ಕಟ್ಟಡವೇ ಅಲ್ಲ, ಬದಲಾಗಿ ಹಿಂದೂಗಳ ವಾಸ್ತು ಪ್ರಕಾರ ನಿರ್ಮಾಣವಾಗಿರುವಂತಹದ್ದು" ಎಂದು ವಾದಿಸಿದ್ದ. ಆತನ ನಂತರ ಪಿ.ಎನ್.ಓಕ್ ಎಂಬ ಮತ್ತೋರ್ವ ಪೆದ್ದ ಮತ್ತಷ್ಟು ಸುಳ್ಳು ಇತಿಹಾಸವನ್ನು ಸೃಷ್ಟಿಸಿದ. ಅವನ ಪ್ರಕಾರ: ತಾಜ್‌ಮಹಲ್ ಮಾತ್ರವಲ್ಲ ಏಷಿಯಾದ್ಯಂತ ಇರುವ ಎಲ್ಲಾ ಇಸ್ಲಾಮಿಕ್ ಕಟ್ಟಡಗಳು ಹಿಂದೂ ನಾಗರಿಕತೆಯಿಂದಲೇ ಪ್ರಭಾವಗೊಂಡಿವೆ; ಅದಕ್ಕೆ ಕಾರಣ ಹಿಂದೊಮ್ಮೆ ಹಿಂದೂ ನಾಗರಿಕತೆ ಇಡೀ ಜಗತ್ತಿನಾದ್ಯಂತ ಹರಡಿಕೊಂಡಿತ್ತು; ಅರ್ಜೆಂಟೈನಾ ದೇಶದ ಹೆಸರು ಬಂದಿರುವುದೇ ಮಹಾಭಾರತದ ಅರ್ಜುನನಿಂದ; ಇಂಗ್ಲೆಂಡಿನ ಸಾಲಿಸ್‌ಬರಿ ಹಿಂದಿನ ಕಾಲದಲ್ಲಿ ಶೈಲೀಶ್ ಪುರಿ ಎಂದಾಗಿತ್ತು ಮತ್ತು ಅಲ್ಲೊಂದು ಶಿವನ ದೇವಸ್ಥಾನವಿತ್ತು; ಲಂಡನ್‌ನಲ್ಲಿರುವ ಅರಮನೆ ವೆಸ್ಟ್‌ಮಿನಿಸ್ಟರ್ ಅಬ್ಬೆ ಕೂಡ ಶಿವನ ದೇವಸ್ಥಾನವಾಗಿತ್ತು; ಪ್ರಾಚೀನ ಇಟಲಿ ಕೂಡ ಹಿಂದೂ ದೇಶವಾಗಿದ್ದು ಪೋಪ್ ಕೂಡ ಹಿಂದೂ ಅರ್ಚಕನಾಗಿದ್ದ!

ಇಂತಹ ತರ್ಕವಿಲ್ಲದ ವಿಶ್ಲೇಷಣೆಗಳನ್ನು ಆಧರಿಸಿಯೇ ಇವತ್ತು ಭಜರಂಗದಳದ ಮಂಗಗಳು ತಾಜ್‌ಮಹಲ್ ಅನ್ನು ತೇಜೋಬಾಯಿ ಮಹಲ್ ಎಂದು ಮರುನಾಮಕರಣ ಮಾಡಬೇಕು, ಅದನ್ನು ಹಿಂದೂ ದೇವಸ್ಥಾನವಾಗಿ ಪರಿವರ್ತಿಸಬೇಕು ಎಂದು ವಾದಿಸುತ್ತಿದ್ದಾರೆ.

ಇಂತಹ ಹುಚ್ಚುತನಕ್ಕೆ ಏನೆನ್ನಬೇಕು?

-ತಾಜ್‌ಮಹಲ್ ಕುರಿತು ಗೈಲ್ಸ್ ಟಿಲ್ಲಾಟ್‌ಸನ್ ಎಂಬುವವರು ಬರೆದಿರುವ ಹೊಸ ಪುಸ್ತಕದಿಂದ

ಲಂಕೇಶ್

ರಾಜ್ಯಕ್ಕೆ ಟಾಟಾ ಬರಲಿದ್ದಾನೆ, ಜೋಕೆ!



ಕಂಡಹಾಗೆ

■ ಗೌರಿ ಲಂಕೇಶ್


ಇದೆಂತಹ ವಿಪರ್ಯಾಸ ನೋಡಿ. ಎರಡು ...ರ್ಷಗಳಿಂದ ತಮ್ಮ ಭೂಮಿಗಾಗಿ ನಿರಂತರ ಹೋರಾಟ ...ಸಿದ ಪಶ್ಚಿಮ ಬಂಗಾಳದ ಸಿಂಗೂರಿನ ರೈತರು ಕೊನೆಗೂ ...ಲ್ಲಿಂದ ರತನ್ ಟಾಟಾ ಎಂಬ ಕಪಟ ಉದ್ಯಮಿಯನ್ನು ...ಸುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ನಮ್ಮ ಮಾಧ್ಯಮ ...ು ಇದು ಜನರ ಹೋರಾಟದ ಯಶಸ್ಸು ಎಂದು ...ಕೊಳ್ಳದೆ, ಇದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ...ರತದ ಹೆಸರಿಗೆ ಕಳಂಕವಾಗಿದೆ, ಬಂಡವಾಳಶಾಹಿಗಳು ...ದರಿದ್ದಾರೆ, ಇದರಿಂದ ಭಾರತಕ್ಕೆ ದೊಡ್ಡ ನಷ್ಟವಾಗಿದೆ ...ಂದೇ ಬಣ್ಣಿಸಿವೆ.

ರತನ್ ಟಾಟಾ ಸಿಂಗೂರಿಗೆ ಟಾಟಾ ಹೇಳಿದ್ದರಿಂದ ...ಶ್ಚಿಮ ಬಂಗಾಳದ ಸಿಪಿಎಂ ಸರ್ಕಾರ ಜನರ ವಿರುದ್ಧ ...ಷ್ಟು ಕೆಂಡಕಾರುತ್ತಿದೆ ಅಂದರೆ ಮೊನ್ನೆ ಸಿಂಗೂರಿನಲ್ಲಿ ...ಂದ್ ಕರೆ ನೀಡಿತ್ತು, ಅದಕ್ಕೆ ಜನ ಪ್ರತಿಕ್ರಿಯಿಸದೆ ಇದ್ದಾಗ ... ಗೂಂಡಾಗಳನ್ನು ಬಿಟ್ಟು ಬಲವಂತದಿಂದ ಬಂದ್ ...ಚರಿಸಲು ಹವಣಿಸಿತು. ಅದೂ ನಡೆಯದೇ ಇದ್ದಾಗ ...ಲ್ಲಿನ ಕೈಗಾರಿಕಾ ಮಂತ್ರಿ ಸಿಟ್ಟಿಗೆದ್ದು "ಟಾಟಾ ಇಲ್ಲಿಂದ ...ೋದರೇನಂತೆ. ರೈತರಿಂದ ಈಗಾಗಲೇ ಪಡೆದಿರುವ ...ೂಮಿಯನ್ನು ಯಾವುದೇ ಕಾರಣಕ್ಕೂ ವಾಪಸ್ಸು ಕೊಡು...ಲ್ಲ, ಆ ಜಾಗವನ್ನು ಬೇರೆ ಕಾರ್ಖಾನೆಗಳಿಗೆ ನೀಡುತ್ತೇವೆ. ...ಗೊಮ್ಮೆ ತಮ್ಮ ಭೂಮಿ ವಾಪಸ್ಸು ಬೇಕು ಎಂದು ...ರು ಹೋರಾಟ ಪ್ರಾರಂಭಿಸಿದರೆ ಅವರನ್ನು ಮಟ್ಟಹಾಕು...ವೆ" ಎಂದು ಗುಡುಗಿದ್ದಾನೆ. ಇದೆಂತಹ ಪ್ರಜಾಪ್ರಭುತ್ವ ...ಮ್ಯುನಿಸ್ಟರು ಅದೆಷ್ಟು ಕಾರ್ಮಿಕ-ರೈತರ ಪರ?!

ಒಂದು ಲಕ್ಷ ರೂಪಾಯಿಯ ಈ ನ್ಯಾನೋ ಕಾರ್ ...ೋಜನೆಯ ಹಿಂದೆ ರತನ್ ಟಾಟಾನ ಸಾಮ್ರಾಜ್ಯದ ...ಾರುಕಟ್ಟೆ ವಿಸ್ತರಣೆ ಸಂಚು ಇದೆಯೇ ಹೊರತು ಇದರಲ್ಲಿ ...ಪರವಾದ ಯಾವ ಅಂಶವೂ ಇಲ್ಲ ಎಂದು ಕಳೆದ ...ಸಂಬರ್ ಮತ್ತು ಜನವರಿಯಲ್ಲಿ ಶಿವಸುಂದರ್ ಅವರು ...ಮ್ಮ 'ಚಾರ್ವಾಕ' ಅಂಕಣದಲ್ಲಿ ವಿವರಿಸಿದ್ದರು. ಆದ್ದರಿಂದ ...ಲ್ಲಿ ನ್ಯಾನೋ ಕಾರ್, ಟಾಟಾನ ಮಾರುಕಟ್ಟೆ ಇತ್ಯಾದಿಗಳ ...ಗ್ಗೆ ಬರೆಯುವ ಬದಲಾಗಿ ಸಿಂಗೂರಿನ ಜನರ ...ೋರಾಟದ ಬಗ್ಗೆ, ಅದಕ್ಕೆ ಪ್ರಾಣತೆತ್ತ ರೈತರ ಬಗ್ಗೆ, ...ಟಾಟಾನ ವಂಚನೆ ಬಗ್ಗೆ ಮತ್ತು ಸಿಪಿಎಂನ ದುಷ್ಟತನದ ...ಗ್ಗೆ ಬರೆಯಬೇಕೆನ್ನಿಸುತ್ತಿದೆ. ಅದಕ್ಕೆ ಕಾರಣ: ಇದೇ ...ಟಾಟಾನನ್ನು ಯಡಿಯೂರಪ್ಪ ಕರ್ನಾಟಕಕ್ಕೆ ಆಹ್ವಾನಿಸುತ್ತಿರು...ದು.

ರತನ್ ಟಾಟಾ ಒಂದು ಸಂದರ್ಶನದಲ್ಲಿ "ಪ್ರತಿ ...ತ್ರಿ ನಾನು ನಿದ್ದೆಗೆ ಜಾರುವ ಮುನ್ನ ನಾನು ಯಾರಿಗೂ ...ನ್ಯಾಯ, ನೋವು ಉಂಟು ಮಾಡಿಲ್ಲ ಎಂಬ ಮನಃಸಾಕ್ಷಿ ...ದಾಗಿರಬೇಕು. ಇಲ್ಲವೆಂದರೆ ನನಗೆ ನಿದ್ದೆಯೇ ಬರುವು...ಲ್ಲ" ಎಂದು ಹೇಳಿದ್ದರು. ಆದರೆ ಅವರು ಸಿಪಿಎಂ ...ಜೊತೆಗೂಡಿ ಸಿಂಗೂರಿನ ರೈತರಿಗೆ ಮಾಡಲು ಹೊರಟಿದ್ದು ...ನ್ಯಾಯ, ಮೋಸ ಮತ್ತು ಅಪಾರ ನೋವು, ಸಂಕಷ್ಟ. ...ಹತ್ತೊಂಭತ್ತನೆ ಶತಮಾನದಲ್ಲಿ ಚೀನಾ ದೇಶಕ್ಕೆ ...ಫೀಮನ್ನು ರಫ್ತು ಮಾಡುವ ಮೂಲಕ ಜನ್ಮವೆತ್ತಿದ ...ಟಾಟಾ ಕಂಪನಿ ಇವತ್ತು ಭಾರತದ ಅತಿ ಹಳೆಯ ಮತ್ತು ... ಬಲಿಷ್ಠ ಸಂಸ್ಥಾನವಾಗಿದೆ. ಅದಕ್ಕಿಂತ ಮಿಗಿಲಾಗಿ ...ಗೆ ಸಾಮಾಜಿಕ ಜವಾಬ್ದಾರಿಯೂ ಇದೆ ಎಂದೇ ತನ್ನ ...ನ್ನು ತಟ್ಟಿಕೊಳ್ಳುವ ಸಂಸ್ಥಾನವೂ ಇದಾಗಿದೆ.

2006 ರಲ್ಲಿ ರತನ್ ಟಾಟಾ ಒಂದು ಲಕ್ಷ ...ರೂಪಾಯಿಯ ನ್ಯಾನೊ ಕಾರ್ ಮಾಡಲು ಹೊರಟಾಗ ...ನನ್ನು ಕೂಡಲೇ ಸ್ವಾಗತಿಸಿದ್ದು ಆಗತಾನೆ ಚುನಾವಣೆಯಲ್ಲಿ ...ದ್ದು ಮುಖ್ಯಮಂತ್ರಿ ಗದ್ದುಗೆಯನ್ನೇರಿದ್ದ ಬುದ್ಧದೇವ್ ...ಭಟ್ಟಾಚಾರ್ಯ. ಕೊಲ್ಕತ್ತಾದಿಂದ ಕೇವಲ 40 ಕಿ.ಮೀ. ...ದೂರವಿದ್ದ, ಪ್ರಮುಖ ಹೆದ್ದಾರಿಯ ಪಕ್ಕದಲ್ಲೇ ಇದ್ದ, ...ಲೈನ್ ಹತ್ತಿರದಲ್ಲೇ ಸಾಗುತ್ತಿದ್ದ, ತನ್ನ ಸಿಪಿಎಂ ...ಗೆ ತಮ್ಮ ಮತ ನೀಡದೆ ತೃಣಮೂಲ್ ಪಕ್ಷವನ್ನು ...ಕ್ಷೇತ್ರದಿಂದ ಗೆಲ್ಲಿಸಿದ್ದ, ಸಾವಿರಾರು ರೈತರು ತಮ್ಮ ...ಬದುಕಿಗೆ ಅವಲಂಬಿಸಿದ್ದ ಫಲವತ್ತಾದ ಭೂಮಿಯನ್ನು ...ಹೊಂದಿದ್ದ ಸಿಂಗೂರನ್ನು ಟಾಟಾನಿಗೆ ಕೊಡಲು ...ಭಟ್ಟಾಚಾರ್ಯ ಮುಂದಾದರು.



ಸಿಂಗೂರ್ ರೈತರಿಗೆ ಲಾರಿ ಏಟು

ಭಟ್ಟಾಚಾರ್ಯ ಮಾಡಿದ ತಪ್ಪು ಏನೆಂದರೆ ಸಿಂಗೂರಿನ ಜನರ ಒಪ್ಪಿಗೆಯನ್ನಾಗಲಿ, ಸಹಕಾರವನ್ನಾಗಲಿ ಪಡೆಯದಿದ್ದದ್ದು. ಮಾತ್ರವಲ್ಲ ಅವರಿಗೆ ಪುನರ್ ವಸತಿ ಯೋಜನೆಗಳನ್ನು ರೂಪಿಸದೆ ಕೊಟ್ಟ ಕಾಸನ್ನು ಪಡೆದು ಜಾಗ ಖಾಲಿ ಮಾಡಿ ಎಂದು ಆದೇಶಿಸಿದ್ದು. ಅಷ್ಟೇ ಅಲ್ಲದೆ, ಮಾರುಕಟ್ಟೆ ದರಕ್ಕಿಂತ ಕಡಿಮೆ ಹಣ ಕೊಟ್ಟಿದ್ದು ಮತ್ತು ಕೂಲಿ ಕಾರ್ಮಿಕರನ್ನು ಹಾಗೂ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದವರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದು.

ಸರ್ಕಾರದ ಈ ಧೋರಣೆ ವಿರುದ್ಧ ರೈತರು ಸಿಡಿದೆದ್ದರು. ಅವರೆಲ್ಲ ಸಿಂಗೂರ್ ಕೃಷಿಕ ಜಮೀನು ರಕ್ಷಣಾ ಸಮಿತಿ ಅಡಿ ಸಂಘಟಿತರಾಗಿ ಯಾವುದೇ ಕಾರಣಕ್ಕೂ ತಮ್ಮ ಭೂಮಿಯನ್ನು ತೊರೆಯುವುದಿಲ್ಲ ಎಂದು ಪ್ರತಿಭಟಿಸಲಾರಂಭಿಸಿದರು. ಈ ಪ್ರಕರಣದಲ್ಲಿ ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳಬಹುದೆಂಬ ಆಶಯದಿಂದ ತೃಣಮೂಲ್ ಕಾಂಗ್ರೆಸ್ ಪಕ್ಷದ ನಾಯಕಿ ಮಮತಾ ಬ್ಯಾನರ್ಜಿ ಹಾಜರಾಗಿ ಜನಪ್ರತಿಭಟನೆಯ ಮುಂದಾಳತ್ವ ವಹಿಸಿಕೊಂಡರು.

ಟಾಟಾಗೆ ಹೇಗಾದರೂ ಮಾಡಿ ಸಿಂಗೂರ್‌ಅನ್ನು ದಕ್ಕಿಸಿಕೊಳ್ಳಬೇಕಿತ್ತು, ಅದಕ್ಕೆ ಕಾರಣಗಳೂ ಇದ್ದವು. ಇವತ್ತು ಟಾಟಾ ಸಂಸ್ಥೆಗೆ ಲಕ್ಷ್ಮಿ ಮಿತ್ತಲ್, ವೇದಾಂತ, ಹಿಂದೂಜಾ ತರಹದ ಇತರೆ ಸ್ಟೀಲ್ ಕಂಪನಿಗಳಿಂದ ಅಪಾರ ಪೈಪೋಟಿ ಇದೆ. ಈ ಪೈಪೋಟಿಯಲ್ಲಿ ಕಂಪನಿಗಳು ಮತ್ತು ಅವುಗಳೊಂದಿಗೆ ಕೈಜೋಡಿಸುತ್ತಿರುವ ರಾಜಕಾರಣಿಗಳು ಉದ್ಧಾರವಾಗುತ್ತಿದ್ದಾರೆ. ಆದರೆ ಸಾಮಾನ್ಯ ಜನರು ಮಾತ್ರ ಬಲಿಯಾಗುತ್ತಿದ್ದಾರೆ.



ಟಾಟಾ ಮತ್ತು ನ್ಯಾನೋ

ಉದಾಹರಣೆಗೆ ಇದೇ ರತನ್ ಟಾಟಾ ಎರಡು ವರ್ಷಗಳ ಹಿಂದೆ ಒರಿಸ್ಸಾದಲ್ಲಿನ ಕಳಿಂಗನಗರ್ ಎಂಬ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಮುಂದಾಗಿದ್ದ. ಈ ಗಣಿಗಾರಿಕೆಯಿಂದ ಟಾಟಾನಿಗೆ ಲಾಭವಾಗುತ್ತದೆ, ಆದರೆ ತಮ್ಮ ಬದುಕೇ ನಾಶವಾಗುತ್ತದೆ ಎಂದು ಅರಿತ ಕಳಿಂಗ ನಗರದ ಬಡ ನಿವಾಸಿಗಳು ಪ್ರತಿಭಟಿಸಿದರು. ಟಾಟಾ ಕಂಪನಿ ಕಳುಹಿಸಿದ್ದ ಜೆಸಿಬಿ ಯಂತ್ರಗಳ ಮುಂದೆ ತಮ್ಮ ಎದೆಯೊಡ್ಡಿ ನಿಂತರು. ಆದರೆ ಟಾಟಾನ ಗುಲಾಮನಂತೆ ವರ್ತಿಸಿದ ಒರಿಸ್ಸಾ ಸರ್ಕಾರ ಅವರ ಮೇಲೆ ಗುಂಡು ಹಾರಿಸಿ 13 ಜನರನ್ನು ಕೊಂದು ಹಾಕಿತು. ರತನ್ ಟಾಟಾನ ಕೈ ರಕ್ತಮಯವಾಯಿತು. ಆತನ ವಿರುದ್ಧ ರೊಚ್ಚಿಗೆದ್ದ ಕಳಿಂಗನಗರದ ಜನ ಇವತ್ತಿಗೂ ತಮ್ಮ ಪ್ರದೇಶದ ಎಲ್ಲಾ ಮುಖ್ಯ ರಸ್ತೆಗಳನ್ನು ಬಂದ್ ಮಾಡಿದ್ದಾರೆ. ಅಲ್ಲಿಗೆ ಭ್ರಷ್ಟ ಸರ್ಕಾರವಾಗಲಿ, ಕುತಂತ್ರಿ ಟಾಟಾ ಆಗಲಿ ಬಾರದಂತೆ ನೋಡಿಕೊಂಡಿದ್ದಾರೆ. ಇದೇ ರೀತಿ ಒರಿಸ್ಸಾದ ಗೋಪಾಲ ನಗರದಲ್ಲಿ ಟಾಟಾ ವಿರುದ್ಧ ಜನ ಸೆಟೆದೆದ್ದರು. ಅವರನ್ನು ಓಲೈಸಿಕೊಳ್ಳಲು ಟಾಟಾ 'ಟಾಟಾ ಫ್ಯಾಮಿಲಿ' ಎಂಬ ನಾಟಕ ಪ್ರಾರಂಭಿಸಿ ಎಲ್ಲರಿಗೂ ಉದ್ಯೋಗ, ಶಿಕ್ಷಣ, ಆರೋಗ್ಯ ಸೇವೆ ನೀಡುವುದಾಗಿ ಹೇಳಿದ. ಆದರೆ ಗೋಪಾಲನಗರದ ಜನರೂ ಟಾಟಾನಿಗೆ ನಮಸ್ಕಾರ ಹೇಳಿ ಅಲ್ಲಿಂದ ಕಳುಹಿಸಿದ್ದಾರೆ.

ಒರಿಸ್ಸಾ ನಂತರ ಛತ್ತೀಸಘಡದ ಬಸ್ತರ್ ಎಂಬ ಸುಂದರ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಟಾಟಾ ಮುಂದಾದ. ಆಗ ಬಸ್ತರ್‌ನ 1,600 ಜನ ಟಾಟಾನ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದರು. ಟಾಟಾನ ಸ್ಟೀಲ್ ಕಂಪನಿಯಿಂದಾಗಿ ತಮ್ಮ ಪಿತ್ರಾರ್ಜಿತ ಭೂಮಿ ನಾಶವಾಗಲಿದೆ ಎಂದು ದೂರಿದರು.

ಹೀಗೆ ಎರಡು ರಾಜ್ಯಗಳಲ್ಲಿ ಜನರ ಪ್ರತಿರೋಧದಿಂದ ಮುಖಭಂಗ ಅನುಭವಿಸಿದ ಟಾಟಾ ಪಶ್ಚಿಮ ಬಂಗಾಳದ ಸರ್ಕಾರದ ನೆರವಿನೊಂದಿಗೆ ಗೆದ್ದೇ ಗೆಲ್ಲುತ್ತೇನೆ ಎಂಬ ವಿಶ್ವಾಸದಲ್ಲಿದ್ದ. ಏಕೆಂದರೆ ಬ್ರಿಟಿಷರ ಕಾಲದಲ್ಲಿ 19ನೇ ಶತಮಾನದಲ್ಲಿ ರೂಪಿಸಲಾಗಿದ್ದ ಕಾನೂನಿನಡಿ ರೈತರ ಭೂಮಿಯನ್ನು ಕಸಿದುಕೊಂಡು ಟಾಟಾನಿಗೆ ಕೊಟ್ಟ ಅಲ್ಲಿನ ರಾಜ್ಯ ಸರ್ಕಾರ ಆತನೊಂದಿಗೆ ಯಾವ ತರಹದ ಒಪ್ಪಂದ ಮಾಡಿಕೊಂಡಿದೆ ಎಂಬುದನ್ನೂ 'ಟ್ರೇಡ್ ಸೀಕ್ರೇಟ್' ನೆಪದಲ್ಲಿ ಗೌಪ್ಯವಾಗಿಟ್ಟಿತು. ಈ ಎಲ್ಲ ಅಂಶಗಳು ಹೊರಬೀಳುತ್ತಿದ್ದಂತೆ ಸಿಂಗೂರಿನ ರೈತರಿಗೆ ದೇಶದ ಖ್ಯಾತ ಬರಹಗಾರರು, ಚಿಂತಕರು, ಹೋರಾಟಗಾರರು, ಬುದ್ಧಿಜೀವಿಗಳು ತಮ್ಮ ಬೆಂಬಲವನ್ನು ಸೂಚಿಸಿದರು. ಅಮಾರ್ತ್ಯ ಸೇನ್ ತರಹದ ಹಿರಿಯರು ಕೂಡ "ಆರ್ಥಿಕ ಅಭಿವೃದ್ಧಿಯ ನೆಪದಲ್ಲಿ ದೇಶದಲ್ಲಿ ಅಸಮಾನತೆಯನ್ನು ಹೆಚ್ಚಿಸುವ SEZ ನಂತಹ ಯೋಜನೆಗಳನ್ನು ಪ್ರೋತ್ಸಾಹಿಸಬಾರದು" ಎಂದು ಹೇಳಿದರು.


ಆದರೆ ಇದ್ಯಾವುದಕ್ಕೂ ರತನ್ ಟಾಟಾ ಆಗಲಿ, ಬುದ್ಧದೇವ್ ಭಟ್ಟಾಚಾರ್ಯನಾಗಲಿ ಕಿವಿಗೊಡಲಿಲ್ಲ, ಬದಲಾಗಿ ಸಿಂಗೂರಿನ ರೈತರ ಮೇಲೆ ಪೊಲೀಸರನ್ನು ಮತ್ತು ಸಿಪಿಎಂ ಗೂಂಡಾಗಳನ್ನು ಛೂಬಿಟ್ಟರು. ಅವರಿಗೆ ಮೊದಲು ಬಲಿಯಾದವಳೇ ತಪಸಿ ಮಲ್ಲಿಕ್ ಎಂಬ 18 ವರ್ಷದ ಯುವತಿ. ಬಗರ್‌ಹುಕುಂ ಬೇಸಾಯ ಮಾಡುತ್ತಿದ್ದ ರೈತನ ಮಗಳಾದ ತಪಸಿ ಸಿಂಗೂರ್ ಕೃಷಿಕ ಭೂಮಿ ರಕ್ಷಣಾ ಸಮಿತಿಯ ಸಕ್ರಿಯ ಸದಸ್ಯೆಯಾಗಿದ್ದಳು. ಇನ್ನೂ ಚಿಕ್ಕವಳಾಗಿದ್ದರೂ ಉತ್ಸಾಹದಿಂದ ಮತ್ತು ದಿಟ್ಟತನದಿಂದ ಎಲ್ಲಾ ಪ್ರತಿಭಟನೆಗಳಲ್ಲಿ ಭಾಗವಹಿಸುತ್ತಿದ್ದಳು.

2006, ಡಿಸೆಂಬರ್ 16 ರ ಬೆಳಗಿನ ಜಾವ ಆಕೆ ಬಯಲಿಗೆ ಹೋದಳು. ಆಗ ಅವಳ ಮೇಲೆ ಮುಗಿಬಿದ್ದ ಸಿಪಿಎಂನ ಐವರು ಗೂಂಡಾಗಳು ಅವಳನ್ನು ಟಾಟಾ ಕಂಪನಿ ಬೇಲಿ ಹಾಕಿಕೊಂಡು ಕಾವಲು ಕಾಯುತ್ತಿದ್ದ ಪ್ರದೇಶಕ್ಕೆ ಎಳೆದುಕೊಂಡು ಹೋದರು. ಅಲ್ಲಿ ಅವಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಅವಳ ಕಿಬ್ಬೊಟ್ಟೆಯ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಗುಂಡಿಯೊಂದರಲ್ಲಿ ಅವಳ ಶವವನ್ನು ಬಿಸಾಡಿ ಹೋದರು.

ತಪಸಿ ಮಲ್ಲಿಕ್‌ಳ ಮೇಲಾದದ್ದು ಒಂದು ಅತ್ಯಾಚಾರ ಮತ್ತು ಕೊಲೆ ಎಂದು ಗೊತ್ತಾದರೂ, ರಾಜ್ಯ ಪೊಲೀಸರು ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದೇ ವಾದಿಸಿದರು. ಜನರ ಒತ್ತಡದಿಂದ ಈ ಪ್ರಕರಣದ ವಿಚಾರಣೆಯನ್ನು ಸಿಬಿಐಗೆ ವಹಿಸಲಾಯಿತು. ತಪಸಿ ಕೊಲೆಗೆ ಸಂಬಂಧಿಸಿದಂತೆ ಈಗ ಸುಹ್ರಿದ್ ದತ್ತ ಮತ್ತು ದೆಬು ಮಲ್ಲಿಕ್ ಎಂಬ ಇಬ್ಬರು ಸಿಪಿಎಂ ಗೂಂಡಾಗಳು ಬಂಧನಕ್ಕೊಳಗಾಗಿ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸುತ್ತಿದ್ದಾರೆ.

ತಪಸಿ ಮಲ್ಲಿಕ್‌ಳ ದಾರುಣ ಸಾವಿನ ನಂತರ ಸಿಂಗೂರ್ ರೈತರು ತಮ್ಮ ಪ್ರತಿಭಟನೆಯನ್ನು ಮುಂದುವರೆಸಿದರು. ಆದರೆ ಅದ್ಯಾವುದಕ್ಕೂ ಕೇರ್ ಮಾಡದ ಟಾಟಾ ತಪಸಿ ಸಾವನ್ನಪ್ಪಿದ್ದ ಜಾಗದಲ್ಲೇ ತನ್ನ ನ್ಯಾನೋ ಕಾರ್ ಫ್ಯಾಕ್ಟರಿಯ ಭೂಮಿ ಪೂಜೆಯನ್ನು ಅದ್ಧೂರಿಯಾಗಿ ನೆರವೇರಿಸಿದ.

ಅದನ್ನೆಲ್ಲ ಹರಧಾನ್ ಬಾಗ್ ಎಂಬ ರೈತ ನೋಡುತ್ತಿದ್ದ. ಯಾವ ಭೂಮಿಯಲ್ಲಿ ಆತ ಉಳುಮೆ ಮಾಡುತ್ತಾ



ತಪಸಿ ಮಲ್ಲಿಕಾಳ ಹೆಣ

ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದನೋ, ಅದೇ ಭೂಮಿಯಿಂದ ಅವನನ್ನು ಹೊರದೂಡಲಾಗಿದೆ. ಆತನ ಮತ್ತು ಇತರೆ ರೈತರ ಭೂಮಿಯನ್ನು ವಶಪಡಿಸಿಕೊಂಡ ಟಾಟಾ ಅದಕ್ಕೆಲ್ಲ ಬೇಲಿ ಹಾಕಿಕೊಂಡು, ಯಾರೂ ಒಳಗೆಬಾರದಂತೆ ಸರ್ಚ್‌ಲೈಟ್‌ಗಳನ್ನು ಅಳವಡಿಸಿಕೊಂಡು, ನಾಯಿಗಳನ್ನು, ಬಂದೂಕುಗಳನ್ನು ಹೊಂದಿರುವ ಕಾವಲುಗಾರರನ್ನು ಇಟ್ಟಿದ್ದಾನೆ. ತಾನು ಹಿಂದೊಮ್ಮೆ ಸೊಪ್ಪು ತರಕಾರಿ ಇತ್ಯಾದಿಗಳನ್ನು ಬೆಳೆಯುತ್ತಿದ್ದ ಭೂಮಿ ಮೇಲೆ ಇಟ್ಟಿಗೆ, ಸಿಮೆಂಟ್, ಕಬ್ಬಿಣ ಬಂದುಬಿದ್ದಿದೆ. ಎಲ್ಲವೂ ಸರಿ ಇದ್ದಿದ್ದರೆ ಹರಧಾನ್ ಬಾಗ್ ತನ್ನ ಭೂಮಿಯಲ್ಲಿ ಬಿತ್ತನೆ ಮಾಡಬೇಕಿದ್ದ ಕಾಲವದು. ಆದರೆ ಅವತ್ತು ಆತನ ಭೂಮಿಯ ಮೇಲೆ ಟಾಟಾ ಅತ್ಯಾಚಾರ ನಡೆಸುತ್ತಿದ್ದ. ಇದನ್ನೆಲ್ಲ ನೋಡಿ ಕಂಗಾಲಾದ ಬಾಗ್ ಕ್ರಿಮಿನಾಶಕ ಕುಡಿದು ಸಾವನ್ನಪ್ಪಿದ.

ಸಿಂಗೂರಿನ ರೈತರು ತಮ್ಮ ಪ್ರತಿಭಟನೆಯನ್ನು ಮುಂದುವರೆಸಿದರು, ಟಾಟಾ ಹಾಕಿದ್ದ ಬೇಲಿಯನ್ನು ಮುರಿದು ತಮ್ಮ ಭೂಮಿಯನ್ನು ವಾಪಸ್ಸು ವಶಪಡಿಸಿಕೊಳ್ಳಲು ಯತ್ನಿಸಿದರು. ಆದರೆ ಅವರಿಗೆ ಸಿಕ್ಕಿದ್ದು ಪೊಲೀಸರ ಲಾಠಿ ಏಟುಗಳು, ಸಿಪಿಎಂ ಗೂಂಡಾಗಳಿಂದ ಹೊಡೆತಗಳು...

ಇದೆಲ್ಲದರ ಮಧ್ಯೆ ಪ್ರಸಾಂತ್ ದಾಸ್ ಎಂಬ ಮತ್ತೋರ್ವ ರೈತ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ. ಪ್ರಸಾಂತನ ತಂದೆ, ತಾಯಿ, ಸಹೋದರರು ಮತ್ತು ಇಡೀ ಕುಟುಂಬ ಕೇವಲ ನಾಲ್ಕು ಗುಂಟೆ ಭೂಮಿಯನ್ನೇ ತನ್ನ ಜೀವನೋಪಾಯಕ್ಕೆ ಅವಲಂಬಿಸಿತ್ತು. ಇಷ್ಟು ಚಿಕ್ಕ ಭೂಮಿಗೆ ಪರಿಹಾರವಾಗಿ ಸರ್ಕಾರ ಹಲವು ಸಾವಿರ ರೂಪಾಯಿಗಳನ್ನಷ್ಟೇ ನೀಡಲು ಮುಂದಾಗಿತ್ತು. ಆದರಿಂದ ಅವರು ಹೊಸ ಬದುಕನ್ನು ರೂಪಿಸಿಕೊಳ್ಳುವುದು ಅಸಾಧ್ಯವಾಗಿತ್ತು, ಬದಲಾಗಿ ಪ್ರಸಾಂತನ ಇಡೀ ಕುಟುಂಬ ಕೊಲ್ಕತ್ತಾದ ಯಾವುದೋ ಕೊಳಗೇರಿಯಲ್ಲಿ ವಾಸಿಸುತ್ತಾ ಕೂಲಿಯಿಂದ ಬಂದ ಕಾಸಿನಲ್ಲೇ ಜೀವನ ಸಾಗಿಸಬೇಕಿತ್ತು. ಅಂತಹ ನರಕ ಬೇಡವೆಂದೇ ಪ್ರಸಾಂತ್ ತನ್ನ ಭೂಮಿಯನ್ನು ಟಾಟಾನಿಗೆ ನೀಡಲು ನಿರಾಕರಿಸಿದ್ದ, ಜೊತೆಗೆ ಜಮೀನು ರಕ್ಷಣಾ ಸಮಿತಿಯ ಸಕ್ರಿಯ ಸದಸ್ಯನಾಗಿದ್ದ.

ಅವತ್ತಿಗೆ ಟಾಟಾ ವಿರುದ್ಧದ ಹೋರಾಟಕ್ಕೆ ಒಂದು ವರ್ಷವಾಗಿತ್ತು, ಆ ಅವಧಿಯಲ್ಲಿ ಕೆಲವರು ಸತ್ತಿದ್ದರು. ಆದೆಷ್ಟೋ ಜನ ಪೊಲೀಸರ ದಾಳಿಗಳಿಗೆ ತುತ್ತಾಗಿದ್ದರು. ಆದರೆ ತಮ್ಮ ಭೂಮಿ ಮಾತ್ರ ಹಿಂದೆ ಸಿಗುವ ಯಾವ ಸೂಚನೆಗಳೂ ಕಂಡುಬರುತ್ತಿರಲಿಲ್ಲ. ಇದೆಲ್ಲದರಿಂದ ಬೇಸತ್ತ ಪ್ರಸಾಂತ ದಾಸ್ ಆತ್ಮಹತ್ಯೆ ಮಾಡಿಕೊಂಡ.

ಪ್ರಸಾಂತ್ ದಾಸ್ ತರಹದ ನಿರ್ಗತಿಕ ರೈತರು ಬದುಕಿದ್ದರೆಷ್ಟು, ಸತ್ತರೆಷ್ಟು? ಸಿಂಗೂರ್ ರೈತರನ್ನು ಮಟ್ಟ ಹಾಕಲು ಕೇಂದ್ರದಿಂದ ಹೆಚ್ಚುವರಿ ಪೊಲೀಸರನ್ನು ರಾಜ್ಯ ಸರ್ಕಾರ ಕರೆಸಿತು. ಇದೆಲ್ಲ ಆದ ಕೆಲ ತಿಂಗಳ ನಂತರ ಕಲ್ಕತ್ತಾ ಹೈಕೋರ್ಟ್ ಸಿಂಗೂರಿನಲ್ಲಿ ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡಿದ್ದು ನ್ಯಾಯಸಮ್ಮತವಾಗಿದೆ ಎಂದು ತೀರ್ಪು ನೀಡಿತು. ಇದರಿಂದ ಉತ್ತೇಜನಗೊಂಡ ಟಾಟಾ 2008 ಅಕ್ಟೋಬರ್ ತಿಂಗಳಲ್ಲಿ ನ್ಯಾನೋ ಕಾರ್‌ಗಳು ತಯಾರಾಗಲಿವೆ ಎಂದು ಘೋಷಿಸಿದ.

ಇದನ್ನೆಲ್ಲ ಶಂಕರ್ ದಾಸ್ ಎಂಬ ಇನ್ನೊಬ್ಬ ಕೂಲಿ ಗಮನಿಸುತ್ತಿದ್ದ. ಶಂಕರ್ ಚಿಕ್ಕ ಭೂ ಮಾಲೀಕನೂ ಆಗಿರಲಿಲ್ಲ, ಆದರೆ ಸಿಂಗೂರಿನ ರೈತರ ಭೂಮಿಯಲ್ಲೇ ಕೂಲಿ ಮಾಡುವ ಮೂಲಕ ತನ್ನ ಸಂಸಾರವನ್ನು ಸಾಗಿಸುತ್ತಿದ್ದ. ಯಾವಾಗ ರೈತರ ಭೂಮಿಯನ್ನು ಟಾಟಾ ವಶಪಡಿಸಿಕೊಂಡನೋ ಆಗ ಶಂಕರ್ ದಾಸನಿಗೂ ಕೆಲಸವಿಲ್ಲದಂತಾಯಿತು. ಕೃಷಿ ಕೆಲಸ ಬಿಟ್ಟು ಶಂಕರನಿಗೆ ಬೇರೇನೂ ಗೊತ್ತಿರಲಿಲ್ಲ, ಆದರೆ ಕೃಷಿ ಕೆಲಸ ಮಾಡಲು ಈಗ ಭೂಮಿಯೇ ಇಲ್ಲ. ಹರಧಾನ್ ಬಾಗ್ ಮತ್ತು ಪ್ರಸಾಂತ ದಾಸ್ ತರಹದ ರೈತರು ಆತ್ಮಹತ್ಯೆಗೆ ಶರಣಾದರೆ ಶಂಕರ್ ದಾಸ್ ಹಸಿವಿನಿಂದಲೇ ಸತ್ತು ಹೋದ.

ಕಳೆದ ಮೇ ತಿಂಗಳಲ್ಲಿ ಸುಪ್ರೀಮ್ ಕೋರ್ಟ್ ಕೂಡ ಟಾಟಾನ ನ್ಯಾನೋ ಯೋಜನೆಗೆ ತಡೆಯಾಜ್ಞೆ ನೀಡಲು ನಿರಾಕರಿಸಿತು. ಭಾರತದ ಇತರೆ ಪ್ರಖ್ಯಾತ ಉದ್ಯಮಿಗಳು ಟಾಟಾನ ಪರ ವಹಿಸಿದರು. ಸಿಂಗೂರಿನ ರೈತರ ಪ್ರತಿಭಟನೆಯಿಂದ ದೇಶಕ್ಕೆ ಕೆಟ್ಟ ಹೆಸರು ಬರುತ್ತಿದೆ ಎಂದೆಲ್ಲ ವಾದಿಸಿದರು.

ಸರ್ಕಾರವೂ ತಮ್ಮ ಪರವಿಲ್ಲ, ನ್ಯಾಯಾಲಯಗಳೂ ತಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವುದಿಲ್ಲ ಎಂದರಿತ ರೈತರು ಟಾಟಾನ ಫ್ಯಾಕ್ಟರಿಯ ಮೇಲೆ ದಾಳಿ ಮಾಡಿದರು. ಆತನ ಕೆಲಸಗಾರರನ್ನು ಹಿಡಿದು ಬಡಿದರು, ಧರಣಿ ನಡೆಸಿದರು. ರಸ್ತಾರೊಖೋ ಮಾಡಿದರು. ರತನ್ ಟಾಟಾನ ಕೈಕಾಲುಗಳು ಅಲುಗಾಡದಂತೆ ನೋಡಿಕೊಂಡರು. ಕೊನೆಗೂ ಟಾಟಾನಿಗೆ ಅರ್ಥವಾಯಿತು. ಸರ್ಕಾರ ತನಗೆಷ್ಟು ನೆರವಾದರೂ, ನ್ಯಾಯಾಲಯ ತನ್ನ ರಕ್ಷಣೆಗೆ ನಿಂತರೂ, ಸ್ಥಳೀಯ ಜನರ ಸಹಕಾರವಿಲ್ಲದೆ ತಾನು ಏನನ್ನೂ ಮಾಡಲಾಗುವುದಿಲ್ಲ ಎಂದು ಆತನಿಗೆ ಗೊತ್ತಾಯಿತು. ಕೊನೆಗೆ ವಿಧಿ ಇಲ್ಲದೆ ಸಿಂಗೂರಿನಿಂದ ಟಾಟಾ ಕಾಲು ಕಿತ್ತನು.

ಆದರೆ ದುರಂತ ಏನೆಂದರೆ ಆತನನ್ನು ಯಡಿಯೂರಪ್ಪನ ಸರ್ಕಾರ ಕರ್ನಾಟಕಕ್ಕೆ ಆಹ್ವಾನಿಸುತ್ತಿದೆ. ಟಾಟಾನಿಂದಾಗಿ ಕರ್ನಾಟಕದ ಎಷ್ಟು ರೈತರು ತಮ್ಮ ಭೂಮಿ ಕಳೆದುಕೊಳ್ಳಬೇಕು? ಎಷ್ಟು ತಪಸಿ ಮಲ್ಲಿಕ್‌ಗಳು ಅತ್ಯಾಚಾರಕ್ಕೆ ಒಳಗಾಗಿ ಸಾವಿಗೀಡಾಗಬೇಕು? ಎಷ್ಟು ಹರಧಾನ್‌ಬಾಗ್, ಪ್ರಸಾಂತ್ ದಾಸ್ ಮತ್ತು ಶಂಕರ್ ದಾಸ್‌ನಂತಹ ಮಣ್ಣಿನ ಮಕ್ಕಳು ಮಣ್ಣು ಪಾಲಾಗಬೇಕು?

ರೈತರಿಗೆ ರಸಗೊಬ್ಬರ ನೀಡಲಾಗದ, ಜನರಿಗೆ ವಿದ್ಯುತ್ ಸರಬರಾಜು ಮಾಡಲಾಗದ, ಬಡವರ ಕೊಳೆಗೇರಿಗಳನ್ನು ರಕ್ಷಿಸಲಾಗದ ಯಡಿಯೂರಪ್ಪ ಈಗ ಕೆಂಪು ಕಂಬಳಿ ಹಾಸಿ ರತನ್ ಟಾಟಾನಂತಹ ಜನವಿರೋಧಿಯನ್ನು ಕರೆತಂದು ಅದೇ ರೈತರನ್ನು, ಜನಸಾಮಾನ್ಯರನ್ನು, ಬಡವರನ್ನು ಆತನಿಗೆ ಬಲಿ ಕೊಡಲು ಸಜ್ಜಾಗುತ್ತಿದ್ದಾರೆ.

ಕರ್ನಾಟಕದ ಜನರು ಯಡ್ಡಿ ಎಂಬ ಪಿಶಾಚಿ ಮತ್ತು ಟಾಟಾ ಎಂಬ ನರಭಕ್ಷಕನ ಕುತಂತ್ರದ ಬಗ್ಗೆ ಈಗಲೇ ಎಚ್ಚರಗೊಂಡರೆ ರಾಜ್ಯಕ್ಕೆ ಒಳಿತು... ■

ಏತುಕಃ ಇದೇ ಮುಖ್ಯಮಂತ್ರಿ ಯಡಿಯೂರಪ್ಪನವರ ಮೊದಲ ಭೂಹಗರಣವಿರಬೇಕು!

ಕೋರ್ಟ್ ಆದೇಶ, ರಾಜ್ಯಪಾಲರ ಕಟ್ಟಪ್ಪಣೆ, ನೀತಿ ನಿಯಮಾವಳಿಗಳೆಲ್ಲವೂ ಮುಖ್ಯಮಂತ್ರಿಯ ಭೂದಾಹದ ಮುಂದೆ ಯಾವ ಲೆಕ್ಕ? ಯಡ್ಡಿಯ ರೈತನ ಮೇಲಿನ ಪ್ರಮಾಣ, ಬಡಬಗ್ಗರ ಕಾಳಜಿಯ ಬೊಗಳೆಗಳೆಲ್ಲವನ್ನೂ ಈಜಿಪುರ ಸ್ಲಂ ಕಬಳಿಕೆಯೊಂದೇ ಸಾರಾಸಗಟಾಗಿ ಜಗಜ್ಜಾಹೀರುಗೊಳಿಸಿದೆ. ಉದಯ್ ಗರುಡಾಚಾರ್ ಎಂಬ ಹುಟ್ಟಾ ನೆಲಗಳ್ಳನ ಪಾಲುದಾರಿಕೆಯಲ್ಲಿ ಮುಖ್ಯ ಮಗ ವಿಜಯೇಂದ್ರ ನುಂಗಲು ಹೊರಟ ಹದಿನೈದೆಕರೆ ಕೊಳೆಗೇರಿಯ ಒಟ್ಟು ಮೌಲ್ಯ ಕಮ್ಮಿಯೆಂದರೂ ಮುನ್ನೂರು ಕೋಟಿ!


ಬೆಂಗಳೂರಿನ ಪರಮ ಕುಖ್ಯಾತ ಕೊಂಪೆಯಂತಿದ್ದ ಈಜಿಪುರ ಸ್ಲಮ್ಮು ಹೇಳಿಕೇಳಿ ಪ್ರತಿಷ್ಠಿತ ಕೋರಮಂಗಲ ಮತ್ತು ಎಂ.ಜಿ. ರಸ್ತೆಗಳ ನಡುವಿನ ಅತ್ಯಂತ ದುಬಾರಿ ಭೂಪ್ರದೇಶ. ಅಲ್ಲಿನ ಹದಿನೈದೆಕರೆಯಲ್ಲಿ ಸರ್ಕಾರ ತಮಿಳು ನಿರಾಶ್ರಿತರಿಗೆಂದು ಯಾವುದೋ ಕಾಲಕ್ಕೆ ಕಟ್ಟಿಸಿ ಕೊಟ್ಟಿದ್ದ 1640 ರಮ್ಮು ಫ್ಲಾಟುಗಳಿದ್ದ ವಸತಿ ಸಂಕೀರ್ಣ 1994 ರ ಹೊತ್ತಿಗೆ ಬಿರುಕುಬಿಟ್ಟು ಕುಸಿದುಬಿದ್ದದ್ದು ಹಳೇ ಕತೆ. ಈಗ ಯಡ್ಡಿ ಮಗ ವಿಜಯೇಂದ್ರ ಮತ್ತು ಗರುಡಾಮಾಲ್ ಖದೀಮ ಉದಯ್ ಗರುಡಾಚಾರ್ ಸೇರಿಕೊಂಡು ದೋಚಲು ಹೊರಟಿರುವುದು ಇದೇ ಹದಿನೈದೆಕರೆಯನ್ನು.

ಅಷ್ಟಕ್ಕೂ ಕುಸಿದು ಬಿದ್ದು ನೆಲಸಮಗೊಂಡ ಈಜಿಪುರ ಸ್ಲಮ್ಮಿನ ಸಾವಿರಾರು ಕುಟುಂಬಗಳು ಇವತ್ತಿಗೂ ಬೀದಿಯಲ್ಲೇ ಇವೆ. ಕಳೆದ ಹನ್ನೆರಡು ವರ್ಷಗಳಿಂದ ಹಾಗೇ ತಗಡಿನ ಶೀಟುಗಳ ಝೋಪಡಿಗಳಲ್ಲಿ ಹುಳುಗಳಂತೆ ಬದುಕುತ್ತಿರುವ ಈಜಿಪುರದ ತಮಿಳು ನಿರಾಶ್ರಿತರ ಎಲ್ಲಾ ದುರಂತಕ್ಕೂ ಮೂಲಪುರುಷನಂತಿರುವವನು ಉದಯ್ ಗರುಡಾಚಾರ್.

ಮೊದಲು ಬ್ರಿಗೇಡ್ ರಸ್ತೆ ಸಮೀಪದ ಮುನ್ನೂರು ಕೋಟಿ ಬೆಲೆಬಾಳುವ ಪಾಲಿಕೆ ಆಸ್ತಿಯನ್ನು ಕಬಳಿಸಿ ಅಲ್ಲಿ ಗರುಡಾಮಾಲ್ ಎಬ್ಬಿಸಿದ ಉದಯ್ ಅದಕ್ಕೆಂದು ಕಾಂಗ್ರೆಸ್ ಖದೀಮರಾದ ಆರ್.ವಿ. ದೇಶಪಾಂಡೆ, ಕೃಷ್ಣರ ಅಳಿಯ ಸಿದ್ಧಾರ್ಥ, ಅಂಬರೀಷ್ ಥರದವರನ್ನೆಲ್ಲ ತನ್ನ ಪಾಲುದಾರರನ್ನಾಗಿ ಮಾಡಿಕೊಂಡ. ಚುನಾವಣೆ ಸಮೀಪಿಸುತ್ತಿದ್ದಂತೆ ಬಿಜೆಪಿ ಸೇರಿಕೊಂಡವನು ಈಗ ಮುಖ್ಯಮಂತ್ರಿ ಮಗ ವಿಜಯೇಂದ್ರನನ್ನೇ ತನ್ನ ಪಾರ್ಟ್‌ನರ್ ಮಾಡಿಕೊಂಡು ಈಜಿಪುರ ಸ್ಲಮ್ಮಿಗೆ ಬಾಯಿ ಹಾಕಿದ್ದಾನೆ.

ಇದು ಖದೀಮ ಉದಯ್ ಗರುಡಾಚಾರನ ಎರಡನೇ ಲ್ಯಾಂಡ್ ಗ್ರ್ಯಾಬಿಂಗ್. ಶಿಥಿಲಗೊಂಡು ಕುಸಿಯುತ್ತಿದ್ದ ಈಜಿಪುರ ಸ್ಲಮ್ಮಿನ ಒಟ್ಟು 1640 ಫಲಾನುಭವಿಗಳಿಗೆ ಹೊಸದಾಗಿ ಅಪಾರ್ಟ್‌ಮೆಂಟ್ ಕಟ್ಟಿಕೊಡುವುದು ಸರ್ಕಾರಕ್ಕಾಗಲಿ ಪಾಲಿಕೆಗಾಗಲಿ ದೊಡ್ಡ ಕಷ್ಟವೇನಲ್ಲ. ಆದರೆ ಲಂಚ ಹುಟ್ಟಬೇಕಲ್ಲ, ಅದಕ್ಕೆಂದು ರೂಪುಗೊಂಡಿದ್ದೇ ಈ ಕೋರಮಂಗಲ ಹೌಸಿಂಗ್ ಕಾಂಪ್ಲೆಕ್ಸ್ ಪ್ರಾಜೆಕ್ಟು!

2004 ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಕೊಟ್ಟ ಟೆಂಡರ್ ಜಾಹೀರಾತಿನ ಪ್ರಕಾರ ಈಜಿಪುರದ ಒಟ್ಟು 15 ಎಕರೆಯಲ್ಲಿ ಏಳೆಕರೆ ಜಾಗದಲ್ಲಿ ಬಡವರಿಗೆ ಹೌಸಿಂಗ್ ಕಾಂಪ್ಲೆಕ್ಸ್ ಕಟ್ಟುವುದು. ಉಳಿದ ಎಂಟೆಕರೆಯನ್ನು ಖಾಸಗಿಯವರಿಗೆ ವಹಿಸಿ ಅದನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುವುದು. ಈ ಎಲ್ಲಾ ಟೆಂಡರ್


ವಿಜಯೇಂದ್ರ


ಪ್ರಕ್ರಿಯೆಗಳನ್ನು ನಿಭಾಯಿಸಲೆಂದೇ ಐಡೆಕ್ ಅಂದರೆ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್ ಎಂಬ ಸರ್ಕಾರಿ ಸಂಸ್ಥೆಗೆ 35 ಲಕ್ಷ ರೂಪಾಯಿಗಳ ಕನ್ಸಲ್ಟಿಂಗ್ ಫೀಜನ್ನೂ ಪಾಲಿಕೆ ಪಾವತಿ ಮಾಡಿತು.

ಅದರಂತೆ ಯಾವ ಕಂಪೆನಿಗೆ ಸ್ಲಂ ಪುನರ್ವಸತಿಯಲ್ಲಿ ಅನುಭವವಿದೆ? ಅದರ ತಾಂತ್ರಿಕ ಸಾಮರ್ಥ್ಯವೇನು? ಯಾರು ಹೆಚ್ಚು ಮೊತ್ತದ ಟೆಂಡರ್ ಮೊಬಲಗನ್ನು ಪಾವತಿಸುತ್ತಾರೆ? ಯಾವ ಕಂಪೆನಿಯಿಂದ ಪಾಲಿಕೆಗೆ ಹೆಚ್ಚು ಲಾಭ? ಇತ್ಯಾದಿಗಳನ್ನೆಲ್ಲ ಪರಿಶೀಲಿಸಿ ಟೆಂಡರ್ ಆಖೈರುಗೊಳಿಸುವುದು ಐಡೆಕ್‌ನ ಜವಾಬ್ದಾರಿ. ಅದರಂತೆ ಅರ್ಜಿ ಹಾಕಿದ 21 ಕಂಪೆನಿಗಳ ಪೈಕಿ ಅಂತಿಮವಾಗಿ ಉತ್ತೀರ್ಣಗೊಂಡದ್ದು ಮುಂಬಯಿಯ ಆಕೃತಿ ನಿರ್ಮಾಣ್ ಲಿಮಿಟೆಡ್ ಮತ್ತು ಬೆಂಗಳೂರಿನ IDEB Construction projects (P) Ltd., ಎಂಬ ಎರಡು ಕಂಪೆನಿಗಳು ಮಾತ್ರ.

ಆದರೆ ಬೆಂಗಳೂರು ಮಹಾನಗರ ಪಾಲಿಕೆ ಕಂಡ ಅತಿಭ್ರಷ್ಟ ಅಧಿಕಾರಿ ಪಿ.ಕೆ. ಶ್ರೀಹರಿಯ ಕೈಚಳಕದ ಪರಿಣಾಮವಾಗಿ ಉದಯ್ ಗರುಡಾಚಾರ್‌ನ ಮೇವರಿಕ್ ಹೋಲ್ಡಿಂಗ್ಸ್ ಅಂಡ್ ಇನ್‌ವೆಸ್ಟ್‌ಮೆಂಟ್ಸ್ ಪ್ರೈ.ಲಿ. ಎಂಬ ಮೂರನೇ ಕಂಪೆನಿಯೊಂದು ಅದ್ಹೇಗೋ ಟೆಂಡರ್ ಪೈಪೋಟಿಯಲ್ಲಿ ತೂರಿಬಿಟ್ಟಿತು.


ಅದು 2006 ರ ಹೊತ್ತಿಗೆ ಪಾಲಿಕೆಯ ಅಡಿಷನಲ್ ಕಮಿಷನರ್ ಫೈನಾನ್ಸ್ ಹುದ್ದೆಯಲ್ಲಿದ್ದ ಪಿ.ಕೆ. ಶ್ರೀಹರಿ ಮತ್ತು ಉದಯ್ ಗರುಡಾಚಾರ್ ಜಂಟಿಯಾಗೇ ಹೆಣೆದಿದ್ದ ಷಡ್ಯಂತ್ರವಾಗಿತ್ತು. ಯಾವುದೇ ಕೊಳೆಗೇರಿಯನ್ನು ಅಭಿವೃದ್ಧಿಪಡಿಸಿದ್ದಾಗಲಿ, ಪುನರ್‌ವಸತಿ ಕಲ್ಪಿಸಿದ್ದಾಗಲಿ ಅನುಭವವೇ ಇಲ್ಲದ ಮೇವರಿಕ್ ಹೋಲ್ಡಿಂಗ್ಸ್ ನಿಗದಿತ ಸಮಯಕ್ಕೆ ಸರಿಯಾಗಿ ಟೆಂಡರ್ ಸಲ್ಲಿಸುವಲ್ಲೂ ವಿಫಲಗೊಂಡಿತ್ತು. ನಿಯಮದಂತೆ 10 ಕೋಟಿ ರೂಪಾಯಿಗಳ ಬಂಡವಾಳ ಕೂಡ ಮೇವರಿಕ್ ಹೋಲ್ಡಿಂಗ್ಸ್ ಕಂಪೆನಿಯಲ್ಲಿರಲಿಲ್ಲ.

ಯಡ್ಡಿಯ ರೈತನ ಮೇಲಿನ ಪ್ರಮಾಣ, ಬಡಬಗ್ಗರ ಕಾಳಜಿಯ ಬೊಗಳೆಗಳೆಲ್ಲವನ್ನೂ ಈಜಿಪುರ ಸ್ಲಂ ಕಬಳಿಕೆಯೊಂದೇ ಸಾರಾಸಗಟಾಗಿ ಜಗಜ್ಜಾಹೀರುಗೊಳಿಸಿದೆ. ಉದಯ್ ಗರುಡಾಚಾರ್ ಎಂಬ ಹುಟ್ಟಾ ನೆಲಗಳ್ಳನ ಪಾಲುದಾರಿಕೆಯಲ್ಲಿ ಮುಖ್ಯ ಮಗ ವಿಜಯೇಂದ್ರ ನುಂಗಲು ಹೊರಟ ಹದಿನೈದೆಕರೆ ಕೊಳೆಗೇರಿಯ ಒಟ್ಟು ಮೌಲ್ಯ ಕಮ್ಮಿಯೆಂದರೂ ಮುನ್ನೂರು ಕೋಟಿ!



ಗರುಡಾಚಾರನೊಂದಿಗೆ ಯಡಿ
300 ಕೋಟಿ ಸ್ವಾಹಾ


ಇಷ್ಟೆಲ್ಲ ಕಳ್ಳದಾರಿಯಲ್ಲಿ ಉದಯ್‌ನ ಕಂಪೆನಿಯನ್ನು ಟೆಂಡರ್ ಪೈಪೋಟಿಗೆ ಅರ್ಹಗೊಳಿಸಿದ ಪಾಲಿಕೆ ಖದೀಮ ಶ್ರೀಹರಿಗೆ ಆಘಾತವಾಗಿದ್ದು ಟೆಂಡರ್ ಲಕೋಟೆ ತೆರೆದಾಗಲೇ. ಮೂರು ಕಂಪೆನಿಗಳ ಪೈಕಿ ಆಕೃತಿ ನಿರ್ಮಾಣ್ ಕಂಪೆನಿಯೇ ಹೆಚ್ಚು ಅಂದರೆ 1,50,000 ರೂಪಾಯಿಗಳನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಪಾಲಿಕೆಗೆ ಕಟ್ಟುತ್ತೇನೆಂದು ನಮೂದಿಸಿತ್ತು. ಮೇವರಿಕ್ ಹೋಲ್ಡಿಂಗ್ಸ್ ಕೇವಲ ಒಂದು ಕೋಟಿ


ಈಜಿಪುರ ಸ್ಲಂ

ಮೂವತ್ತೈದು ಲಕ್ಷ ರೂಪಾಯಿಗಳನ್ನಷ್ಟೇ ನಮೂದಿಸಿತ್ತು.

ಆ ಪ್ರಕಾರ ಒಂದೂವರೆ ಕೋಟಿಗಿಂತಲೂ ಅಧಿಕ ಮೊತ್ತವನ್ನು ನಮೂದಿಸಿದ್ದ ಆಕೃತಿ ನಿರ್ಮಾಣ್‌ಗೇ ಪಾಲಿಕೆ ಟೆಂಡರ್ ಒಪ್ಪಿಸಬೇಕಿತ್ತು. ಐಡೆಕ್ ಸಂಸ್ಥೆ ಕೂಡ ಆಕೃತಿ ನಿರ್ಮಾಣ್‌ಗೇ ಟೆಂಡರ್ ಕೊಡತಕ್ಕದ್ದೆಂದು ವರದಿ ಒಪ್ಪಿಸಿತ್ತು. ಆದರೆ ಪಾಲಿಕೆಗೆ ಆಯುಕ್ತನಾಗಿ ತಿಂದಿಪೋತ ಐಎಎಸ್ ಅಧಿಕಾರಿ ಜ್ಯೋತಿರಾಮಲಿಂ ಮತ್ತು ಆಡಿಷನಲ್ ಕಮೀಷನರ್ ಶ್ರೀಹರಿ ಬೇರೆಯ ಹುನ್ನಾರವೊಂದಕ್ಕೆ ಕೈಯಿಟ್ಟರು. ಅದು ಟೆಂಡರ್ ತಿದ ಸರ್ಕಾರಿ ಮೋಸ. ಆಕೃತಿ ನಿರ್ಮಾಣಗೇ ಟೆಂಡ ಹೋಗದಂತೆ ಒಳಗೊಳಗೇ ಮೇವರಿಕ್ ಹೋಲ್ಡಿಂ ಕಂಪೆನಿಯ ಟೆಂಡರ್ ಫಾರ್ಮುಗಳನ್ನು ತಿದ್ದುವು ಒಂದೂವರೆ ಕೋಟಿಗಿಂತಲೂ ಕಮ್ಮಿಯಿದ್ದ ಗರು ಚಾರ್ ಟೆಂಡರ್ ಫಾರ್ಮ್‌ನಲ್ಲಿ ಹೆ ಪಾರ್ಕಿಂಗ್ ಜಾಗವನ್ನು ಪಾಲಿಕೆಗೆ ಒದಗಿಸಿದ ಬರೆದು ಅದರ ಪರಿಶೀಲನೆಗೆಂದು ಮೂಲದ ಇನ್ನೆರಡು ನಕಲಿ ಕಂಪೆನಿಗಳ ನೇಮಿಸಿ ಆ ಎರಡೂ ಕಂಪೆನಿಗಳೂ ಮೇವರಿ ಹೋಲ್ಡಿಂಗ್ಸ್‌ಗೇ ಟೆಂಡರ್ ಒಪ್ಪಿಸುವಂತೆ ವ ಕೊಡುವ ಹಾಗೆ ಮಾಡುವುದು.

ಇಂಥದ್ದೊಂದು ಮೋಸಕ್ಕೆ ಆಗ ಮೇಯ ಆಗಿದ್ದ ಮಮ್ತಾಜ್ ಬೇಗಂ ಕೂಡ ಕೈಜೋಡಿ ತ್ತಾರೆ. 2006ರ ಅಕ್ಟೋಬರ್ 30ರ ಕೊನೆ ಪಾಲಿಕೆ ಸಭೆಯ ಕೊನೆಗಳಿಗೆಯಲ್ಲಿ ಯ ಗಮನಕ್ಕೂ ಬರದಂತೆ ಮೇಯರ್ ಮಮ್ತಾ ಬೇಗಂ ಈಜಿಪುರ ಹೌಸಿಂಗ್ ಟೆಂಡರ ಉದಯ್ ಗರುಡಾಚಾರ್ ಪರವ ಆಖೈರುಗೊಳಿಸುತ್ತಾರೆ. ಇದರ ವಿರುದ್ಧ ಆಕೃತಿ ನಿರ್ಮಾ ಸಂಸ್ಥೆ ಹೈಕೋರ್ಟ್‌ಗೆ ಅಪೀಲು ಹೋಗಿ 200 ನವಂಬರ್ 16 ರಂದು ತಡೆಯಾಜ್ಞೆಯನ್ನು ತರುತ್ತ ಆ ಪ್ರಕಾರವೇ 2008 ರ ಮೇ 23 ರಂದು ಪಾ


ದೇಶಪಾಂಡೆ

ಸಮಯಸಾಧಕ ದೇಶಪಾಂಡೆಯ ದೋಖಾ

ಈಜೀಪುರ ಸ್ಲಂ ಕಬಳಿಕೆ ವಿರುದ್ಧ ಮೊದಲು ದನಿಯೆತ್ತಿದ ಮಾಜಿ ಪ್ರಧಾನಿ ದೇವೇಗೌಡರು ಖುದ್ದಾಗಿ ಸ್ಥಳಕ್ಕೇ ಭೇಟಿ ಕೊಟ್ಟು ಅಕ್ರಮದ ವಿರುದ್ಧ ಗುಡುಗಿದರೆ ಜೆ.ಡಿ.ಎಸ್. ನಾಯಕ ಕುಮಾರಸ್ವಾಮಿ ಇಡೀ ಕರ್ಮಕಾಂಡದ ವಿರುದ್ಧ ಸಿಬಿಐ ತನಿಖೆಗೆ ಒತ್ತಾಯಿಸಿದ್ದಾರೆ.


ಅದು ವಿರೋಧ ಪಕ್ಷವೊಂದರ ಕನಿಷ್ಠ ಜವಾಬ್ದಾರಿ. ಆದರೆ ಕಾಂಗ್ರೆಸ್ ಅಧಿಪತಿ ಆರ್.ವಿ. ದೇಶಪಾಂಡೆ ಮಾತ್ರ ಈತನಕ ಈಜೀಪುರದ ಸ್ಲಂ ಹಗರಣದ ವಿರುದ್ಧ ಕಾಟಾಚಾರಕ್ಕೂ ಬಾಯ್ಬಿಟ್ಟಿಲ್ಲ ಏಕೆ?


ಏಕೆಂದರೆ ಉದಯ್ ಗರುಡಾಚಾರ್ ರಾಜಕೀಯವಾಗಿ ಬಿಜೆಪಿ ನಾಯಕನಾದರೂ ಅಂತರಂಗದಲ್ಲಿ ಆರ್.ವಿ. ದೇಶಪಾಂಡೆಯ ಪಾರ್ಟನರ್. ಕೃಷ್ಣ ಮುಖ್ಯಮಂತ್ರಿಯಾಗಿದ್ದ ಕಾಲಕ್ಕೆ ಪ್ರಿಮ್‌ರೋಸ್ ರಸ್ತೆಯ ಪಾಲಿಕೆ ವರ್ಕ್‌ಶಾಪ್ ಅನ್ನು ಗರುಡಾಮಾಲ್ ಖದೀಮನಿಗೆ ಒಪ್ಪಿಸುವಲ್ಲಿ ಕೃಷ್ಣನ ಅಳಿಯ ಸಿದ್ಧಾರ್ಥನಿಗಿಂತಲೂ ದೇಶಪಾಂಡೆಯ ಬೇನಾಮಿ ಹೇರುಗಳೇ ಹೆಚ್ಚಾಗಿತ್ತು.

ಪಾಲಿಕೆ ಆಸ್ತಿಯನ್ನು ನುಂಗಿ ಅಲ್ಲಿ ಗರುಡಾಮಾಲ್ ತಲೆಯೆತ್ತಿದ ನಂತರ ಮೇವರಿಕ್ ಹೋಲ್ಡಿಂಗ್ಸ್ ನ ಡೈರೆಕ್ಟರ್‌ಗಿರಿಗೆ ಬದಲಾಗಿ ಉದಯ ಗರುಡಾಚಾರ್ ಗರುಡಾಮಾಲ್‌ನ ಮೂರು ಪ್ರಮುಖ ಮಳಿಗೆಗಳನ್ನು ದೇಶಪಾಂಡೆಗೆ ಬಿಟ್ಟುಕೊಟ್ಟ. ಈ ಪೈಕಿ ಒಂದು ಮಳಿಗೆಯನ್ನು ದೇಶಪಾಂಡೆ ಪತ್ನಿ ರಾಧಾ ದೇಶಪಾಂಡೆಯ ಹೆಸರಿಗೆ ವರ್ಗಾಯಿಸಿದರೆ ಇನ್ನೆರಡು ಮಳಿಗೆಗಳನ್ನು ದೇಶಪಾಂಡೆ ಮಕ್ಕಳಾದ ಪ್ರಸಾದ್ ಮತ್ತು ಪ್ರಶಾಂತ್ ಹೆಸರಿಗೆ ಗರುಡಾಚಾರ್ ಬರೆದುಕೊಟ್ಟ. ಹಾಗೆಯೇ ಕೃಷ್ಣನ ಅಳಿಯ ಸಿದ್ಧಾರ್ಥ ಮತ್ತು ಅಂಬರೀಶ್ ಪಾಲಿಗೂ ಕೆಲವು ಮಳಿಗೆಗಳು ಗಿಟ್ಟಿವೆ.

ಹಾಗೆ ನೋಡಿದರೆ ಉದಯ್ ಗರುಡಾಚಾರ್ ಮತ್ತು ಆರ್.ವಿ. ದೇಶಪಾಂಡೆಯ ಅನೈತಿಕ ಸಂಬಂಧ ಕೇವಲ ಗರುಡಾಮಾಲ್‌ಗಷ್ಟೇ ಸೀಮಿತವಾಗಿಲ್ಲ. ದೇಶಪಾಂಡೆ ಭಾರೀ ಕೈಗಾರಿಕಾ ಮಂತ್ರಿಯಾಗಿದ್ದ ಕಾಲಕ್ಕೆ ಐಟಿ ಕಾರಿಡಾರ್ ಹೆಸರಿನಲ್ಲಿ ಕಳ್ಳ ಐಟಿ ಕಂಪೆನಿಗಳಿಗೆ ರೈತರ ಭೂಮಿ ಕಿತ್ತುಕೊಟ್ಟ ಹಗರಣದಲ್ಲಿ ಮೇವರಿಕ್ ಹೋಲ್ಡಿಂಗ್ ಕಂಪೆನಿಯೂ ಫಲಾನುಭವಿ.

ವಿಪರ್ಯಾಸವೆಂದರೆ ಕಳೆದ ವಿಧಾನಸಭಾ ಚುನಾವಣೆಗೂ ಮುನ್ನ ದೇಶಪಾಂಡೆಯೇ ಬಿಜೆ ಸೇರಲು ಹವಣಿಸಿದ್ದ. ಅಂಬರೀಶ್ ಮತ್ತು ದೇಶಪಾಂಡೆಯ ಸಲಹೆಯ ಮೇರೆಗೆ ಗರುಡಾ ಉದಯ ಬಿಜೆಪಿ ಸೇರಿಕೊಂಡು ಹೆಸರಿಗೆ ದೇಶಪಾಂಡೆ ಕಾಂಗ್ರೆಸ್ ಅಧಿಪತಿಯಾದರೂ ಆಂತರ್ಯದಲ್ಲಿ ಬಿಜೆಪಿ ನಾಯಕರಾದ ಅನಂತ್‌ಕುಮಾರ್ ಮತ್ತು ಯಡಿಯೂರಪ್ಪನವರಿಗೆ ಗಳಸ್ಯ ಕಂಠಸ್ಯ. ಐಟಿ ಕಾರಿಡಾರ್ ಭೂಹಗರಣದ ವಿರುದ್ಧ ಆಗ ವಿರೋಧಿ ನಾಯಕರಾಗಿದ್ದ ಯಡಿಯೂರಪ್ಪ, ಅನಂತಕುಮಾರ್ ಮತ್ತು ಈಶ್ವರಪ ಏಕೆ ಸೊಲ್ಲೆತ್ತಲಿಲ್ಲವೆಂದರೆ ಕಳ್ಳ ಐಟಿ ಕಂಪೆನಿಗಳ ಹೆಸರಿನಲ್ಲಿ ದೋಚಿದ ಬೆಳ್ಳಂದೂರಿನ ಬಡರೈತರ ಭೂಮಿಯಲ್ಲಿ ದೇಶಪಾಂಡೆ ಯಡ್ಡಿ ಮಗಳು ಉಮಾದೇವಿ, ಅಳಿಯರಿಗೂ ಎರಡೆಕರೆಯ ಪಾಲುಕೊಟ್ಟ. ಹಾಗೆ ಈಶ್ವರಪ್ಪ ಪತ್ನಿ ಜಯಲಕ್ಷ್ಮಿ ಹೆಸರಿಗೆ ಎರಡೆಕರೆಯ ಜಮೀನು ಮಂಜೂರಾಯಿ ಅನಂತ್‌ಕುಮಾರ್ ಆ ಹೊತ್ತಿಗಾಗಲೇ ಮಂತ್ರಿ ಮತ್ತು ಪೂರ್ವಂಕರ ಬಿಲ್ಡರುಗಳ ರಹಸ್ಯ





ಉದಯ್ ಗರುಡನ ತಿದ್ದಿದ ಟೆಂಡರ್

ಯುಕ್ತ ಸುಬ್ರಹ್ಮಣ್ಯಂ ಮೇವರಿಕ್ ಹೋಲ್ಡಿಂಗ್‌ಗೆ ಟ್ಟ ಗುತ್ತಿಗೆಯನ್ನು ರದ್ದು ಮಾಡಿ ಆದೇಶ ಹೊರಡಿಸುತ್ತಾರೆ.

ಈ ರೀತಿ ಪಾಲಿಕೆ ಮೇವರಿಕ್ ಹೋಲ್ಡಿಂಗ್ಸ್‌ನ ತ್ತಿಗೆ ರದ್ದು ಮಾಡಿದ್ದಕ್ಕೆ ಇನ್ನೂ ಒಂದು ಕಾರಣವಿತ್ತು. ದು 2008ರ ಮೇ 29 ರಂದು ರಾಜ್ಯಪಾಲರು ಟ್ಟ ಆದೇಶ. ಐಡೆಕ್ ಸಂಸ್ಥೆಯ ವರದಿಗನುಗುಣವಾಗಿಯೇ ಆಕೃತಿ ನಿರ್ಮಾಣ ಸಂಸ್ಥೆಗೆ ತ್ತಿಗೆ ವಹಿಸಿಕೊಡುವಂತೆ ರಾಜ್ಯಪಾಲರ ಕಾರ್ಯದರ್ಶಿ ಸದಾ ಸುಬ್ರಹ್ಮಣ್ಯಂ ವಿಶೇಷ ಆದೇಶ ಕೊಟ್ಟಿದ್ದರು.

ಈ ಪ್ರಕಾರ ಇಡೀ ಈಜಿಪುರ ಕೊಳಗೇರಿಯ ಸಿಂಗ್ ಪ್ರಾಜೆಕ್ಟ್ ಆಕೃತಿ ನಿರ್ಮಾಣ ಸಂಸ್ಥೆಗೇ ಗಬೇಕಿತ್ತು. ಆದರೆ ಯಾವ ಎಎಸ್ ಅಧಿಕಾರಿ ್ಯೋತಿರಾಮಲಿಂಗಂ ನು ಪಾಲಿಕೆ ಕಮೀಷನರ್ ಗಿದ್ದಾಗ ಗರುಡಾಮಾಲ್ ದೀಮನ ಪರವಹಿಸಿ ಟೆಂಡರ್ ದ್ದಿಸಿ ಅನುಕೂಲ ಕಲ್ಪಿಸಿದ್ದನೋ ತನೇ ಈಗ ನಗರಾಭಿವೃದ್ಧಿ ಾಖೆಯ ಕಾರ್ಯದರ್ಶಿ. ಳಬೇಕೆ?



ಉದಯ್ ಗರುಡಾಚಾರ್

ವೊನ್ನೆ ಅಂದರೆ 2008ರ ಪ್ಟೆಂಬರ್ 18ರ ಯಡಿಯೂರಪ್ಪ ಸಚಿವ ಸಂಪುಟದ ಭೆಯಲ್ಲಿ ವಿಚಿತ್ರ ನಿರ್ಣಯವೊಂದನ್ನು ್ಯೋತಿರಾಮಲಿಂಗಂ ಮಂಡಿಸುತ್ತಾನೆ. ಅದು ಈಜೀಪುರ ಸಿಂಗ್ ಪ್ರಾಜಜೆಕ್ಟನ್ನು ಏಕಾಏಕಿ ಉದಯ್ ಡಾಚಾರ್‌ನ ಮೇವರಿಕ್ ಹೋಲ್ಡಿಂಗ್ ಕಂಪೆನಿಗೆ ಸುವ ನಿರ್ಣಯ. ಯಾವ ಕಾರಣಕ್ಕೆ, ಹೇಗೆ ಾವುದೂ ಭಾಗವಹಿಸಿದ ಯಾವೊಬ್ಬ ಮಂತ್ರಿಗೂ ತ್ತಿರಲಿಲ್ಲ. ಒಂದೇ ಸಾಲಿನ ನಿರ್ಣಯವನ್ನು ಬಜೆಪಿಯ ್ಲಾ ಮಂತ್ರಿಗಳಾದಿಯಾಗಿ ಕಣ್ಣುಮುಚ್ಚಿ ಸಮ್ಮತಿಸುತ್ತಾರೆ.

ಅಲ್ಲಿಗೆ ಮುನ್ನೂರು ಕೋಟಿ ರೂಪಾಯಿಗಳ ಹಗರಣವೊಂದಕ್ಕೆ ಯಡ್ಡಿ ಸಂಪುಟ ಮಂಜೂರಾತಿ

ಟೆಂಡರ್ ಮೌಲ್ಯ ಮತ್ತು ಪಾಲಿಕೆಯ ಮೋಸ

ಕೊಟ್ಟಂತಾಗುತ್ತದೆ. ಎಂತಹ ಹುಚ್ಚಾಟವೆಂದರೆ ಈಗಾಗಲೇ ರಾಜ್ಯ ಹೈಕೋರ್ಟ್ ಮೇವರಿಕ್ ಹೋಲ್ಡಿಂಗ್ಸ್ ವಿರುದ್ಧ ತಡೆ ಕೊಟ್ಟಿದೆ. ರಾಜ್ಯಪಾಲರೇ ಸ್ಪಷ್ಟವಾಗಿ ಐಡೆಕ್ ನಿರ್ದೇಶನದಂತೆ ಟೆಂಡರ್ ನಿಗದಿಗೊಳಿಸಿ ಎಂದು ಆದೇಶ ಕೊಟ್ಟಿದ್ದಾರೆ. ಇದೆಲ್ಲವನ್ನೂ ಧಿಕ್ಕರಿಸಿದ ಯಡಿಯೂರಪ್ಪನವರ ಸಂಪುಟ ಉದಯ್ ಗರುಡಾಚಾರ್‌ನಂಥ ಹುಟ್ಟಾ ನೆಲಗಳ್ಳನೊಬ್ಬನಿಗೆ ಈಜಿಪುರನ ಹೌಸಿಂಗ್ ಪ್ರಾಜೆಕ್ಟ್‌ನ ಗುತ್ತಿಗೆ ಕೊಡುತ್ತದೆಯೆಂದರೆ ಮುಖ್ಯಮಂತ್ರಿಗೆ ಇನ್ನೆಂಥ ಲಾಭವಿರಬೇಡ?

ಆಫ್‌ಕೋರ್ಸ್ ಈ ಬಾರಿ ಗರುಡಾ ಉದಯ ಮುಖ್ಯಮಂತ್ರಿ ಮಗ ವಿಜಯೇಂದ್ರನನ್ನೇ ಬುಟ್ಟಿಗೆ ಹಾಕಿಕೊಂಡಿದ್ದ ಮೇವರಿಕ್ ಹೋಲ್ಡಿಂಗ್ಸ್‌ನ ಶೇ. 30ರಷ್ಟು ಷೇರುಗಳನ್ನು ವಿಜಯೇಂದ್ರನ ಹೆಸರಿಗೆ ವರ್ಗಾಯಿಸಿ ಈಜಿಪುರ ಹೌಸಿಂಗ್ ಯೋಜನೆಯಲ್ಲಿ ದಕ್ಕುವ ಎಂಟೆಕರೆ ಬಟ್ಟ ಜಮೀನಿನಲ್ಲಿ ನಾಲ್ಕೆಕರೆಯನ್ನು ವಿಜಯೇಂದ್ರನಿಗೆ ಮಾರುವ ರಹಸ್ಯ ಒಪ್ಪಂದವೊಂದನ್ನು ಮಾಡಿಕೊಟ್ಟೇ ಉದಯ್ ಡೀಲಿಗೆ ಕೈಹಾಕಿದ್ದ.

ಆ ಪ್ರಕಾರ ಎಕರೆಯೊಂದಕ್ಕೆ ಕನಿಷ್ಠ 25 ಕೋಟಿಯಂತೆ ಲೆಕ್ಕಹಾಕಿದರೂ ಮುಖ್ಯಮಂತ್ರಿಯ ಮಗ ವಿಜಯೇಂದ್ರನಿಗೆ ಇದೊಂದರಿಂದಲೇ ನೂರು ಕೋಟಿಯ ಬಿಟ್ಟೀ ಆಸ್ತಿ ಗಿಟ್ಟುತ್ತದೆ. ನೂರು ಕೋಟಿಯ ಸೊತ್ತು ದಕ್ಕುವುದಾದರೆ ಮುನ್ನೂರು ಕೋಟಿಯ ಬಡಬಗ್ಗರ ಸ್ಲಮ್ಮನ್ನು ಕಳ್ಳರಿಗೊಪ್ಪಿಸುವುದು ಯಾವ ಮಹಾ?

ಕಳ್ಳರ ಜೊತೆ ಮುಖ್ಯಮಂತ್ರಿಯೇ ಕೈಜೋಡಿಸುತ್ತಾನೆಂದರೆ ಬಡವರ ಸ್ಲಮ್ಮಾದರೇನು, ಪಾಲಿಕೆಯಾದರೇನು?

■ ರಾ.ಸೋಮನಾಥ್

ಉದಾರರಾಗಿದ್ದರಿಂದ ಅಗರದ ಕೆರೆಯನ್ನೇ ಂತ್ರಿ ಡೆವಲಪರ್ಸ್ ಮತ್ತು ಪೂರ್ವಾಂಕರ ೀಮರ ಬಾಯಿಗೆ ಹಾಕಿದ್ದು ಇದೇ ಶಪಾಂಡೆ.

ಕಳೆದ ಚುನಾವಣೆಯಲ್ಲಿ ದೇಶಪಾಂಡೆಯೇ ಬಿಜೆಪಿ ಕೊಳ್ಳುವ ಲೆಕ್ಕಾಚಾರದಲ್ಲಿದ್ದು ಕೊನೆ ಗಳಿಗೆಯಲ್ಲಿ ವ ಕಾರಣಕ್ಕಾಗಿ ಮನಸ್ಸು ಬದಲಾಯಿಸಿದನೋ?

ತಾನೇ ಗೆಲ್ಲಲಾಗದ ಸಮಯಸಾಧಕ ಶಪಾಂಡೆಯನ್ನು ರಾಜ್ಯಕಾಂಗ್ರೆಸ್ ಧ್ಯಕ್ಷನನ್ನಾಗಿಸಿದ ಕಾಂಗ್ರೆಸ್ ಹೈಕಮಾಂಡ್ ಂಥ ಲೆಕ್ಕಾಚಾರ ಹಾಕಿದೆಯೋ? ಅಥವಾ ಅದು ಗ್ರೆಸ್‌ನ ದುರಂತವೋ ಬಲ್ಲವರಾರು?

ಮುಖ್ಯಮಂತ್ರಿಯ ಮಗನೇ ಉದಾರನಾಗಿರುವಾಗ ಕೋರ್ಟ್ ಕಟ್ಟಪ್ಪಣೆ ತ್ತು ರಾಜ್ಯಪಾಲರ ಆದೇಶವನ್ನೇ ಧಿಕ್ಕರಿಸಿ ಬಡವರ ಳಗೇರಿಯನ್ನೇ ನುಂಗಲು ಹೊರಟ ಕಾಂಡವೊಂದನ್ನು, ಕಂಡೂ ಕಾಂಗ್ರೆಸ್ ಕೈಕಟ್ಟಿ ತಿದೆಯೆಂದರೆ ಅದನ್ನು ಯಾವ ಬಾಯಿಂದ ೋಧ ಪಕ್ಷವೆನ್ನಬೇಕು? ಶಿಷ್ಯ ಗರುಡಾ ಸಲುವಾಗಿ ತನ್ನನ್ನೇ ಮಾರಿಕೊಂಡ ದೇಶಪಾಂಡೆ

ಇನ್ನು ಬಿಜೆಪಿಗಾಗಿ ಪಕ್ಷವನ್ನೇ ಮಾರಿಕೊಳ್ಳಲ್ಲ ಎಂಬುದಕ್ಕೆ ಏನು ಗ್ಯಾರಂಟಿ?

30 ಕೋಟಿಯ ನಷ್ಟ

ಆಕೃತಿ ನಿರ್ಮಾಣ ಕಂಪೆನಿಗೆ ಹೋಗಬೇಕಿದ್ದ ಗುತ್ತಿಗೆ ಮೆಟರಿಕ್ ಹೋಲ್ಡಿಂಗ್ಸ್ ಪಾಲಾದ್ದರಿಂದ ಎಂಟೆಕರೆ ಸರ್ಕಾರಿ ಆಸ್ತಿಯಷ್ಟೇ ಅಲ್ಲ, ಪಾಲಿಕೆಗೆ 30 ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತದೆ.

ಒಂದೂವರೆ ಕೋಟಿಗೆ ಬದಲಾಗಿ ಒಂದು ಕೋಟಿ ಮೂವತ್ತೈದು ಲಕ್ಷದ ಕಮ್ಮೀ ಮೊತ್ತಕ್ಕೆ ಗುತ್ತಿಗೆ ಒಪ್ಪಿಸುವುದರಿಂದ ವರ್ಷಕ್ಕೆ ಅದೇ 6 ಕೋಟಿ 2 ಲಕ್ಷದ ನಷ್ಟವಾಗುತ್ತದೆ. ಇದನ್ನೇ 30 ವರ್ಷದ ಗುತ್ತಿಗೆಗೆ ಲೆಕ್ಕಹಾಕಿದರೆ ಪ್ರತಿ 3 ವರ್ಷಕ್ಕೆ ಶೇ.15 ರಷ್ಟು ಬದ್ಧಿಯನ್ನೂ ಸೇರಿಸಿದರೆ 30 ವರ್ಷಕ್ಕದು 30 ಕೋಟಿಯ ಮೊತ್ತವಾಗುತ್ತದೆ.

30 ಕೋಟಿ ನಷ್ಟ ಮಾಡಿಕೊಂಡಾದರೂ ಮೇವರಿಕ್ ಕಂಪೆನಿಗೆ ಗುತ್ತಿಗೆ ಕೊಡುವ ಮುಖ್ಯಮಂತ್ರಿಯ ಘಾತುಕತನಕ್ಕೆ ಏನೆನ್ನಬೇಕು? ■

ಉಡುಪಿ:ಮಸೀದಿಯಲ್ಲಿ ಮೂರ್ತಿ

ಬಿಜೆಪಿ ಬೆಂಕಿಗೆ ಮುಸ್ಲಿಮರ ತಣ್ಣೀರು.

ಮಸೀದಿ ಆವರಣದೊಳಗೆ ಮೂರ್ತಿ ತಂದಿಟ್ಟು ಮುಸ್ಲಿಮರ ಧಾರ್ಮಿಕ ಭಾವನೆಗಳನ್ನು ಪ್ರಚೋದಿಸಿ ಕೋಮುಗಲಭೆ ಸೃಷ್ಟಿಸುವ ಸಂಘಪರಿವಾರದ ಹುನ್ನಾರವೊಂದು ಇತ್ತೀಚೆಗೆ ಉಡುಪಿಯಲ್ಲಿ ವಿಫಲಗೊಂಡಿತು.

ಮುಸ್ಲಿಮರು ಪ್ರದರ್ಶಿಸಿದ ಅಪಾರವಾದ ತಾಳ್ಮೆ, ಅನನ್ಯವಾದ ಸಹನೆ, ಜಪಿಸಿದ ಶಾಂತಿ ಮಂತ್ರ, ಕಾನೂನಿನ ಆಡಳಿತಕ್ಕೆ ನೀಡಿದ ಗೌರವ ಇತ್ಯಾದಿಗಳಿಂದಾಗಿ ಈಗ ಇಂಗು ತಿಂದ ಮಂಗಗಳಂತಾಡುತ್ತಿದ್ದಾರೆ ಚೆಡ್ಡಿ ನಾಯಕರು.

ಉಡುಪಿ ಜಿಲ್ಲೆಯಲ್ಲಿ ಬಿಜೆಪಿ ನಾಯಕರು ಈ ಸಲ ತಮ್ಮ ತೀಟೆ ತೀರಿಸಿಕೊಳ್ಳಲು ಆರಿಸಿಕೊಂಡದ್ದು ಟಿಪ್ಪೂ ಕಾಲದ ಮಸೀದಿಯನ್ನು ಉಡುಪಿ ತಾಲ್ಲೂಕಿನ ಕೊಡವೂರು ಗ್ರಾಮದ ಪಳ್ಳಿಜೆಡ್ಡ ಎಂಬಲ್ಲಿರುವ ಕಲ್ಮತ್ ಜಾಮಾಯ ಮಸೀದಿಯ ಆವರಣದೊಳಗೆ ರಾತ್ರೋರಾತ್ರಿ ಮೂರ್ತಿ ತಂದಿಟ್ಟಿದ್ದಾರೆ ಕೋಮುವಾದಿಗಳು.


ಕೋಮುವಾದಿಗಳು ತಂದಿಟ್ಟ ಸ್ಟೀಲ್ ಗಣಪತಿ

ನಾಲ್ಕು ಕಬ್ಬಿಣದ ಕಂಬ ಊರಿ, ಸಿಮೆಂಟ್ ಶೀಟ್‌ಗಳನ್ನು ಹೊಡೆಸಿ ಇದರಡಿಯಲ್ಲಿ ಸ್ಟೀಲ್‌ನ ಸಣ್ಣದಾದ ಗಣಪತಿ ಮೂರ್ತಿಯನ್ನಿರಿಸಿದ್ದರು.

ಈ ರಾತ್ರಿ ಕಾರ್ಯಾಚರಣೆಗೆ ನೇತೃತ್ವ ನೀಡಿದವರು ಬಿಜೆಪಿ ನಾಯಕ, ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಕೆ.ಟಿ. ಪೂಜಾರಿ ಹಾಗೂ ಇವರ ಪುತ್ರ ಬಿಜೆಪಿ ಮುಖಂಡ, ಉಡುಪಿ ನಗರಸಭೆಯ ಮಾಜಿ ಸದಸ್ಯ ಕೆ.ಟಿ. ಪ್ರಸಾದ್.

ಸೆಪ್ಟೆಂಬರ್ 13ರಂದು ರಾತ್ರಿ 9 ಗಂಟೆಯ ನಂತರ, 14ರ ಬೆಳಿಗ್ಗೆ 6ರ ಮೊದಲು ಇಷ್ಟು ಕೆಲಸ ಮಾಡಿ ಮುಗಿಸಿದ ಬಿಜೆಪಿ ಕಾರ್ಯಕರ್ತರಿಗೂ, ಬೆಳಗ್ಗೆ ನಮಾಜ್‌ಗೆ ಆಗಮಿಸಿದ ಸ್ಥಳೀಯ ಮುಸ್ಲಿಮರಿಗೂ ಸಹಜವಾಗಿಯೇ ಮಾತಿನ ಚಕಮಕಿಯೂ ನಡೆದಿದೆ.

ಆದರೆ, ಮುಸ್ಲಿಮರು ಕೋಮುವಾದಿಗಳ ಪ್ರಚೋದನೆಗೆ ಒಳಗಾಗದೆ, ಶಾಂತಿ ಕಾಪಾಡಿಕೊಳ್ಳಲು ಯಶಸ್ವಿಯಾದರು. ಮುಸ್ಲಿಮರೇ ಸ್ವತಃ ಪೊಲೀಸರಿಗೆ ಫೋನ್ ಮಾಡಿ ವಿಷಯ ತಿಳಿಸಿದರು. ಸೂಕ್ತ ಬಂದೋಬಸ್ತ್‌ಗೆ ವಿನಂತಿಸಿ ಅಶಾಂತಿ ಸೃಷ್ಟಿಯಾಗದಂತೆ ಎಚ್ಚರಿಕೆ ತೆಗೆದುಕೊಂಡರು.



ಮೂರ್ತಿ ಇರಿಸಿದ ಸ್ಥಳ ನಮ್ಮ ಕುಮ್ಕಿ ಭೂಮಿ. ಆರ್‌ಟಿಸಿಯಲ್ಲಿ ಸರಕಾರದ ಸ್ಥಳ ಎಂದು ದಾಖಲಿಸಿದೆ ಎಂದು ಮೊಂಡುವಾದ ಮಾಡುತ್ತಾ ಮಸೀದಿ ಆವರಣದಲ್ಲಿ ಮೂರ್ತಿ ತಂದಿಟ್ಟ ಕೆ.ಟಿ.ಪೂಜಾರಿ ಅಂಡ್ ಗ್ಯಾಂಗ್ ಈಗ ಕುಂಡೆ ಸುಟ್ಟ ಬೆಕ್ಕಿನಂತಾಡುತ್ತಿದ್ದಾರೆ.

200ಕ್ಕೂ ಅಧಿಕ ವರ್ಷಗಳ ಇತಿಹಾಸ ಹೊಂದಿರುವ ಕಲ್ಮತ್ ಜಾಮಿಯಾ ಮಸೀದಿ 1993ರ ಡಿಸೆಂಬರ್ 10ರಂದು 'ಕರ್ನಾಟಕ ಸ್ಟೇಟ್ ಬೋರ್ಡ್ ಆಫ್ ವಕ್ಫ್' ಸಂಸ್ಥೆಯಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ 518ನೆಯ ಅಧಿಕೃತ ಮಸೀದಿಯಾಗಿ ನೋಂದಾವಣೆಗೊಂಡಿದೆ.

ನೋಂದಣಿಯಾಗುವ ಮುನ್ನ ತಾ.24-9-93ರಂದು ಬೋರ್ಡ್ ಆಫ್ ವಕ್ಫ್ ಕಾನೂನುಪ್ರಕಾರ ಸಾರ್ವಜನಿಕ ನೋಟೀಸ್ ಹೊರಡಿಸಿದೆ. ಜಿಲ್ಲಾಧಿಕಾರಿ ಕಚೇರಿ, ತಹಸೀಲ್ದಾರ್‌ರವರ ಕಚೇರಿ, ಗ್ರಾಮಪಂಚಾಯತ್ ಕಾರ್ಯಾಲಯಗಳ ನೋಟೀಸ್ ಬೋರ್ಡ್‌ಗಳಲ್ಲಿ ಈ ಸಂಬಂಧದ ತಿಳುವಳಿಕಾ ಪತ್ರವನ್ನು ಒಂದು ತಿಂಗಳ ಕಾಲ ಪ್ರದರ್ಶಿಸಲಾಗಿತ್ತು.

ಯಾರ ಆಕ್ಷೇಪವೂ ದಾಖಲಾಗದ ಹಿನ್ನೆಲೆಯಲ್ಲಿ ಕಲ್ಮತ್ ಜಾಮಿಯಾ ಮಸೀದಿಯನ್ನು ಕರ್ನಾಟಕ ಬೋರ್ಡ್ ಆಫ್ ವಕ್ಫ್ ನಿಯಮಾನುಸಾರ ನೋಂದಣಿ ಮಾಡಿಕೊಂಡಿದೆ.

ಈ ಮಸೀದಿಯ ಹೆಸರಲ್ಲಿ 1960ರ ಸುಮಾರಿಗೆ 4.60 ಎಕರೆ ಭೂಮಿ ಇತ್ತು. ಕೆಲವು ಜನರು ಒತ್ತುವರಿ ಮಾಡುತ್ತಾ ಹೋದಂತೆ ಮಸೀದಿಗೆ ಉಳಿದ ಭೂಮಿ ಕೇವಲ 0.67 ಎಕರೆ ಮಾತ್ರ. ಇದನ್ನೂ ಕಳೆದುಕೊಳ್ಳಬಾರದೆಂದು ಆಡಳಿತ ಮಂಡಳಿಯವರು ಮಸೀದಿಯನ್ನು ಬೋರ್ಡ್ ಆಫ್ ವಕ್ಫ್‌ನಲ್ಲಿ ನೋಂದಣಿ ಮಾಡಿಸಿಕೊಂಡಿದೆ.

ಚೆಡ್ಡಿಗಳ ಸಂಚು ಮೊದಲಿನದಲ್ಲ

ಮಸೀದಿ ಆವರಣದಲ್ಲಿ ಸ್ಟೀಲ್‌ನ ಮೂರ್ತಿಯನ್ನು ತಂದಿಟ್ಟು ವಿವಾದ ಸೃಷ್ಟಿಸಿದ್ದು ಮೊದಲ ಬಾರಿಯಾದರೂ, ಕೋಮುವಾದಿಗಳು ಜಗಳಕ್ಕೆ ಕಾಲು ಕೆರೆದು ಬಂದುದು ಮಾತ್ರ ಇದೇ ಮೊದಲಲ್ಲ.

ಕೆಲವು ವರ್ಷಗಳ ಹಿಂದೆ ಬಿಜೆಪಿ ನಾಯಕ ಕೆ.ಟಿ.ಪೂಜಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗುವ ಮೊದಲು ವಿವಾದಕ್ಕೆ ಅಡಿಗಲ್ಲು ಹಾಕಿದ್ದರು.

ಮಸೀದಿಗೆ ಸೇರಿದಂತೆ 0.67 ಎಕರೆ ಸ್ಥಳದಲ್ಲಿ ಅಂಗನವಾಡಿ ನಿರ್ಮಾಣಕ್ಕೆ 5 ಸೆಂಟ್ಸ್, ಹಾಲು ಉತ್ಪಾದಕರ ಸಹಕಾರಿ ಸಂಘದ ಕಟ್ಟಡ ನಿರ್ಮಾಣಕ್ಕೆ 5 ಸೆಂಟ್ಸ್ ಮತ್ತು ಮಹಿಳಾ ಸಮಾಜದ ಕಟ್ಟಡ ನಿರ್ಮಿಸಲು 10 ಸೆಂಟ್ಸ್ ಭೂಮಿಯನ್ನು ಮಂಜೂರು ಮಾಡಬೇಕೆಂದು ಕೋರಿ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿ ಸ್ವೀಕರಿಸಿದ ಅಂದಿನ ತಹಶೀಲ್ದಾರರು ಮಸೀದಿ ಆಡಳಿತ ಮಂಡಳಿಗೆ ಪತ್ರ ಬರೆದು ಅಭಿಪ್ರಾಯ ಕೇಳಿದ್ದರು. ಈಗಾಗಲೇ ನಾಲ್ಕೆಕರೆ ಭೂಮಿ ಕಳೆದುಕೊಂಡಿದ್ದ ಆಡಳಿತ ಮಂಡಳಿ ಉಳಿದ ಭೂಮಿಯನ್ನು ಕಳೆದುಕೊಳ್ಳಲು ಮುಂದಾಗದೆ ತಹಶೀಲ್ದಾರ್ ಅವರಿಗೆ ಆಕ್ಷೇಪಣಾ ಪತ್ರ ಬರೆದಿದ್ದರು. ಈ ಹಿನ್ನೆಲೆಯಲ್ಲಿ ತಹಶೀಲ್ದಾರ್‌ರವರು ಬಿಜೆಪಿ ಕಾರ್ಯಕರ್ತರ ಅರ್ಜಿಯನ್ನು ನಿರಾಕರಿಸಿ ವಿಲೇವಾರಿಗೊಳಿಸಿ ಮಂಗಳ ಹಾಡಿದರು.

ಈ ಪ್ರಕರಣದಲ್ಲಿ ಮುಖಭಂಗ ಅನುಭವಿಸಿದ್ದ ಬಿಜೆಪಿ ನಾಯಕ ಕೆ.ಟಿ. ಪೂಜಾರಿ ಮುಂದಿನ ಬೆಳವಣಿಗೆಯಲ್ಲಿ ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿಬಿಟ್ಟರು. ಇದರ ಬೆನ್ನಿಗೆ ಇವರ ಪುತ್ರರತ್ನ ಕೆ.ಟಿ.ಪ್ರಸಾದ್ ನಗರಸಭಾ ಸದಸ್ಯನಾಗಿಬಿಟ್ಟ! ಇನ್ನು ಕೇಳಬೇಕೆ?

ರಾತ್ರೋರಾತ್ರಿ ಮಸೀದಿ ಆವರಣದೊಳಗೆ ನಗರಸಭೆ ವತಿಯಿಂದ ಮೇಲ್ಮಟ್ಟದ ನೀರಿನ ಟ್ಯಾಂಕ್‌ಗಾಗಿ ಜೆಸಿಬಿ ಮೂಲಕ ದೊಡ್ಡದಾದ ಹೊಂಡ ತೋಡಿದರು. ಕಾಮಗಾರಿ ಮುಂದುವರೆಯುತ್ತಿದ್ದಂತೆಯೇ ಮಸೀದಿ ಆಡಳಿತ ಮಂಡಳಿ ನ್ಯಾಯಾಲಯದಿಂದ ಕಾಮಗಾರಿಗೆ ತಡೆಯಾಜ್ಞೆ ತಂದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಶಾಂತಿ ಸಭೆ ನಡೆಯಿತು. ಜಿಲ್ಲಾಧಿಕಾರಿ ಆದೇಶದಂತೆ ನಗರಸಭೆ ವತಿಯಿಂದಲೇ ತೋಡಿದ ಹೊಂಡವನ್ನು ಮಣ್ಣು ಹಾಕಿ ಮುಚ್ಚಲಾಯಿತು.

ಉಡುಪಿ ಕೋರ್ಟ್ ಯಥಾಸ್ಥಿತಿಯನ್ನು ಮುಂದುವರೆಸಲು ಆದೇಶಿಸಿತು. ಇದೀಗ ಬಿಜೆಪಿ ಪುಂಡರು ನ್ಯಾಯಾಲಯದ ಯಥಾಸ್ಥಿತಿ ಆದೇಶವನ್ನು ಪಾಲಿಸದೆ ಉಲ್ಲಂಘಿಸಿದ್ದಾರೆ.

ನಗರಸಭೆಯಿಂದ, ಜಿಲ್ಲಾಡಳಿತದಿಂದ, ನ್ಯಾಯಾಲಯದಿಂದ - ಹೀಗೆ ಎಲ್ಲಾ ಕಡೆಯಿಂದಲೂ ಮಹಾಮಂಗಳಾರತಿ ಎತ್ತಿಸಿಕೊಂಡರೂ, ಕೋಮುವಾದಿ ಸಂಘಪರಿವಾರದ ಮುಖಂಡರಿಗೆ ಬುದ್ಧಿಬಂದಿಲ್ಲ.


ವಿಶೇಷವೆಂದರೆ; ಮೂರು ಬಾರಿಯೂ ಕೋಮುವಾದಿ ಭಯೋತ್ಪಾದಕರು ಕಾರ್ಯಾಚರಣೆ ನಡೆಸಿದ್ದು ರಾತ್ರಿಯೇ. ಪ್ರತಿ ಸಲವೂ ಶನಿವಾರವಾಗಿತ್ತು!

ಆಶ್ಚರ್ಯವೆಂದರೆ ಮಸೀದಿ ಆಡಳಿತ್ ಮಂಡಳಿ ಕಡೆಗೆ ಇಷ್ಟೆಲ್ಲಾ ನ್ಯಾಯವಿದ್ದರೂ ಹಾಲಿ ಜಿಲ್ಲಾಡಳಿತ ಇನ್ನೂ ಅಕ್ರಮವಾಗಿ ತಂದಿರುವ ಮೂರ್ತಿಯನ್ನು ತೆರವುಗೊಳಿಸಿಲ್ಲ.

ಎರಡೆರಡು ಸಲ ಸಭೆ ನಡೆಸಿದರೂ, ಯಾವ ನಿರ್ಣಯವನ್ನೂ ಕೈಗೊಳ್ಳದೆ, ಮೂರ್ತಿಯನ್ನೂ ತೆರವುಗೊಳಿಸದೆ ಜಿಲ್ಲಾಡಳಿತ ಸಂಘಪರಿವಾರದ ಅನ್ಯಾಯವನ್ನು ಪರೋಕ್ಷವಾಗಿ ಬೆಂಬಲಿಸಿ ಪ್ರೋತ್ಸಾಹಿಸಿದೆ.

ಶಾಂತಿಪ್ರಿಯ ಮುಸ್ಲಿಮ್ ಸಮುದಾಯದ ಜನರು ಯಾವುದೇ ಪ್ರಚೋದನೆಗೆ ಒಳಗಾಗದೆ, ಕಾನೂನಿನ ಆಡಳಿತಕ್ಕೆ ವಿವಾದವನ್ನು ಮುಕ್ತವಾಗಿ ಹಸ್ತಾಂತರಿಸಿದೆ. ಉಡುಪಿ ಜಿಲ್ಲೆಗೆ ಬೆಂಕಿ ಹಚ್ಚುವ ಬಿಜೆಪಿ ನಾಯಕರ ಷಡ್ಯಂತ್ರವನ್ನು ಸಂಪೂರ್ಣವಾಗಿ ವಿಫಲಗೊಳಿಸಿದ್ದಾರೆ.

■ ಶ್ರೀರಾಮ ದಿವಾಣ



ಹಿಂದೂ ಭಯೋತ್ಪಾದಕರಿಂದ ಅತ್ಯಾಚಾರ-ಸಜೀವ ದಹನ

ಇದೊಂದು ಹೃದಯವಿದ್ರಾವಕ ದುರಂತ ಘಟನೆ.

ಒರಿಸ್ಸಾದಲ್ಲಿ ವಿಶ್ವಹಿಂದೂ ಪರಿಷತ್ ಹಾಗೂ ಭಜರಂಗ ದಳಗಳೆಂಬ ಹಿಂದೂ ಟೆರರಿಸ್ಟರಿಂದ ದಲಿತರು ಹಾಗೂ ಕ್ರಿಶ್ಚಿಯನ್ನರ ಮೇಲೆ ಬಿಟ್ಟೂಬಿಡದೆ ನಡೆಯುತ್ತಿರುವ ಹತ್ಯೆ ಹಲ್ಲೆ ದಾಳಿಗಳು ಈಗಲೂ ನಿಂತಿಲ್ಲ.

ಬಿಜೆಪಿ ಬೆಂಬಲಿತ ನವೀನ್ ಪಟ್ನಾಯಕ್ ಸರ್ಕಾರ ಹಾಗೂ ಪೊಲೀಸರ ಸಂಪೂರ್ಣ ಸಹಕಾರದೊಂದಿಗೆ ನಡೆಯುತ್ತಿರುವ ಈ ಜನಾಂಗೀಯ ಹತ್ಯೆಗೆ ಮೊನ್ನೆ ರಜನಿ ಎಂಬ ಬಾಲೆ ಬಲಿಯಾಗಿದ್ದಾಳೆ. ಕುಷ್ಠರೋಗಿಗಳಿಗಾಗಿ ಕ್ರಿಶ್ಚಿಯನ್ ಅನಾಥಾಲಯದಲ್ಲಿ ಕೆಲಸ ಮಾಡುತ್ತಿದ್ದ ಆದಿವಾಸಿ ದಲಿತ ಯುವತಿ ರಜನಿಯನ್ನು ಹಿಡಿದು ಅತ್ಯಾಚಾರವೆಸಗಿ ನಂತರ ಆಕೆಯ ಕೈಕಾಲು ಕಟ್ಟಿಹಾಕಿ ಉರಿವ ಬೆಂಕಿಗೆಸೆದಿದ್ದಾರೆ ಹಿಂದೂ ಟೆರರಿಸ್ಟರು.

ಆಗಸ್ಟ್ 25ರಂದು ನಡೆದ ಈ ಬರ್ಬರ ಘಟನೆ ಈಗ ಬೆಳಕಿಗೆ ಬಂದಿದೆ.

ಹಿಂದೂ ಧರ್ಮ ರಕ್ಷಕರೆಂಬ ಸೋಗಿನ ಫ್ಯಾಸಿಸ್ಟ್ ರಕ್ಕಸರಿಗೆ ಮನುಷ್ಯತ್ವವೇ ಇಲ್ಲ ಎಂಬುದಕ್ಕೆ ಈ ದುರ್ಘಟನೆ ಇನ್ನೊಂದು ಸಾಕ್ಷಿಯಾಗಿದೆ.

ದಕ್ಷಿಣ ಒರಿಸ್ಸಾದ ಬರ್‌ಗಾರ್ ಜಿಲ್ಲೆಯ ಪದ್ಮಪುರ ಗ್ರಾಮದಲ್ಲಿರುವ ಈ ಕ್ರಿಶ್ಚಿಯನ್ ಅನಾಥಾಲಯ ಕಳೆದ 25 ವರ್ಷಗಳಿಂದ ಅನಾಥ ಕುಷ್ಠರೋಗಗಳಿಗೆ ನೆಲೆ ಕಲ್ಪಿಸಿಕೊಟ್ಟಿತ್ತು.

ರಜನಿ ಇಲ್ಲಿಗೆ ಬಂದು ಸೇರಿದ್ದೇ ಇನ್ನೊಂದು ದುರಂತ ಕತೆಯಾಗಿದೆ.

ಒರಿಸ್ಸಾದ ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ 'ವಂಶೋದ್ಧಾರಕ ಗಂಡು ಮಕ್ಕಳಿಗಾಗಿ' ಹಂಬಲಿಸುವ ಹಳೇ ಮೌಲ್ಯಗಳಿವೆ. ಅಂತಹ ಕುಟುಂಬಗಳಲ್ಲಿ ಐದಾರು ಹೆಣ್ಣುಮಕ್ಕಳು ಹುಟ್ಟಿದರೂ ಗಂಡು ಮಗುವಿಗಾಗಿನ ಹಂಬಲ ನಿಂತಿರುವುದಿಲ್ಲ.

ಇಂತದ್ದೇ ಒಂದು ಬಡ ಕುಟುಂಬದಲ್ಲಿ ಐದನೇ ಹೆಣ್ಣುಮಗಳಾಗಿ ಹುಟ್ಟಿದವಳು ರಜನಿ. ಆದರೆ ಬಡತನದ ಬೇಗೆ ತಾಳಲಾರದ ಅವಳ ತಂದೆತಾಯಿ ರಜನಿಯನ್ನು ಮಕ್ಕಳಿರದಿದ್ದ ಆದಿವಾಸಿ ದಂಪತಿಗಳಿಗೆ ದತ್ತು ನೀಡಿದರು.

ದತ್ತುಮಗಳಾಗಿ ಹೊಸ ಮನೆಗೆ ಹೋದರೂ ದುರಾದೃಷ್ಟ ರಜನಿಯ ಬೆನ್ನು ಬಿಡಲಿಲ್ಲ. ಕೆಲಕಾಲದಲ್ಲೇ ಆ ದಂಪತಿಗಳಿಗೆ ಒಂದು ಗಂಡುಮಗು ಹುಟ್ಟಿದ ಕಾರಣ ಅವರು ದತ್ತುಪುತ್ರಿ ರಜನಿಗೆ ಹಿಂಸೆ ನೀಡಿ ಮನೆ ತೊರೆಯುವಂತೆ ನೋಡಿಕೊಂಡರು. ಅಸಹಾಯಕಳಾಗಿದ್ದ ರಜನಿಗೆ ಆಗ ಆಶ್ರಯ ನೀಡಿದ್ದೇ ಪದ್ಮಪುರದ ಕ್ರಿಶ್ಚಿಯನ್ ಅನಾಥಾಲಯ.

ಅಲ್ಲಿನ ಫಾದರ್ ಸಿಕ್ವೇರಾರವರ ಮಾರ್ಗದರ್ಶನದಲ್ಲಿ ಕುಷ್ಠರೋಗಿಗಳ ಅನಾಥಾಲಯದಲ್ಲಿ ಕೆಲಸ ಮಾಡುತ್ತಲೇ ತನ್ನ ಅನ್ನ ಸಂಪಾದಿಸಿಕೊಳ್ಳುತ್ತಾ ಅದೇ ಊರಿನಲ್ಲಿ ಕಾಲೇಜಿಗೆ ಸೇರಿ ಓದು ಮುಂದುವರೆಸಿದ್ದ ರಜನಿಗೆ ತನ್ನ ಬದುಕು-ಭವಿಷ್ಯದ ಬಗ್ಗೆ ಆತ್ಮವಿಶ್ವಾಸ ಮೂಡಿತ್ತು.

ಆಗ ಹಿಂದೂ ಟೆರರಿಸಂ ಬಗ್ಗೆ ಆಕೆಗೆ ಕಲ್ಪನೆಯೂ ಇರಲಿಲ್ಲವೆಂದು ಕಾಣುತ್ತದೆ.


ಆಗಸ್ಟ್ 25ರ ಮಧ್ಯಾಹ್ನ ಈ ಅನಾಥಾಲಯಕ್ಕೆ ನುಗ್ಗಿದ ವಿಶ್ವಹಿಂದೂ ಪರಿಷತ್‌ನ ಜನ ಕಟ್ಟಡಕ್ಕೆ ಬೆಂಕಿ ಹಚ್ಚಿ ಫಾದರ್ ಸಿಕ್ವೇರಾರಿಗೆ ಕಬ್ಬಿಣದ ರಾಡ್‌ಗಳಿಂದ ಬಡಿದಿದ್ದಾರೆ. ಅನಾಥ ಮಕ್ಕಳೊಂದಿಗೆ ಜೀವಭಯದಿಂದ ಅಡಗಿಕೊಂಡಿದ್ದ ರಜನಿ ಕ್ರಿಶ್ಚಿಯಾನಿಟಿಗೆ ಮತಾಂತರಗೊಂಡಿದ್ದಾಳೆ ಎಂದು ಈ ಭಯೋತ್ಪಾದಕರು ಆರೋಪಿಸಿದ್ದಾರೆ. ರಜನಿಯನ್ನು ಹೊರಗೆಳೆದು ಗ್ಯಾಂಗ್ ರೇಪ್ ಮಾಡಿದ್ದೇ ಅಲ್ಲದೆ ಅವಳ ಕೈಕಾಲು ಕಟ್ಟಿಹಾಕಿ ಅವರಾಗಲೇ ಬೆಂಕಿ ಹಚ್ಚಿದ್ದ ಕಟ್ಟಡದೊಳಕ್ಕೇ ತಳ್ಳಿದ್ದಾರೆ.

'ಫಾದರ್ ನನ್ನ ಕಾಪಾಡಿ, ಇವರು ನನಗೆ ಬೆಂಕಿ ಹಚ್ಚುತ್ತಿದ್ದಾರೆ' ಎಂಬ ಮೊರೆಯೊಂದೇ ಸಿಕ್ವೇರಾಗೆ ಕೇಳಿಸಿದ್ದು. ಆಗ ಪೆಟ್ಟುತಿಂದು ಬಿದ್ದ ಫಾದರ್ ಸಿಕ್ವೇರಾ ಮೊನ್ನೆ ಚೇತರಿಸಿಕೊಂಡು ಹೊರಬಂದು ಈ ಅತ್ಯಾಚಾರ ಮತ್ತು ಸಜೀವದಹನವನ್ನು ಬಹಿರಂಗಪಡಿಸಿದ್ದಾರೆ. ಇದನ್ನು ಒಪ್ಪದ ಪೊಲೀಸರು 'ಇಲ್ಲ ರಜನಿ ಮೇಲೆ ಅತ್ಯಾಚಾರ ನಡೆಯಲೇ ಇಲ್ಲ' ಎನ್ನುತ್ತಿದ್ದಾರೆ. ಆಕೆಯ ಹತ್ಯೆ ಒಂದು ಸಹಜ ವಿದ್ಯಮಾನವೆಂಬಂತೆ ಪರಿಗಣಿಸಿರುವ ಪೊಲೀಸರು ಅತ್ಯಾಚಾರ ಮಾತ್ರ ನಡೆದೇ ಇಲ್ಲ ಎಂದು ಯಾವ ಆಧಾರದ ಮೇಲೆ ಹೇಳುತ್ತಿದ್ದಾರೆ ಗೊತ್ತೆ?

ಹಿಂದೂ ಭಯೋತ್ಪಾದಕರು ರಜನಿಗೆ ಬೆಂಕಿ ಹಚ್ಚುತ್ತಿದ್ದಾಗ ಎಂಟು ಮಂದಿ ಪೊಲೀಸರು ಸ್ಥಳದಲ್ಲೇ ನೋಡುತ್ತಾ ನಿಂತಿದ್ದರಂತೆ. ■

ಎಡಬಿಡಂಗಿಯಾದ ಮಹೇಂದ್ರ

ಈಗ ರಾಜ್ಯದಾದ್ಯಂತ ಮತಾಂತರ ಕುರಿತು ಚರ್ಚೆ ನಡೆಯುತ್ತಿದೆ. ಎಂದೋ ಮತಾಂತರಗೊಂಡವರನ್ನು ಗುರಿಯಾಗಿಸಿಕೊಂಡು ಹಲ್ಲೆಗಳನ್ನು ನಡೆಸಲಾಗುತ್ತಿದೆ. ಕಾವಿಯೊಳಗೆ ಚೆಡ್ಡಿ ತೊಟ್ಟ ಸ್ವಾಮೀಜಿಗಳು ಇದನ್ನೊಂದು ದೊಡ್ಡ ಚರ್ಚೆಯ ವಿಷಯವನ್ನಾಗಿ ಮಾಡುತ್ತಿದ್ದಾರೆ. ಅನವಶ್ಯಕವಾಗಿ ನಡೆಯುತ್ತಿರುವ ಈ ಚರ್ಚೆಯಲ್ಲಿ ಭಾಗವಹಿ ಮಿಂಚಬೇಕೆಂದಿದ್ದ ಮಹೇಂದ್ರ ಕುಮಾರ ಜೈಲಿನಲ್ಲಿ ಸರಳು ಎಣಿಸುತ್ತಾ ಕುಳಿತಿದ್ದಾನೆ!



ಭಜರಂಗದಳದ ಸೋಕಾಲ್ಡ್ ನಾಯಕ ಮಹೇಂದ್ರ ಕುಮಾರ್ ಅತಂತ್ರನಾಗಿದ್ದಾನೆ. ನಿರೀಕ್ಷೆಯಂತೆ ಸಂಘ ಪರಿವಾರ ಎಚ್ಚರಿಕೆಯ ಹೆಜ್ಜೆ ಇಟ್ಟು ಈ 'ರೌಡಿ ರಾಮಭಕ್ತ'ನನ್ನು ಮನೆಗೆ ಕಳುಹಿಸಿದೆ. ಈ ರೀತಿ ಚೆಡ್ಡಿಗಳು ತಮ್ಮ ಸಿದ್ಧಾಂತಕ್ಕಾಗಿ ಹೋರಾಟ ಮಾಡಿದವರನ್ನು ನಡು ನೀರಲ್ಲಿ ಕೈಬಿಟ್ಟಿರುವುದು ಇದೇ ಮೊದಲೇನೂ ಅಲ್ಲ. ಈ ಹಿಂದೆ ಪ್ರಮೋದ್ ಮುತಾಲಿಕ್ ಮತ್ತೋರ್ವ ಎಂಬ ಎಡಬಿಡಂಗಿ ನಾಯಕನನ್ನು ಇದೇ ರೀತಿಯಾಗಿ ಭಜರಂಗದಳದಿಂದ ಹೊಡೆದೋಡಿಸಲಾಗಿತ್ತು. ಈಗ ಮಹೇಂದ್ರ ಕುಮಾರನ ಸರದಿ.

ಭಜರಂಗದಳ ಸಂಘಪರಿವಾರದ ಸಂಘಟನೆಯಾದರೂ ಹುಂಬರನ್ನು, ಎಡಬಿಡಂಗಿಗಳನ್ನು, ಹುಚ್ಚು ಹುಚ್ಚಾಗಿ ಮಾತನಾಡುವವರನ್ನು ಈ ಸಂಘಟನೆಯ ನಾಯಕರನ್ನಾಗಿ ನೇಮಿಸಲಾಗುತ್ತದೆ. ರಾಜ್ಯದಲ್ಲಿಯಂತೂ ಭಜರಂಗದಳವನ್ನು ಸಂಘಪರಿವಾರದ ಶೂದ್ರರ ಸಂಘಟನೆ ಎಂದೇ ಗುರುತಿಸಬಹುದು. ಏಕೆಂದರೆ ಈ ಸಂಘಟನೆಯಲ್ಲಿರುವ ಹೆಚ್ಚಿನವರು ಶೂದ್ರರು. ಇದಕ್ಕೆ ಕಾರಣವೂ ಇದೆ. ಇದೊಂದು ರೀತಿಯಲ್ಲಿ ಹೊಡಿ-ಬಡಿ ಸಂಘಟನೆ. ಹೊಡೆದಾಟಕ್ಕೆ, ದಾಳಿಗಳಿಗೆ ಸಂಘಪರಿವಾರದ ಬ್ರಾಹ್ಮಣರು ಮೊದಲಿನಿಂದಲೂ ಛೂ ಬಿಡುತ್ತಾ ಬಂದಿರುವುದು ಶೂದ್ರರನ್ನೇ ತಾನೆ? ಚರ್ಚುಗಳ ಮೇಲಿನ ದಾಳಿ ಸಂದರ್ಭದಲ್ಲಿ ಮಾಡಿದ್ದೂ ಇದನ್ನೇ. ಪರಿಣಾಮವನ್ನು ಲೆಕ್ಕಹಾಕುವಷ್ಟು ತಿಳಿವಳಿಕೆ ಇಲ್ಲದ ಶೂದ್ರ ಹುಡುಗರ ತಲೆಕೆಡಿಸಿ ಈ ದಾಳಿಗೆ ಬಳಸಿಕೊಳ್ಳಲಾಗಿತ್ತು. ಅವರೆಲ್ಲಾ ಈಗ ಮೈತುಂಬಾ ಕೇಸು ಹಾಕಿಸಿಕೊಂಡು, ಕಂಬಿ ಎಣಿಸುತ್ತಾ ಕುಳಿತಿದ್ದಾರೆ.

ಮಹೇಂದ್ರ ಕುಮಾರ ಎಂಬ ಹುಂಬನದೂ ಇದೇ ಕಥೆ. ಚಿಕ್ಕಮಗಳೂರು ಜಿಲ್ಲೆ ಕೊಪ್ಪ ಭಾಗದಲ್ಲಿ ಗಂಧ-ಗಿಂದ ಕದ್ದು ಸಾಗಿಸಿಕೊಂಡು ಒಂದಿಷ್ಟು ದುಡ್ಡು ಮಾಡಿಕೊಂಡು, ಓಡಾಡುತ್ತಿದ್ದ ಈ ಒಕ್ಕಲಿಗರ ಹುಡುಗ ವಿದ್ಯಾವಂತನೇನೂ ಅಲ್ಲ. ಹೀಗಾಗಿ ಸಂಘಪರಿವಾರದ ಆವೇಶದ ಮಾತಿಗೆ ಬಲಿಯಾಗಿ, ಹುಚ್ಚು ಕೆಲಸ ಮಾಡುತ್ತಾ ಹೆಸರು ಮಾಡುತ್ತಿದ್ದ. ಬಾಬಾಬುಡನ್‌ಗಿರಿ ವಿಷಯಕ್ಕೆ ಸಂಬಂಧಿಸಿದಂತೆ ಬಾಯಿಗೆ ಬಂದಹಾಗೆ ಮಾತನಾಡಿ, ಸಂಘಪರಿವಾರದ ಪ್ಲಾನ್ನೆಲ್ಲಾ ಮೇಲೆ-ಕೆಳಗೆ ಮಾಡಿದ ಕಾರಣಕ್ಕೆ ಪ್ರಮೋದ್ ಮುತಾಲಿಕ್ ಎಂಬ ಹುಚ್ಚನನ್ನು ಓಡಿಸಿದ ಚೆಡ್ಡಿಗಳು ಈ 'ಸಂಚಾಲಕ' ಹುದ್ದೆಗೆ ಯಾರನ್ನು ನೇಮಿಸಬೇಕೆಂದು ಹುಡುಕಾಟ ನಡೆಸುತ್ತಿದ್ದಾಗ ಕಣ್ಣಿಗೆ ಬಿದ್ದವನೇ ಈ ಮಹೇಂದ್ರ ಕುಮಾರ.

ಹಿಂದೂ ಸಮಾವೇಶಗಳ ಮೂಲಕ ರಾಜ್ಯದಾದ್ಯಂತ ಅನಾಹುತ ಸೃಷ್ಟಿಸಲು ಹೊರಟಿದ್ದ ಪ್ರಮೋದ್ ಮುತಾಲಿಕ್‌ನ ಮೇಲೆ ಪೊಲೀಸರು ಸಿಕ್ಕಸಿಕ್ಕಲ್ಲಿ ಕೇಸು ಜಡಿದಿದ್ದರು. ಅರೆಸ್ಟ್ ಮಾಡಿ ಜೈಲಿಗೂ ಕಳುಹಿಸಲಾಗಿತ್ತು. ಈತ ಅಪರಾಧಿ ಎಂಬುದು ಸಾಬೀತಾಗುತ್ತದೆ ಎಂಬುದು ಗೊತ್ತಾಗುತ್ತಿದ್ದಂತೆಯೇ ಆತನನ್ನು ಭಜರಂಗದಳದಿಂದ ಕಿತ್ತೊಗೆಯಲಾಗಿತ್ತು. ಈಗ ಮಹೇಂದ್ರ ಕುಮಾರನ ವಿಷಯದಲ್ಲಿಯೂ ಹಾಗೇ ಮಾಡಲಾಗಿದೆ. ಚರ್ಚುಗಳ ಮೇಲೆ ದಾಳಿ ನಡೆಸುವಂತೆ ಸೂಚನೆಗಳನ್ನು ನೀಡಿದ್ದ ಸಂಘಪರಿವಾರದ ಬ್ರಾಹ್ಮಣ ನಾಯಕರು ಮಹೇಂದ್ರ ಕುಮಾರನನ್ನು ಪೊಲೀಸರು ಬಂಧಿಸಿ, ಸಿಕ್ಕಾಪಟ್ಟೆ ಕೇಸು ಹಾಕುತ್ತಿದ್ದಂತೆಯೇ ಆತನನ್ನು ಭಜರಂಗದಳದಿಂದ ಕಿತ್ತೊಗೆದಿದ್ದಾರೆ. ಮಹೇಂದ್ರಕುಮಾರ್ ಅಪರಾಧಿ ಎಂದು ಸಾಬೀತಾದಲ್ಲಿ, ಅದರ ಹೊಣೆಯನ್ನು ಸಂಘಟನೆ ಹೊತ್ತುಕೊಳ್ಳದೇ, ಮಹೇಂದ್ರ ಕುಮಾರನ ತಲೆಗೇ ಕಟ್ಟಿ, ಸಂಘಟನೆಯನ್ನು ಬಚಾವು ಮಾಡುವ ಉದ್ದೇಶ ಇದರ ಹಿಂದಿದೆ.

ಕಳೆದ ಆಗಸ್ಟ್ 25ರಂದು ಖಾನಾಪುರದಲ್ಲಿ ಸ್ಫೋಟಕ ತಯಾರಿಸುತ್ತಿದ್ದ ಇಬ್ಬರು ಭಜರಂಗದಳದ ಕಾರ್ಯಕರ್ತರು ಸ್ಫೋಟಕ್ಕೆ ಬಲಿಯಾಗಿದ್ದರು. ಅದಕ್ಕೂ ಮೊದಲು ಅಂದರೆ 2006ರ ಏಪ್ರಿಲ್‌ನಲ್ಲಿ ನಾಂದೇಡ್‌ನಲ್ಲಿ ಬಾಂಬ್ ತಯಾರಿಸುತ್ತಿದ್ದಾಗ ಇಬ್ಬರು ಭಜರಂಗಿ ನಾಯಕರು ಮೃತಪಟ್ಟಿದ್ದರು. ಆಗೆಲ್ಲಾ ಭಜರಂಗದಳ, ಸತ್ತವರು ಭಜರಂಗದಳಕ್ಕೆ ರಾಜೀನಾಮೆ ನೀಡಿ, ಹೊರ ಹೋಗಿದ್ದರು ಎಂಬ ಹೇಳಿಕೆ ನೀಡಿ, ಆರೋಪ ಮುಕ್ತವಾಗುವಲ್ಲಿ ಯಶಸ್ವಿಯಾಗಿತ್ತು. ಇದೇ ತಂತ್ರವನ್ನು ಭಜರಂಗದಳದ ರಾಷ್ಟ್ರೀಯ ಸಂಚಾಲಕ ಪ್ರಕಾಶ ಶರ್ಮ ಎಂಬ ಬ್ರಾಹ್ಮಣ ಈಗ ಇಲ್ಲಿಯೂ ಪ್ರಯೋಗಿಸಿದ್ದಾನೆ. ಹಳ್ಳಕ್ಕೆ ಬಿದ್ದಿದ್ದು ಮಾತ್ರ ಮಹೇಂದ್ರಕುಮಾರ್ ಎಂಬ ಪೆದ್ದ ಗೂಳಿ!

ಹೇಳಿದ್ದೊಂದು, ಮಾಡಿದ್ದೊಂದು!

ಭಜರಂಗದಳಕ್ಕೆ ಪ್ರೊಟೆಸ್ಟಂಟ್ ಸಮುದಾಯದ ಮೇಲೆ ಮಾತ್ರದಾಳಿ ನಡೆಸಬೇಕು ಎಂದು ಸಂಘಪರಿವಾರದ ನಾಯಕರು ಸೂಚಿಸಿದ್ದರು. ರಾಜ್ಯದಲ್ಲಿ

▶▶▶


ಮಹೇಂದ್ರಗೆ ಚಿಕ್ಕಮಗಳೂರು ಪತ್ರಕರ್ತರ ಬಹಿಷ್ಕಾರ!

ಪ್ರಾರ್ಥನೆ ಮಾಡುತ್ತಿದ್ದ ಬಸುರಿ ಹೆಂಗಸರ ಮೇಲೆ ಹಲ್ಲೆ ಮಾಡಿದವರು ಬೇರೆ ಯಾರನ್ನಾದರೂ ಬಿಟ್ಟಾರೆಯೇ? ಈ ಮಹೇಂದ್ರ ಕುಮಾರ ಈಗ ಚಿಕ್ಕಮಗಳೂರಿನ ಪತ್ರಕರ್ತರ ಮೇಲೆ ಎಗರಿ ಹೋಗಿದ್ದಕ್ಕೆ ಚಿಕ್ಕಮಗಳೂರು ಜಿಲ್ಲಾ ಪತ್ರಕರ್ತರು ಆತನಿಗೆ ಬಹಿಷ್ಕಾರದ ಶಿಕ್ಷೆ ವಿಧಿಸಿದ್ದಾರೆ.


ಆದದ್ದೇನೆಂದರೆ ಕೊಪ್ಪ ನ್ಯಾಯಾಲಯಕ್ಕೆ ಬಂದಿದ್ದ ಮಹೇಂದ್ರ ಕುಮಾರ್‌ನನ್ನು ಮಾತನಾಡಿಸಲೆಂದು ಕೊಪ್ಪ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ, 'ಕವಿಶೈಲ' ಪತ್ರಿಕೆಯ ಸಂಪಾದಕ ರವಿಕಾಂತ್ ಮತ್ತಿತರ ಪತ್ರಕರ್ತರು ಹೋಗಿದ್ದಾರೆ. ಆಗ ಮಹೇಂದ್ರ ಬಾಯಿಗೆ ಬಂದಹಾಗೆ ಮಾತನಾಡಿದ್ದಾನೆ.

'ನೀವೆಲ್ಲಾ ಶಾಸಕ ಜೀವರಾಜ್‌ನ ಚೇಲಾಗಳು ಆತ ದುಡ್ಡಿಗಾಗಿ ತನ್ನ ಹೆಂಡತಿಯನ್ನೂ ಮಾರಲು ಹೇಸದ ವ್ಯಕ್ತಿ. ಆತ ಕೊಡುವ ಜುಜುಬಿ ಕಾಸಿಗೆ ಬಾಯಿ ಬಿಟ್ಟು ಆತ ಹೇಳಿದ್ದನ್ನೆಲ್ಲಾ ಬರಿತೀದ್ದೀರಾ...' ಎಂದೆಲ್ಲಾ ಬಾಯಿಗೆ ಬಂದ ಹಾಗೆ ಮಾತನಾಡಿದ್ದಾನೆ.

ತನ್ನ ಬೆಂಬಲಕ್ಕೆ ಬಾರದ ಪತ್ರಕರ್ತರನ್ನು ಹೀಗೆ ಬೈಯುತ್ತಿದ್ದಂತೆಯೇ ಅವರೆಲ್ಲಾ ಸಿಟ್ಟಾಗಿ ಮಹೇಂದ್ರಕುಮಾರ್ ಸುದ್ದಿಗಳನ್ನು ಪ್ರಕಟಿಸುವುದಿಲ್ಲ ಎಂದು ಬಹಿಷ್ಕಾರ ಹಾಕುವ ತೀರ್ಮಾನಕ್ಕೆ ಬಂದಿದ್ದಾರೆ. ನಂತರ ತನ್ನ ಕೆಲ ಚೇಲಾಗಳನ್ನು ಕಳಿಸಿ, ಪತ್ರಕರ್ತರನ್ನು ಸಮಾಧಾನ ಪಡಿಸುವ ಯತ್ನ ನಡೆಸಿದರೂ ತಾಲ್ಲೂಕು ಸಾಹಿತ್ಯ ಪರಿಷತ್‌ನ ಅಧ್ಯಕ್ಷರೂ ಆಗಿರುವ ರವಿಕಾಂತ್ ಬಗ್ಗಿಲ್ಲ. ಜಿಲ್ಲಾ ಪತ್ರಕರ್ತರ ಸಂಘಕ್ಕೂ ಈ ಬಗ್ಗೆ ಮಾಹಿತಿ ನೀಡಿದ್ದಾರೆ. ಹೀಗಾಗಿ ಮಹೇಂದ್ರ ಕುಮಾರ್ ಬಹಿರಂಗವಾಗಿ ಕ್ಷಮೆಯಾಚಿಸುವವರೆಗೆ ಆತನ ಸುದ್ದಿಗಳನ್ನು ಪ್ರಕಟಿಸಲಾಗುವುದಿಲ್ಲ ಎಂದು ಜಿಲ್ಲಾ ಪತ್ರಕರ್ತರ ಸಂಘವೇ ತೀರ್ಮಾನ ತೆಗೆದುಕೊಂಡಿದೆ.



ಮತಾಂತರ ಮಾಡುತ್ತಿದ್ದಾರೆ ಎಂದು ಆರೋಪಿಸಿ ಈ ದಾಳಿ ಎಂದೆಲ್ಲಾ ಸೂಚನೆಗಳನ್ನು ನೀಡಲಾಗಿತ್ತು. ಆದರೆ ಮಹೇಂದ್ರ ಎಂಬ ಅವಿವೇಕಿ ಈ ಸೂಚನೆಯನ್ನು ಅರ್ಥಮಾಡಿಕೊಳ್ಳುವಲ್ಲಿ ನಾದ. ದುಡ್ಡುಕೊಟ್ಟು ಇಟ್ಟುಕೊಂಡಿರುವ ತನ್ನ 'ಬೆಂಬಲಿಗರಿಗೆ' ನಮುವಂತೆ ಹೇಳಿಯೇ ಬಿಟ್ಟ. ಅವರು ವಾಹನಗಳಲ್ಲಿ ಬಂದು ಗಳೂರು, ಮಂಗಳೂರು ಮತ್ತಿತರ ಕಡೆ ಪ್ರಾರ್ಥನಾಸ್ಥಳ, ಕೆಥೋಲಿಕ್ ಸೇರಿದ ಚರ್ಚುಗಳ ಮೇಲೂ ದಾಳಿ ನಡೆಸಿದರು. ಚೆಡ್ಡಿ ಸಿದ್ಧಾಂತದ ಗೆ ಬಲಿಯಾಗಿ ತಲೆಕೆಟ್ಟವರಂತೆ ವರ್ತಿಸುತ್ತಿರುವ ಈ ಭಜರಂಗಿಗಳಿಗೆ ಹೆಸರು ಮಾಡುವ ಹುಚ್ಚೊಂದೇ. ಹೀಗಾಗಿ ಚಿಕ್ಕಮಗಳೂರು ಜಯಪುರದಲ್ಲಿ ಪ್ರಾರ್ಥನೆಗೆ ಬಂದಿದ್ದ ಎಂಟು ತಿಂಗಳ ಬಸುರಿಯ ಹೊಡೆದರು. ಈ ಕ್ರೌರ್ಯಕ್ಕೆ ಕಾರಣವಾದ ಸಿದ್ಧಾಂತ ಯಾವುದಿದ್ದರೂ ಖಂಡಿಸಬೇಕಾಗಿತ್ತು. ಆದರೆ ಇವರನ್ನೇ ಹಿಂದೂ ಧರ್ಮದ



ಪರಿಪಾಲಕರೆಂದು ಬಣ್ಣಿಸಲಾಯಿತು. ಮುಖ್ಯಮಂತ್ರಿ ಯಡ್ಡಿ ಅವರನ್ನು ಬೆಂಬಲಿಸಿ ಮಾತನಾಡಿದ. 'ಕನ್ನಡ ಪ್ರಭ'ದಂತಹ ಪತ್ರಿಕೆಗಳು ಇದನ್ನೊಂದು 'ಹೋರಾಟ'ಎಂದೇ ವರದಿ ಮಾಡಿದವು. ಆದರೆ ಪ್ರಜ್ಞಾವಂತರಾದ ರಾಜ್ಯದ ಜನತೆ ಇದಕ್ಕೆ ವ್ಯಾಪಕ ಖಂಡನೆ ವ್ಯಕ್ತಪಡಿಸಿದರು.

ಭಜರಂಗದಳದ ಮೂಲಕ ಸಂಘ ಪರಿವಾರ ತನ್ನ ಉದ್ದೇಶ ಈಡೇರಿಸಿಕೊಂಡಿದೆ. ಇದನ್ನು ಚೆಡ್ಡಿ ಸಾಹಿತಿ ಚಿದಾನಂದಮೂರ್ತಿಯೇ ಬಹಿರಂಗ ಒಪ್ಪಿಕೊಂಡಿದ್ದಾನೆ. ಈಗ ರಾಜ್ಯದಾದ್ಯಂತ ಮತಾಂತರ ಕುರಿತು ನಡೆಯುತ್ತಿದೆ. ಎಂದೋ ಮತಾಂತರಗೊಂಡವರನ್ನು ಗುರಿಯಾಗಿಸಿ ು ಹಲ್ಲೆಗಳನ್ನು ನಡೆಸಲಾಗುತ್ತಿದೆ. ಕಾವಿಯೊಳಗೆ ಚೆಡ್ಡಿ ತೊಟ್ಟ ೀಜಿಗಳು ಇದನ್ನೊಂದು ದೊಡ್ಡ ಚರ್ಚೆಯ ವಿಷಯವನ್ನಾಗಿ ುತ್ತಿದ್ದಾರೆ. ಅನಾವಶ್ಯಕವಾಗಿ ನಡೆಯುತ್ತಿರುವ ಈ ಚರ್ಚೆಯಲ್ಲಿ ಭಾಗವಹಿಸಿ ಬೇಕೆಂದಿದ್ದ ಮಹೇಂದ್ರ ಕುಮಾರ ಜೈಲಿನಲ್ಲಿ ಕಂಬಿ ಎಣಿಸುತ್ತಾ ದ್ದಾನೆ!

ಹುಚ್ಚನಂತೆ ವರ್ತಿಸಿದ ಮಹೇಂದ್ರ!

ಮಂಗಳೂರು ನ್ಯಾಯಾಲಯದಿಂದ ಜಾಮೀನು ಪಡೆದ ಮಹೇಂದ್ರ ರ್ ಇನ್ನು ತಾನು 'ಹೀರೋ' ಆಗಿ ಮೆರೆಯಬಹುದು ಎಂದುಕೊಂಡು ಬಂದರೆ, ಅಲ್ಲಿ ಬಾಳೆಹೊನ್ನೂರು ಪೊಲೀಸರು ಕಾದು ಕುಳಿತಿದ್ದರು. ೆಂಬಲಿಗರ ಘೋಷಣೆ ನಡುವೆ, ಪತ್ರಕರ್ತರೊಂದಿಗೆ ಹರಟಿದ ಆತನಿಗೆ ೇಸ್ ಜೀಪು ಹತ್ತುವುದು ಅನಿವಾರ್ಯವಾಗಿತ್ತು. ಸರ್ಕಾರವೇ ತನ್ನನ್ನು ಸಿರುವುದರಿಂದ ಕೂಡಲೇ ಪೊಲೀಸರು ಆರೆಸ್ಟ್ ಮಾಡಲಿಕ್ಕಿಲ್ಲ ಕೊಂಡಿದ್ದ ಮಹೇಂದ್ರ ಕುಮಾರನ ಲೆಕ್ಕಾಚಾರವನ್ನು ಶೃಂಗೇರಿ ಕ್ಷೇತ್ರದ ಶಾಸಕ ಜೀವರಾಜ್ ತಲೆಕೆಳಗೆ ಮಾಡಿದ್ದರು!

ಅನಿವಾರ್ಯವಾಗಿ ಮಂಗಳೂರಿನಿಂದ ತನ್ನ ಬೆಂಬಲಿಗರ ಎರಡು ನದೊಂದಿಗೆ ಕೊಪ್ಪ ನ್ಯಾಯಾಲಯಕ್ಕೆ ಬಂದ ಮಹೇಂದ್ರ ಕುಮಾರನಿಗೆ ಂದು ಆಘಾತ ಕಾದಿತ್ತು. ಆತನ ಸ್ವಾಗತಕ್ಕೆ ನ್ಯಾಯಾಲಯದ ಆವರಣದಲ್ಲಿ ಯೂ ಕಾದಿರಲಿಲ್ಲ!

ಳಿ ನಡೆಸಿ ರಾಜ್ಯದಾದ್ಯಂತ 'ಹೀರೊ'ಆಗಿರುವ ತನ್ನ ಸ್ವಾಗತಕ್ಕೆ ತನ್ನೂರಿನ ು ಬಂದು ಸೇರಿರುತ್ತಾರೆ ಎಂದುಕೊಂಡು ಬಂದಿದ್ದ ಆತನಿಗೆ ನಿರಾಸೆ ್ತಿ ಇದರಿಂದಾಗಿ ನ್ಯಾಯಾಲಯದಲ್ಲಿ ಅರೆಹುಚ್ಚನಂತೆ ವರ್ತಿಸಿದ.

ಸ್ವಾಗತಿಸಿದ್ದು ಡಿವೈಎಸ್‌ಪಿ!

ಕೊಪ್ಪದ ಜನತೆಗೆ 'ಏಲಿಯನ್'ನಂತೆ ಕಾಣುತ್ತಿರುವ ಮಹೇಂದ್ರ ಕುಮಾರ್ ಆರೋಪಿ, ವಾಹನದಲ್ಲಿ ಕೊಪ್ಪಕ್ಕೆ ಬಂದಿಳಿಯುತ್ತಿದ್ದಂತೆಯೇ ಕೈಕುಲುಕಿ ಸಿದ್ದು ಕೊಪ್ಪದ ಡಿವೈಎಸ್‌ಪಿ ಮಲ್ಲಿಕಾರ್ಜುನ್!

ಭ್ರಷ್ಟಾಚಾರಿ ಮಲ್ಲಿಕಾರ್ಜುನನನ್ನು, ವರ್ಗಮಾಡಿ ಸರ್ಕಾರವೇ ಆದೇಶ ಡಿಸಿದ್ದರೂ ಜೀವರಾಜ್ ಅದ್ಯಾವ ಕಾರಣದಿಂದ ಈತನನ್ನು ತಮ್ಮ ಗಿಟ್ಟುಕೊಂಡಿದ್ದಾರೋ ಗೊತ್ತಿಲ್ಲ. ಈತ ಸಂಘಪರಿವಾರದ ಆಣತಿಯಂತೆ ಮಾಡುವುದೇ ತನ್ನ ಕರ್ತವ್ಯ ಎಂದುಕೊಂಡಿದ್ದಾನೆ. ಹೀಗಾಗಿ ಮಹೇಂದ್ರ ರ್ ಬರುತ್ತಿದ್ದಂತೆಯೇ 'ಹೇಗಿದ್ದೀರಿ ಮಹೇಂದ್ರಕುಮಾರ್' ಎಂದು ುಖ ವಿಚಾರಿಸಿದ್ದಾನೆ. ಇದನ್ನು ನೋಡಿ ನ್ಯಾಯಾಲಯದ ದಲ್ಲಿದ್ದವರಿಗೇ ವಾಕರಿಕೆ ಬಂದಿತಂತೆ.

ಳೆಹೊನ್ನೂರಿನ ಪೊಲೀಸರು ಮಹೇಂದ್ರಕುಮಾರ್ ವಿರುದ್ಧ 307 ಬುಕ್ ಮಾಡಿದ್ದರಿಂದ ಜಾಮೀನು ಕೂಡ ಸಿಗಲಿಲ್ಲ. ಈ ರೀತಿ ಸರು ಕೇಸು ಬುಕ್ ಮಾಡಲು ಶಾಸಕ ಜೀವರಾಜ್ ಕಾರಣ ಎಂದು ಂದ್ರಕುಮಾರ್ ಕೂಗಾಡಿ ನ್ಯಾಯಾಲಯದ ಆವರಣದಲ್ಲಿ ಸೀನ್ ಮಾಡಿದ.

ಮುಂದೇನು?

ಎಲ್ಲ ಬೆಳವಣಿಗೆಯಿಂದ ಮಹೇಂದ್ರ ಕುಮಾರ್ ಹುಚ್ಚನಂತಾಗಿದ್ದಾನೆ ಆತನ ಬೆಂಬಲಿಗರೇ ಹೇಳುತ್ತಿದ್ದಾರೆ. ಆದರೆ ಪ್ರಮೋದ್ ಮುತಾಲಿಕ್‌ನಂತೆ ಪಕ್ಷ ಅಥವಾ ಸಂಘಟನೆ ಕಟ್ಟುವಷ್ಟು ತಾಕತ್ತೇನೂ ಈತನಿಗೆ ಇಲ್ಲ. ಕನ್ನಡದ ಹಿಂದೂ ಜಾಗರಣ ವೇದಿಕೆಯ ಕೆಲ ಸ್ವಯಂಘೋಷಿತ ರು ಹೊಸ 'ಹಿಂದೂ ಪಕ್ಷ' ಕಟ್ಟುವ ಮಾತನಾಡುತ್ತಿರುವುದರಿಂದ ಂದಿಗೆ ಈತನೂ ಸೇರಿಕೊಳ್ಳಬಹುದು. ಶಾಸಕ ಜೀವರಾಜ್ ಈಗಲೇ ಪ್ಪು ಪಟ್ಟಿ ಹಾಕದಿದ್ದಲ್ಲಿ ಮಹೇಂದ್ರ ಕುಮಾರ್ 'ಮಗ್ಗುಲ ಮುಳ್ಳಾಗಿ' ಕಾಡುತ್ತಲೇ ಇರುತ್ತಾನೆ ಎಂಬುದರಲ್ಲಿ ಅನುಮಾನವೇ ಇಲ್ಲ.

–ವರದಿಗಾರ

ನಮ್ಮ ಲೂಟಿ ಬಗ್ಗೆ ಹಗುರವಾಗಿ ಮಾತನಾಡಬೇಡಿ

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಆಯ್ಕೆಯಾದ ನಲ್ಲೂರು ಪ್ರಸಾದ್ "ನನ್ನ ತಂದೆ ಬದುಕಿದ್ದರೆ ನನ್ನ ಅಭ್ಯುದಯವನ್ನು ನೋಡಿ ಅದೆಷ್ಟು ಆನಂದಭಾಷ್ಪ ಹರಿಸುತ್ತಿದ್ದರು" ಎಂದು ಹನಿಗಣ್ಣಾಗಿ, ತುಂಬ ಉತ್ಸಾಹದಿಂದಲೇ ಸನ್ಮಾನ ಹುದುಕಿಕೊಂಡು ಹಾಸನ ಜಿಲ್ಲೆಯ ಶಾಸಕರಂತೆ ಓಡಾಡುತ್ತಿದ್ದಾರಂತಲ್ಲಾ, ನಲ್ಲೂರು ಪ್ರಸಾದರ ಉತ್ಸಾಹ ನೋಡಿ ಹೊಟ್ಟೆಯುರಿಗೊಂಡ ವೀರಣ್ಣನ ಪಾರ್ಟಿ "ಈತ ಸಾಹಿತ್ಯ ಪರಿಷತ್ ಅಧ್ಯಕ್ಷನಂತೆ ಕಾಣದೆ ಜೆಡಿಎಸ್ ಪಾರ್ಟಿಯಿಂದ ಹೊಸದಾಗಿ ಆಯ್ಕೆಯಾದ ಶಾಸಕನಂತೆ ಕಾಣುತ್ತಿದ್ದಾನೆ. ಆದ್ದರಿಂದ ಸಾಹಿತ್ಯ ಪರಿಷತ್‌ನ ಮೂಲ ಆಶಯಕ್ಕೆ ಧಕ್ಕೆ ಬರದಂತೆ ನಾವೊಂದು ಸಾಹಿತ್ಯ ಪರಿಷತ್ ಮಾಡಿದರೆ ಹೇಗೆ?" ಎಂದು ಅಳೆದು ಸುರಿದು ಕಡೆಗೂ ಕರ್ನಾಟಕ ಸಾಹಿತ್ಯ ಪರಿಷತ್ ಎಂಬ ಪುರುಸೊತ್ತನ್ನು ಹುಟ್ಟು ಹಾಕೇಬಿಟ್ಟರಂತಲ್ಲಾ, ಥೂತ್ತೇರಿ!

* * * * * * *


ಥೂತ್ತೇರಿ

ಯಾಹೂ

ದಿಢೀರನೆ ಹುಟ್ಟಿಕೊಂಡ ಈ ಪುರುಸೊತ್ತಿನ ಸಂಸ್ಥೆಗೆ ಹೆದರಿ ನಲ್ಲೂರು "ಕನ್ನಡ ಸಾಹಿತ್ಯ ಪರಿಷತ್ ತಾಯಿಯಿದ್ದಂತೆ. ತಾಯಿಗೆ ಎಂದೂ ಯಾರೂ ಕೂಡ ಪರ್ಯಾಯವಾಗಿರಲ್ಲ" ಎಂದು ಬಿಟ್ಟರಂತಲ್ಲಾ. ಇದಕ್ಕೆ ವೀರಣ್ಣನ ಕಡೆಯ ಬೌದ್ಧಿಕ ವಲಯ "ತಾಯಿ ಮೊಲೆ ಹಾಲು ಬತ್ತಿದೊಡೆ ಅಥವಾ ವಿಷವಾಗಿ ಕೊಲ್ಲುವೆಡೆ ಅನಿವಾರ್ಯವಾಗಿ ಮಲತಾಯಿ ಅಥವಾ ಸಮೃದ್ಧ ಮೊಲೆತಾಯಿಯ ಅಗತ್ಯ ಕಂಡುಬರುತ್ತದೆ. ಅದೂಅಲ್ಲದೆ ಆ ತಾಯಿಗೆ ಸಮಗ್ರ ಕರ್ನಾಟಕದ ಭಾವನೆಯೂ ಮುಖ್ಯವಾಗುತ್ತದೆ. ಆದ್ದರಿಂದ ನೂತನ ಅಧ್ಯಕ್ಷರು, ಅವರ ಹಿಂಬಾಲಕರು ಮತ್ತು ಹೊಗಳು ಭಟ್ಟರನ್ನು ನೋಡಿದರೆ, ಅವರು ಹಾಸನ, ಮಂಡ್ಯ, ಮೈಸೂರು, ಬೆಂಗಳೂರಿಗೆ ಸೀಮಿತಗೊಂಡ ಪ್ರಸಾದದಂತೆ ಕಾಣುತ್ತಿರುವ ಪ್ರಯುಕ್ತ ನಾವು ಅನಿವಾರ್ಯವಾಗಿ ಉತ್ತರ ಕರ್ನಾಟಕದ ಕುವರ ಚೆನ್ನಣ್ಣ ವಾಲಿಕಾರನಿಂದ ಹಿಡಿದು, ಸಮಗ್ರ ಕರ್ನಾಟಕ ಪ್ರತಿನಿಧಿಸುವಂತಹ ಸಾಹಿತ್ಯ ಬರೆಯುತ್ತಿರುವವರನ್ನು ಕಲೆಹಾಕಿದ್ದೇವೆ ಹಾಗೂ ನಲ್ಲೂರು ಕಡೆ ಹುಡುಗರು ಹೆಚ್ಚು ಬಾಲ ಬಿಚ್ಚದಂತೆ ಪ್ರಖ್ಯಾತ ವಕೀಲರಾದ ಸಿ.ಹೆಚ್. ಹನುಮಂತರಾಯರ ಸಹಾಯ ಪಡೆದಿದ್ದೇವೆ" ಎಂದು ಎಚ್ಚರಿಸಿದರಂತಲ್ಲಾ, ಥೂತ್ತೇರಿ!

* * * * * * *

ಒಳ್ಳೆಯ ಗಂಧದ ಮರ ಕಂಡರೆ ಕೈ ಮುಗಿಯುವ, ಬೀಟೆ , ಹೊನ್ನೆ ಮರಗಳನ್ನು ಕಂಡರಂತೂ ಅವುಗಳ ಬೊಡ್ಡೆಗೆ ಅಡ್ಡಬೀಳುವ ಮಹೇಂದ್ರ ಕುಮಾರ್ ಎಂಬ ಪರಿಸರಪ್ರೇಮಿಯಿಂದ ಕಡೆಗೂ ಬಿಜೆಪಿ ರಾಜೀನಾಮೆ ಬರೆಸಿಕೊಂಡಿದೆಯಂತಲ್ಲಾ, ಅಲ್ಲ, ಬರೆದುಕೊಂಡು ಕೇವಲ ಸಹಿ ಪಡೆದಿದೆಯಂತಲ್ಲಾ! ಇದರಿಂದ ಕಕ್ಕಾಬಿಕ್ಕಿಯಾದ ಮಹೇಂದ್ರ "ಚಿಕ್ಕಮಗಳೂರಲ್ಲಿ ನಡೆಯುವ ದತ್ತಮಾಲೆಗೆ ನೀವೇ ಮುಂದಾಳಾಗಬೇಕು ಮತ್ತು ಮುಕಳರಿಯ ಘೋಷಣೆ ಕೂಗಬೇಕು ಎಂಬ ಮನವಿ ಪತ್ರ ಎಂದು ಹೇಳಿ ನನ್ನಿಂದ ಸಹಿ ಪಡೆದು ಈಗ ಅದನ್ನು ರಾಜೀನಾಮೆ ಎಂದು ಘೋಷಿಸಲಾಗಿದೆ. ಈ ಬಿಜೆಪಿಗಳನ್ನು ನಂಬಿದರೆ ಭಜರಂಗಿಗಳು ಕಂಬಿ ಎಣಿಸುವುದೇ ಕೆಲಸವಾಗಬಹುದು" ಎಂದು ಆಪ್ತ ಕೈದಿಗಳ ಜೊತೆ ಗೋಳಾಡಿದನಂತಲ್ಲಾ. ಇದೆಲ್ಲಕ್ಕಿಂತಲೂ ಕುತಂತ್ರಗಳು, ಕುಯುಕ್ತಿಗಳು ಮತ್ತು ಸಮಯಸಾಧಕತನವನ್ನು ಪಾರ್ಟಿಯ ಅವ್ಯಕ್ತ ಅಜೆಂಡಗಳಾಗಿ ಪಡೆದಿರುವ ಬಿಜೆಪಿಗಳು ತಮ್ಮ ದೊಡ್ಡಿಯಲ್ಲಿ ಇನ್ನು ಹಲವಾರು ಮಹೇಂದ್ರಗಳನ್ನು ಕೂಡಿಕೊಂಡಿದ್ದು "ಒಬ್ಬ ಮಹೇಂದ್ರ ಹೋದರೆ ಇನ್ನು ನೂರಾರು ಜನ ಇದ್ದಾರೆ" ಎಂದು ಹೆಮ್ಮೆಯಿಂದ ಹೇಳಿಕೊಂಡಿವೆಯಂತಲ್ಲಾ, ಥೂತ್ತೇರಿ!!



* * * * * * *

ಆರೆಸ್ಸೆಸ್ ಬಡಿಗೆ ಊರಿಕೊಂಡೆ ಇಪ್ಪತ್ತು ತಿಂಗಳು ಅಧಿಕಾರ ನಡೆಸಿದ ಕುಮಾರಸ್ವಾಮಿ, ಎಡೂರಪ್ಪನ ಬಡಿಗೆ ಬಗ್ಗೆ ಆಡಿಕೊಂಡರಂತಲ್ಲಾ. ಇದರಿಂದ ಕೆಂಡಮಂಡಲವಾದ ಎಡೂರಿ "ನಮ್ಮ ಬಗ್ಗೆ ಏನಾದರು ಅನ್ನಲಿ, ಬೈದುಕೊಳ್ಳಲಿ. ಆದರೆ ನಮ್ಮ ಬದುಕಿನ ಆಧಾರವಾದ ಬಡಿಗೆ ಬಗ್ಗೆ ಆಡಿಕೊಳ್ಳುವುದನ್ನು ನಾವು ಸಹಿಸುವುದಿಲ್ಲ. ಆ ಬಡಿಗೆಯ ಬಗ್ಗೆ ಇವರಿಗೇನು ಗೊತ್ತು? ಅದು ಬಿದಿರಿನಿಂದ ಮಾಡಲ್ಪಟ್ಟ ದೊಣ್ಣೆ, ಮುಖ್ಯ ಬಿದಿರಿನಿಂದ ಬೇರೆಯಾದ ದೊಣ್ಣೆ ಕಡೆಯವರೆಗೂ ಹಾಗೇ ಇರುತ್ತೆ. ಒಂದು ಚೂರು ಬೆಳವಣಿಗೆಯೂ ಆಗಲ್ಲ, ಬದಲಾವಣೆಯೂ ಆಗಲ್ಲ, ನಾವು ಬಿಸಾಡಿದ ಜಾಗದಲ್ಲಿ ಬಿದ್ದಿರುತ್ತೆ, ನಿಲ್ಲಿಸಿದ ಮೂಲೆಯಿಂದ ಕದಲುವುದಿಲ್ಲ, ತನ್ನನ್ನು ಹಿಡಿದವರಿಗೆ ಅದೆಂದೂ ಮೋಸ ಮಾಡುವುದಿಲ್ಲ, ನಾವು ಬೀಸಿದರೆ ಹೊಡೆಯುತ್ತೆ, ಸುಮ್ಮನಿದ್ದರೆ ಅದೂ ಸುಮ್ಮನಿರುತ್ತೆ, ನಮ್ಮವರ ಮನಸ್ಸಿನ ಪ್ರತೀಕವಾದ ಲಾಠಿ ಬಗ್ಗೆ ಹಗುರವಾಗಿ ಮಾತನಾಡುವುದನ್ನು ಮಾಜಿ ಪ್ರಧಾನಿಗಳ ಮಗ ನಿಲ್ಲಿಸದಿದ್ದರೆ ನಾವೂ ಲಾಠಿ ಕೈಗೆತ್ತಿಕೊಳ್ಳಬೇಕಾಗುತ್ತದೆ" ಎಂದರಂತಲ್ಲಾ, ಥೂತ್ತೇರಿ!!

* * * * * * *

ಮಠಾಧೀಶರು ಜಾತಿವಾದಿಗಳಾಗುತ್ತಿದ್ದಾರೆ ಎಂದು ಗುಡುಗಿರುವ ಕುಮಾರಸ್ವಾಮಿಗಳನ್ನು ಮಾತನಾಡಿಸಬೇಕೆನಿಸಿತಲ್ಲಾ, ಪೋನ್ ಮಾಡಿದರೆ ರಿಂಗಾಯ್ತು,

ರಿಂಗ್‌ಟೋನ್ : "ಚಿತಾನ್ನ ಚಿತಾನ್ನ ಚಿತಾನ್ನ... "

"ಹಲೋ ಯಾರು?"

"ನಾನು ಸಾರ್ ಯಾಹು, ಒಂದೆರಡು ಪ್ರಶ್ನೆ ಕೇಳಬೇಕಾಗಿತ್ತು."

"ಕೇಳಿ ಯಾಹು ಅವ್ರುರೇ, ಬಹಳ ದಿನ ಆಯ್ತು ನೀವು ಫೋನ್ ಮಾಡಿ."

"ಹೌದು ಸಾರ್. ಈ ಮಠಾಧಿಪತಿಗಳು ಜಾತಿವಾದಿಗಳಾಗಿದ್ದಾರೆ ಅಂದಿದ್ದೀರಲ್ಲಾ ಸಾರ್?"

"ಆ ತರದ ಒಂದು ಪರಿಸ್ಥಿತಿ ನಿರ್ಮಾಣ ಆಗಿರದ್ರಿಂದ ಏನೀಮಠಾಧಿಪತಿಗಳು ಇವತ್ತಿನ ದಿನ ಒಬ್ಬರಿಗೊಂದು ಒಬ್ಬರಿಗೊಂದು ಮಾಡ್ತಯಿದಾರೆ ಅದನ್ನು ನಾವು ನೋಡಿ ಸುಮ್ಮನೆ ಇರಕ್ಕಾಗದೆಯಿರೋ ಅಂತ ಸನ್ನಿವೇಶ ಏನು ನಿರ್ಮಾಣ ಆಗಿದೆ ಇವತ್ತು ಯಾರೇ ಸ್ವಾಮಿ ಇರಬಹುದು ಸಿದ್ದಗಂಗಾಸ್ವಾಮಿಗಳಿರಬಹುದು, ಸುತ್ತೂರು ಸ್ವಾಮಿ ಇರಬಹುದು ಅಥವಾ ಸಿರಿಗೆರೆ ಕಡೆ ಸ್ವಾಮಿ ಇರಬಹುದು ಇವುರ ತೋರತ ಇರತಕ್ಕಂತ ಜಾತಿಪ್ರೇಮ ಏನಿದೆ ಅದನ್ನ ಇತರೆ ಜಾತಿಗೆ ಯಾಕೆ ತೋರ್ಪಡಿಸಕ್ಕಾಗ್ತಯಿಲ್ಲ."

"ನಿಮ್ಮ ಈ ಆರೋಪದೊಳಕ್ಕೆ ಚುಂಚನಗಿರಿ ಸ್ವಾಮಿಗಳು ಸೇರ್ತಾರೆ?"

"ಚುಂಚನಗಿರಿ ಸ್ವಾಮಿಗಳು ಅಂತ ಇಲ್ಲ, ಯಾರೇ ಸ್ವಾಮಿಗಳು ಇರಬಹುದು. ಅವ್ರುರು ಏನಿವತ್ತು ತೋರ್ಪಡಿಸತಕ್ಕಂತ ಮಮಕಾರ ಏನಿದೆ ಅದು ಕೇವಲ ತಮ್ಮ ಜಾತಿಗೆ ಮಾತ್ರ ಅನ್ನದಾದ್ರೆ...."

"ಅಲ್ಲ ಸಾರ್, ಒಬ್ಬ ಸ್ವಾಮಿ ಅಂದಮೇಲೆ ಆತ ಪ್ರತಿನಿಧಿಸೊ ಜಾತಿಗೆ ಮಾತ್ರ ಸೀಮಿತವಾಗಿರತನೆ ಅಲ್ವ? ಜಾತಿ ಹಿತಕಾಯಕ್ಕೆ ಅಲ್ವಾ ಅವುನ್ನ ಸ್ವಾಮಿ ಮಾಡಿರದು?"

"ಇರಬಹುದು. ಆದ್ರೆ ಚಿತ್ರದುರ್ಗದ ಸ್ವಾಮಿಗಳು ನನ್ನನ್ನು ಕರೆದಿದ್ದಾರೆ ಅವರೆಲ್ಲ ವಿಶಾಲವಾಗಿ ಯೋಚನೆ ಮಾಡ್ತಾರೆ ಅಲ್ವವೆ."

"ಆದ್ರೂ ಚಿತ್ರದುರ್ಗದ ಬೃಹನ್ಮಠದೋರು ನಿಮ್ಮನ್ನ ಮಕ್ಕಳ ಸಮಾವೇಶದ ವೇದಿಕೆ ಅತಿಥಿ ಮಾಡಿದ್ದಾರಲ್ಲಾ ಸಾರ್? ನೀವು ಬೈಲ್ಲಿಕಾಗಿ ಮಾತಾಡ್ತೀರಿ ಅಂತ್ಲೋ ಇಲ್ಲ ಇನ್ನೇನಾದ್ರೂ ಕಾರಣ ಇದೆಯೋ ಸಾರ್?"

"ನಾನು ಮಕ್ಕಳ ಮನಸ್ಸಿನವನು ಕಂದ್ರೀ. ನನ್ನ ಮಗ ಏನು ಮಾಡಿದ್ರೂ ಹೊಡೆಯಲ್ಲ ಗೊತ್ತ?"

"ಥೂತ್ತೇರಿ!!!"



ಚಿತ್ರದುರ್ಗ: ಬಸವರಾಜನ್‌ನ ಗೋಲ್‌ಮಾಲ್‌ಗಳು

ಮಠದ ಅಧಿಕಾರಿಯಾಗಿದ್ದಾಗ ಎಸ್.ಕೆ. ಬಸವರಾಜನ್ ಹೆಸರಲ್ಲಿ ಇನ್ನೂ ಕೆಲವು ಬೇನಾಮಿ ವ್ಯಕ್ತಿಗಳ ಹೆಸರ ಖರೀದಿಸಿದ ಆಸ್ತಿ-ಪಾಸ್ತಿಗಳು ತ್ರಿಶಂಕು ಸ್ಥಿತಿಯಲ್ಲಿವೆ. ಇಂತಹ ಬೇನಾಮಿ ಆಸ್ತಿಗಳ ವಿವರಗಳನ್ನು ಸಂಗ್ರಹಿ ಮಠದ ವಶಕ್ಕೆ ತೆರೆದುಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ. ಈ ಗೋಲ್‌ಮಾಲ್ ವ್ಯವಹಾರಗಳ ತಲೆ-ಬು ತಿಳಿಯದ ಮುರುಘಾಶರಣರು ಈಗ ಎಲ್ಲವನ್ನೂ ಹತೋಟಿಗೆ ತೆಗೆದುಕೊಂಡು ದೃಢ ನಿರ್ಧಾರದಿಂ ಮುಂದುವರಿಯುತ್ತಿದ್ದಾರೆ. ರಾಜ್ಯದಾದ್ಯಂತ ಇರುವ ಭಕ್ತ ಸಮೂಹದ ಬೆಂಬಲವೂ ಅವರಿಗಿದೆ.

ಚಿತ್ರದುರ್ಗ ಶಾಸಕ ಎಸ್.ಕೆ. ಬಸವರಾಜನ್‌ಗೆ ಮಠಬಿಟ್ಟರೂ ಮಠದ ಮೇಲಿನ ಆಸ್ತಿಯ ವ್ಯಾಮೋಹ ಮಾತ್ರ ಕಡಿಮೆಯಾದಂತಿಲ್ಲ. ಬೃಹನ್ಮಠದಲ್ಲಿ ಆಡಳಿತಾಧಿಕಾರಿಯಾಗಿದ್ದ ಬಸವರಾಜನ್ ತಮ್ಮ ಸ್ವಯಂಕೃತಾಪರಾಧಗಳಿಂದಾಗಿಯೇ ಮಠಬಿಡುವಂತಹ ಸನ್ನಿವೇಶ ಸೃಷ್ಟಿಸಿಕೊಂಡದ್ದು, ಅಂತಿಮವಾಗಿ ಗೇಟ್‌ಪಾಸ್ ಪಡೆದದ್ದು ಹಳೆಯ ಕತೆ. ಬೃಹನ್ಮಠದಿಂದ ತಮ್ಮನ್ನು ಹೊರಹಾಕಿದಾಗ ಯಾವುದೇ ರೀತಿಯ ಕಾಮೆಂಟ್ ಮಾಡದೆ ಮೌನವಹಿಸಿದ್ದ ಎಸ್.ಕೆ. ಬಸವರಾಜನ್ ಕೆಲ ವ್ಯಾವಹಾರಿಕ ಜವಾಬ್ದಾರಿಗಳಿಂದ ನುಣುಚಿಕೊಳ್ಳುವವರೆಗೆ ಇದೇ ಸ್ಥಿತಿ ಕಾಯ್ದುಕೊಂಡರು. ಹೊರಗಿನವರಿಗೆ ಬಸವರಾಜನ್‌ರನ್ನು ಅತ್ಯಂತ ನಿರ್ದಯವಾಗಿ ಹೊರಹಾಕಲಾಯಿತೆಂದು ಅನ್ನಿಸಿದರೂ ಬೃಹನ್ಮಠದ ಬಗ್ಗೆ ಕಾಳಜಿ ಹೊಂದಿದ್ದವರಿಗೆ ಮಾತ್ರ ಇದು ಮಹಾಬಿಡುಗಡೆ ಅನಿಸಿತ್ತು.

ಬಸವರಾಜನ್‌ರನ್ನು ಮಠದಿಂದ ಹೊರಹಾಕಿದರೂ ಮುರುಘಾಶರಣರೇನೂ ತೊಂದರೆ ಕೊಡಲಿಲ್ಲ. ಈ ನಡುವೆ ವೀರಶೈವ ಸಮಾಜದ ಅಧ್ಯಕ್ಷನಾಗಿದ್ದ ಸೈಟ್ ಬಾಬು ಭರ್ತಿ ಡಬಲ್ ಗೇಮ್ ಆಡಲಾರಂಭಿಸಿದ್ದ. ಮುರುಘಾಶರಣರ ಮುಂದಿದ್ದರೆ ಶರಣರ ಪರ, ಬಸವರಾಜನ್ ಮುಂದಿದ್ದಾಗ ಬಸವರಾಜನ್ ಪರ ನಾಟಕವಾಡಿಕೊಂಡು ಎಲ್ಲೆಡೆ ಸಲ್ಲುವ ನಾಯಕನಾಗಿಬಿಟ್ಟಿದ್ದ. ಹಾಗೆಂದು ನ್ಯೂಟ್ರಲ್ ಆಗೇನೂ ಇರಲಿಲ್ಲ. ಬಸವರಾಜನ್ ಪರವಾಗಿ ಏನೆಲ್ಲಾ ಮಾಡಲು ಸಾಧ್ಯವೋ ಅದೆಲ್ಲವನ್ನೂ ಮಾಡಿದ. 17 ಲಕ್ಷ ಮೌಲ್ಯದ ಕಾರು, ಬೆಂಗಳೂರಿನ ಕಾನಿಷ್ಕ ಹೋಟೆಲ್‌ನಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿದ. ಬಸವರಾಜನ್ ಹೆಗಲ ಮೇಲಿದ್ದ 74 ಕೋಟಿ ಸಾಲವನ್ನು ನಯವಾಗಿ ಶಿವಮೂರ್ತಿ ಮುರುಘಾಶರಣರ ಹೆಗಲಿಗೆ ವರ್ಗಾಯಿಸಿದ. ಇಡೀ ರಾಜ್ಯದಾದ್ಯಂತ ಮುರುಘಾಮಠದ ಭಕ್ತರೆಲ್ಲಾ ಮಠದ ಆಗುಹೋಗುಗಳ ಬಗ್ಗೆ ಕಣ್ಣಿಟ್ಟಿರುವಾಗಲೇ ಮತ್ತೆ ಬಸವರಾಜನ್‌ರನ್ನು ಮುರುಘಾಮಠಕ್ಕೆ ಕರೆ ತರಲು ಬೇಕಾದ ತಯಾರಿಗಳನ್ನು ಮಾಡಲಾರಂಭಿಸಿದ.

ಬಹಳ ಮುಖ್ಯವಾಗಿ ಮಠದ ಸಾಲ ತೀರಿಸಲು ಬಸವರಾಜನ್‌ರ ಕಡೆಯಿಂದ 20 ಕೋಟಿ ಹಣವನ್ನು ಮುರುಘಾಶರಣರಿಗೆ ಕೊಡಿಸುವುದಾಗಿ ಓಳು ಬಿಟ್ಟುಕೊಂಡು ತಿರುಗಾಡಿದ. ಕೆಲ ಮೂಲಗಳು ಹೇಳುವಂತೆ "ಬೆಂಗಳೂರಿನ ಯಾವುದೋ ಒಂದು ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ನೂರಾರು ಕೋಟಿ ಹಣ ಬಂದಿದೆ. ಬಸವರಾಜನ್‌ಗೆ ಆ ಹಣವನ್ನು ಎಲ್ಲಿ ತೊಡಗಿಸಬೇಕೆಂದೇ ತೋಚುತ್ತಿಲ್ಲ, ನೀವು ಬಸವರಾಜನ್‌ಗೆ ವಿದ್ಯಾಪೀಠದ ಜವಾಬ್ದಾರಿ ವಹಿಸಿದರೆ ಸಾಲವನ್ನೆಲ್ಲಾ ತೀರಿಸಬಹುದು" ಎಂದು ಶರಣರ ಬಳಿ ರೀಲುಬಿಟ್ಟಿದ್ದನಂತೆ.

ಮುರುಘಾಶರಣರು ಈತನ ಮಾತನ್ನು ಪೂರ್ಣ ನಂಬಿದರೋ ಬಿಟ್ಟರೋ ಗೊತ್ತಿಲ್ಲ, ಆದರೆ "ನಮಗೆ ಅಂತಹ ಯಾವುದೇ ಅಕ್ರಮ ಹಣಬೇಕಾಗಿಲ್ಲ, ಮಠಕ್ಕೆ ಅದರ ಹೊರೆಯನ್ನು ನಿಭಾಯಿಸುವ ಸಾಮರ್ಥ್ಯ ಇದೆ. ಒಂದಿಷ್ಟು ಕಾಲಾವಕಾಶ ಬೇಕಾಗಬಹುದು. ಕ್ರಮೇಣ ಸಾಲ ತೀರಿಸಿಕೊಳ್ಳಬಹುದು" ಎಂದು ಕಡ್ಡಿ ಮುರಿದಂತೆ ಹೇಳಿ ಕಳುಹಿಸಿದ್ದಾರೆ.

ಬಸವರಾಜನ್‌ರನ್ನು ಶತಾಯಗತಾಯ ಮುರುಘಾಮಠಕ್ಕೆ ರಿ-ಎಂಟ್ರಿ ಮಾಡಿಸುವ ಸಂಕಲ್ಪ ಮಾಡಿದ್ದ ಸೈಟ್ ಬಾಬು ಅದು ಹೇಗೋ ಪುಸಲಾಯಿಸಿ ಒಂದಿಷ್ಟು ಶರತ್ತುಗಳ ಮೇಲೆ ಅಂದರೆ ಬಸವರಾಜನ್ ಮುರುಘಾಮಠದಲ್ಲಿರಬಾರದು, ಮಠದ ವ್ಯವಹಾರಗಳಿಗೆ ಮಧ್ಯ ಪ್ರವೇಶ ಮಾಡಬಾರದು, ವಿದ್ಯಾಪೀಠದ ಸೆಕ್ರೆಟರಿಯಾಗಿ ತಮ್ಮ ಪಾಡಿಗೆ ತಾವು ಕೆಲಸ ಮಾಡಿಕೊಂಡು ಹೋಗಬೇಕು ಎಂಬಂತ ನಿಬಂಧನೆಗಳಿಗೊಳಪಟ್ಟು ಪುನಃ ಕರೆತರುವುದಕ್ಕೆ ಬುನಾದಿ ಹಾಕಿದ. ಈ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾಗಿ ಮುರುಘಾಶರಣರ ಬೆಂಬಲಕ್ಕೆ ನಿಂತಿದ್ದ ಅನೇಕರು ಶಿವಮೂರ್ತಿ ಶರಣರಿಗೆ ಯಾವುದೇ ಕಾರಣಕ್ಕೂ ಬಸವರಾಜನ್‌ರನ್ನು ಪುನಃ ಕರೆತರುವ ದುಸ್ಸಾಹಸ ಮಾಡಬಾರದೆಂದು ಒತ್ತಡ ತಂದರು. ಶರಣರಿಗೂ ಅಷ್ಟೊತ್ತಿಗೆ ಸೈಟ್ ಬಾಬುವಿನ ಡಬಲ್ ಗೇಮ್ ಏನೆಂಬುದು ಅರ್ಥವಾಗಿ ಹೋಗಿತ್ತು. ಸೈಟ್ ಬಾಬುಗೆ ನೇರವಾಗಿ "ನೀನು ಇಲ್ಲಿರು ಅಥವಾ ಅಲ್ಲಿರು. ಡಬಲ್ ಗೇಮ್ ಮಾಡಬೇಡ" ಎಂದು ಹೇಳಿದ್ದರಂತೆ.

ಯಾವಾಗ ಬೃಹನ್ಮಠಕ್ಕೆ ರಿ-ಎಂಟ್ರಿ ಸಾಧ್ಯವಿಲ್ಲ ಎಂಬುದು ಬಸವರಾಜನ್‌ಗೆ ಮನವರಿಕೆಯಾಯಿತೋ ಆ ಕ್ಷಣದಿಂದಲೇ ಮುರುಘಾಶರಣರನ್ನು ಬ್ಲಾಕ್‌ಮೇಲ್ ಮಾಡುವ ತಂತ್ರಗಾರಿಕೆಗಳು ಚಾಲನೆ ಪಡೆದುಕೊಂಡವು.

ಮೆಡಿಕಲ್ ಕಾಲೇಜು ನಿವೇಶನ ವಿವಾದ

ಹಿಂದೆ ಮಲ್ಲಿಕಾರ್ಜುನ ಸ್ವಾಮಿಗಳು ಎಸ್.ಕೆ. ಬಸವರಾಜನ್, ಬಿ.ಎಸ್. ಮಂಜುನಾಥ್, ಟಿ.ಎ.ಟಿ. ಬಾಬು, ಗಡ್ಡದ ತಿಪ್ಪಣ್ಣನ ಹೆಸರಿನಲ್ಲಿ ಖರೀದಿಸಿದ್ದ ಆರು ಎಕರೆ ವಿಸ್ತೀರ್ಣದಲ್ಲಿ ಬಸವೇಶ್ವರ ಮೆಡಿಕಲ್ ಕಾಲೇಜಿನ ಹಾಸ್ಟೆಲ್, ಆಡಿಟೋರಿಯಂ ಇತ್ಯಾದಿ ನಿರ್ಮಿಸಲಾಗಿತ್ತು.

ಈ ಜಮೀನು ನ್ಯಾಯಯುತವಾಗಿ ಮಲ್ಲಿಕಾರ್ಜುನ ಸ್ವಾಮಿಗಳು ತೀರಿಕೊಂಡ ನಂತರ ಮಠದ ಹೆಸರಿಗೆ ನೊಂದಣಿಯಾಗಬೇಕಿತ್ತು, ಆದರೆ ಹಾಗಾಗಲಿಲ್ಲ. ಇದನ್ನೇ ಆಧಾರವಾಗಿಟ್ಟುಕೊಂಡು ಇಂಡಿಯನ್ ಮೆಡಿಕಲ್ ಕೌನ್ಸಿಲ್‌ಗೆ ಪಂಚಾಕ್ಷರಿ ಅಲಿಯಾಸ್ ಪಂಚಿ ಮೂಲಕ "ಬೃಹನ್ಮಠದವರು ನಮ್ಮ ನಿವೇಶನದಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡಿದ್ದಾರೆ. ಕಾನೂನುಬದ್ಧವಾಗಿ ಹಾಸ್ಟಲ್ ಇಲ್ಲ, ಹಾಗಾಗಿ ಮೆಡಿಕಲ್ ಕಾಲೇಜಿನ ಮಾನ್ಯತೆ ರದ್ದು ಮಾಡಬೇಕೆಂದು" ಲಾಯರ್ ನೋಟೀಸ್ ಕಳುಹಿಸಿದರು. ಈ ವಿಷಯ ವ್ಯವಸ್ಥಿತವಾಗಿ ಹರಡುವಂತೆಯೂ ನೋಡಿಕೊಂಡರು. ಲಕ್ಷಾಂತರ ತೆತ್ತು ಮೆಡಿಕಲ್ ಕಾಲೇಜಿಗೆ ಸೇರಿದ ವಿದ್ಯಾರ್ಥಿಗಳಲ್ಲಿ ಇನ್ನಿಲ್ಲದ ಆತಂಕ ಸೃಷ್ಟಿಸಿದರು. ಕಾಲೇಜಿನ ಮಾನ್ಯತೆ ರದ್ದಾಗಬಹುದೆಂಬ ವದಂತಿಯಿಂದಲೇ ಒಂದಿಬ್ಬರು ಹುಡುಗರು ಆತ್ಮಹತ್ಯೆಗೆ ಮುಂದಾಗುವಂತಹ, ಕಾಲೇಜಿನ ನೌಕರರು ಬೀದಿಪಾಲಾಗುವ ಆತಂಕದ ಸನ್ನಿವೇಶ ನಿರ್ಮಿಸಿದರು.



ಅದೃಷ್ಟವಶಾತ್ ಕೇಂದ್ರ ಸಾರಿಗೆ ಮಂತ್ರಿ ಕೆ.ಎಚ್. ಮುನಿಯಪ್ಪ ಹಾಗೂ ಮಠದ ಬಗ್ಗೆ ಅಭಿಮಾನವುಳ್ಳ ಹಲವಾರು ಸಂಸದರು ಮಠದ ಪರವಾಗಿ ಮಾತನಾಡಿ ಅಸಲೀ ವಿಷಯವನ್ನು ಕೇಂದ್ರ ಆರೋಗ್ಯ ಸಚಿವ ಅನ್ಬುಮಣಿ ರಾಮದಾಸ್‌ರವರಿಗೆ ಮನವರಿಕೆ ಮಾಡಿ ಮೆಡಿಕಲ್ ಕಾಲೇಜಿಗೆ ಮಾನ್ಯತೆ ದೊರಕಿಸಿಕೊಟ್ಟಿದ್ದಾರೆ. ವಿಪರ್ಯಾಸವೆಂದರೆ ಎಸ್.ಕೆ. ಬಸವರಾಜನ್ ಆಡಳಿತಾಧಿಕಾರಿಯಾಗಿದ್ದಾಗಲೇ ಈ ನಿವೇಶನದಲ್ಲಿ ಕಟ್ಟಡ ನಿರ್ಮಿಸಲಾಗಿತ್ತು. ತಮ್ಮನ್ನು ಮಠದಿಂದ ಹೊರಹಾಕಿದರೆಂಬ ಒಂದೇ ಕಾರಣಕ್ಕೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ಗೆ ಇದು ಅಕ್ರಮ ಕಟ್ಟಡ ಎಂದು ಮೂರನೆಯ ವ್ಯಕ್ತಿಯೋರ್ವನಿಂದ ಲಾಯರ್ ನೋಟೀಸ್ ಕೊಡಿಸುವಂತ ಕುಯುಕ್ತಿಯನ್ನು ಎಸ್.ಕೆ. ಬಸವರಾಜನ್ ಪ್ರದರ್ಶಿಸಿದರು. ಮಠಕ್ಕಾಗಿಯೇ ಖರೀದಿಸಲಾಗಿದ್ದ ಈ ಜಮೀನು ತಮಗೆ ಸೇರಿದ್ದೆಂದು ಯಾವ ಎಗ್ಗೂ ಇಲ್ಲದೇ ಕಾನೂನು ಹೋರಾಟ ನಡೆಸುವ ಬೆದರಿಕೆ ಬೇರೆ ಹಾಕಿದ್ದಾರೆ.

ಬೆಂಗಳೂರಿನ ತಿಪ್ಪಶೆಟ್ಟಿ ಮಠ

ಬೆಂಗಳೂರಿನ ತಿಪ್ಪಶೆಟ್ಟಿ ಮಠದ ಕತೆ ಬೃಹನ್ಮಠಕ್ಕೆ ಸಂಬಂಧಪಟ್ಟ ಆಸ್ತಿಗಳನ್ನು ಹೇಗೆ ಪರಭಾರೆ ಮಾಡುತ್ತಾರೆ ಎಂಬುದಕ್ಕೆ ಉತ್ತಮ ನಿದರ್ಶನವಾಗಿದೆ. ಬಸವರಾಜನ್ ಛೇಲಾ ಬುಲ್‌ಕಿಂಗ್ ಬಸವರಾಜ್, ದಾವಣಗೆರೆಯ ವೀರಣ್ಣ ಎಂಬುವರು ಮುರುಘಾಶರಣರು ತಮ್ಮ ಹೆಸರಿಗೆ **irrevocable power of attorney** ಬರೆದುಕೊಟ್ಟಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದಾರೆ.



ಶಿವಮೂರ್ತಿಮುರುಘರಾಜೇಂದ್ರಸ್ವಾಮಿ

ಇದಕ್ಕೆ ಸಂಬಂಧಿಸಿದಂತೆ ತಿಪ್ಪಶೆಟ್ಟಿ ಭವನದ ಹಕ್ಕುದಾರರು ನಾವೇ ಬಾಡಿಗೆ ನಮ್ಮ ಹೆಸರಿಗೆ ಪಾವತಿಸಬೇಕೆಂದು ಪತ್ರಿಕಾ ಪ್ರಕಟಣೆ ನೀಡಿದಾಗ ದಾಖಲೆಗಳನ್ನು ಪರಿಶೀಲಿಸಿದ ನಂತರ ಈ ಸತ್ಯಾಂಶ ಗೊತ್ತಾಗಿದೆ. ಈ ಫೋರ್ಜರಿ ವೀರರು ತಮ್ಮ ಹೆಸರಿಗೆ ನೋಂದಣಿ ಮಾಡಿಸಿಕೊಂಡ ದಿನಾಂಕದಂದೇ ಮುರುಘ ಶರಣರು ಆಸ್ಟ್ರೇಲಿಯ ಪ್ರವಾಸದಲ್ಲಿದ್ದಾರೆ. ಹಾಗಾದರೆ ಈ deed ಗೆ ಶಿವಮೂರ್ತಿ ಮುರುಘಾಶರಣರ ಸಹಿ ಮಾಡಿದವರ್ಯಾರು?

ಬಸವರಾಜನ್ ಆಡಳಿತಾಧಿಕಾರಿಯಾಗಿದ್ದಾಗಲೇ ನಡೆದಿರುವ ಈ ಗೋಲ್‌ಮಾಲ್ ಅವರ ಚಿತಾವಣೆಯಿಲ್ಲದೇ ನಡೆಯಲಿಕ್ಕೆ ಸಾಧ್ಯವೇ? ಈಗ ಸದರಿ ವ್ಯಕ್ತಿಗಳ ಮೇಲೆ ಫೋರ್ಜರಿ ಪ್ರಕರಣ ದಾಖಲಾಗಿದ್ದು, ಸಿಓಡಿ ತನಿಖೆ ಕೂಡಾ ನಡೆಯುತ್ತಿದೆ. ಒಂದೂವರೆ ತಿಂಗಳ ಕಾಲ ತಲೆಮರೆಸಿಕೊಂಡಿದ್ದ ಬುಲ್‌ಕಿಂಗ್ ಬಸವರಾಜ್‌ನನ್ನು ಸಿಓಡಿ ಪೊಲೀಸರು ಎರಡು-ಮೂರು ಬಾರಿ ವಿಚಾರಣೆಗೆ ಒಳಪಡಿಸಿದ್ದಾರೆ. ಹಾಲಿ ಶಾಸಕರಾಗಿರುವ ಬಸವರಾಜನ್‌ರನ್ನೂ ಈ ಸಂಬಂಧ ವಿಚಾರಣೆ ನಡೆಸಲಾಗಿದೆ. ಸದರಿ ಬಸವರಾಜ್‌ಗೆ ಜಾಮೀನು ಕೊಡಿಸಲು ಇತ್ತೀಚೆಗೆ ತುಮಕೂರಿನ ಕೆಲ ವ್ಯಕ್ತಿಗಳನ್ನು ಸಂಪರ್ಕಿಸಿದ್ದರೆನ್ನಲಾಗಿದೆ.

ಕಾನಿಷ್ಕಾ ಹೋಟೆಲ್ ಲೀಸ್

ಬೆಂಗಳೂರಿನ ಹೃದಯ ಭಾಗದಲ್ಲಿರುವ ಕಾನಿಷ್ಕ ಹೋಟೆಲ್ ಲೀಸ್‌ನ ಹಿಂದೆಯೂ ಇಂಥದ್ದೇ ಗೋಲ್‌ಮಾಲ್ ನಡೆದಿದೆ. ತಿಂಗಳಿಗೆ ಲಕ್ಷಾಂತರ ಬಾಡಿಗೆ ತಂದುಕೊಡಬಹುದಾದ ಈ ಆಸ್ತಿ ಕೇವಲ ತಿಂಗಳಿಗೆ 20 ಸಾವಿರದಂತೆ ಲೀಸ್ ಮಾಡಲಾಗಿದೆ. 30 ವರ್ಷಗಳ ಈ ಲೀಸ್ ಅವಧಿಯಲ್ಲಿ ಐದು ವರ್ಷಗಳಿಗೊಂದಾವರ್ತಿ ಒಂದಿಷ್ಟು ಪರ್ಸೆಂಟೇಜ್ ಬಾಡಿಗೆ ಹೆಚ್ಚಳ ಮಾಡಿಕೊಳ್ಳುವಂತೆ ಲೀಸ್ ಮಾಡಲಾಗಿದೆ. ಇದು ಆರ್ಥಿಕವಾಗಿ ಬೃಹತ್ ನಷ್ಟ. ಈ ನಷ್ಟಕ್ಕೆ ಎಸ್.ಕೆ. ಬಸವರಾಜನ್ ಕಾರಣ. ಮಠದ ಆಡಳಿತಾಧಿಕಾರಿಯಾಗಿದ್ದ ಬಸವರಾಜನ ಇದೆಲ್ಲಾ ತಿಳಿಯಲಾರದಷ್ಟು ವ್ಯಾವಹಾರಿಕ ದಡ್ಡತನವೇನ ಇರಲಿಲ್ಲ. ಇಂತದೊಂದು ಲೀಸ್‌ನ ಹಿಂದೆ ಬಸವರಾಜ ಗಿದ್ದ ಹಿತಾಸಕ್ತಿ ಎಂಥದ್ದು? ಅದರಿಂದ ದೊರೆತ ಪ್ರತಿಫ ಎಂಥದ್ದು ಎಂಬುದನ್ನು ದಡ್ಡರೂ ಹೇಳಬಲ್ಲರು.

ಕೆಂಚನ ಕಟ್ಟೆ ಜಮೀನು ವಿವಾದದ ಸುತ್ತ

1996 ರಲ್ಲಿ ಆಡಳಿತಾಧಿಕಾರಿಗಳು, ಚಿನ್ಮೂಲಾ ಬೃಹನ್ಮಠದ ಹೆಸರಿನಲ್ಲಿ ಬುರುಜನಹಟ್ಟಿಯ ಆರು ಜ ಕಡೆಯಿಂದ ಕೆಂಚನಕಟ್ಟೆಯ 44 ಎಕರೆ ಜಮೀ ಖರೀದಿಸಲಾಗಿತ್ತು. ಇದರಲ್ಲಿ 25 ಎಕರೆಯನ್ನು ಎಸ್.ಜೆ. ವಿದ್ಯಾಪೀಠದ ನೌಕರರ ಗೃಹನಿರ್ಮಾಣ ಮಂಡ ಮಾರಾಟ ಮಾಡಲಾಗಿದೆ. ಸೈಟ್ ಬಾಬು ಈ ಮಂಡಳಿ ಅಧ್ಯಕ್ಷನಾಗಿದ್ದ. ಎಸ್.ಜೆ.ಎಂ. ವಿದ್ಯಾಪೀಠದ ನೌಕರರಿ ನಿವೇಶನಕ್ಕಾಗಿ ಹಣವನ್ನೂ ಸ್ವೀಕರಿಸಲಾಗಿತ್ತು. ಉಳ ಜಮೀನಿನಲ್ಲಿ 5 ಎಕರೆಯನ್ನು ನಗರಾಭಿವೃದ್ಧಿ ಪ್ರಾಧಿಕಾ ನೀಡಲಾಗಿದೆ. ಪ್ರಾಧಿಕಾರ ಅಲಿನೇಷನ್ ಮಾಡಿ ಒಂದೊಂದು ನಿವೇಶನವನ್ನು ತಲಾ 4-5 ಲಕ್ಷ ರೂಪಾಯಿ ಮಾರಾಟ ಮಾಡಿದೆ. ತಾವು ಬಿಸಾ ಬೆಲೆಗೆ ಕೊಟ್ಟ ತಮ್ಮ ಜಮೀ ಮೌಲ್ಯ ಇಷ್ಟೊಂದು ದುಬಾರಿಯ ಎಂದು ಅರಿವಾಗುತ್ತಿದ್ದಂತೆ ಪವ ಆಫ್ ಅಟಾರ್ನಿ ಬರೆದುಕೊಟ್ಟ ಆರು ಜನ ಅದನ್ನು ರದ್ದು ಮಾಡಿ ದ್ದಾರೆ. ಕೋರ್ಟ್‌ಗೆ ಹೋಗಿ ಕ್ಯಾನ್ಸಲೇಶನ್‌ಗೆ ತಡೆಯಾಜ್ಞೆ ತರಲಾಗಿ

ಕೆಲವು ತಿಂಗಳ ಹಿಂದೆ ಇ ನಿವೇಶನಗಳಿಗೆ ಹೊಂದಿಕೊಂಡಂತ ಸರ್ಕಾರಿ ಜಮೀನು ನುಂಗುವ ಸ್ಕೀಮ ಹಾಕಿಕೊಂಡು ಅಲ್ಲಿದ್ದ ಬಂಡೆಗ ಗಳನ್ನು ಸ್ಫೋಟಿಸಿದ ಪರಿಣಾ ಜಿಲ್ಲಾಧಿಕಾರಿ ಅಮ್ಲಾನ್ ಆದಿ ಬಿಸ್ವಾಸ್ ಈ ಜಮೀನನ್ನು ಫೋ ನಿಬಂಧನೆಗಳಿಗೆ ವಿರುದ್ಧವಾಗಿ ಬ ಕೊಳ್ಳಲಾಗುತ್ತಿದೆ ಎಂದು ಆಕ್ಷೇಪಿಸಿ, ನಿವೇಶನಗಳ ಅ ವೃದ್ಧಿಗೆ ತಡೆ ಹಾಕಿದ್ದಾರೆ.

ಎಸ್.ಜೆ.ಎಂ. ವಿದ್ಯಾಪೀಠದ ನೌಕರರ ಹೆಸ ಖರೀದಿಸಲಾಗಿದ್ದ ಈ ಜಮೀನನ್ನು ತಮ್ಮ ಸ್ವಂತ ಎಂದು ಸೈಟ್‌ಬಾಬು, ಬಸವರಾಜನ್ ಮತ್ತಿತರರು ಕ್ಲೈಮ ಮಾಡುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಎಸ್.ಜೆ. ವಿದ್ಯಾಪೀಠದ ನೌಕರರ ಗೃಹಮಂಡಳಿಯನ್ನು, ಎಸ್.ಜೆ. ಗೃಹ ಮಂಡಳಿ ಎಂದು ಬದಲಾಯಿಸಿಕೊಂಡಿದ್ದಾರೆ. ಇ ಬೇಕಾದ ಬೈಲಾ ತಿದ್ದುಪಡಿ, ನೋಂದಣಿ ಇತ ಗಳೆಲ್ಲವನ್ನೂ ಸಂಬಂಧಪಟ್ಟ ಅಧಿಕಾರಿಗಳನ್ನೂ ಒಳಹ ಕೊಂಡೇ ಮಾಡಿದ್ದಾರೆ. ಕೋಟ್ಯಂತರ ಮೌಲ್ಯದ ಆಸ್ತಿಯ ಬೃಹನ್ಮಠಕ್ಕೆ ವಾಪಸು ಪಡೆಯುವ ಪ್ರಯತ್ನಗ ನಡೆಯುತ್ತಿವೆ.

ಜನತಾ ಬಜಾರ್ ಗೋಲ್‌ಮಾಲ್

1970 ರ ದಶಕದಲ್ಲಿ ನೀಲಕಂಠೇಶ್ವರ ದೇವಸ್ಥಾ ಬಳಿಯಿರುವ ಜನತಾ ಬಜಾರ್‌ಗೆ ಸಾರ್ವಜನ ಉದ್ದೇಶಕ್ಕೋಸ್ಕರ ಅತ್ಯಂತ ಕಡಿಮೆ ಬೆಲೆಯಲ್ಲಿ ಬೃಹ ನಿವೇಶನ ನೀಡಲಾಗಿತ್ತು. ಈ ನಿವೇಶನದ ಸ್ವಲ್ಪಭಾಗದ ಜನತಾಬಜಾರ್ ನಿರ್ಮಿಸಲಾಗಿತ್ತು. ಉಳಿದ ಭಾಗದ ನಿವೇ 2002 ರವರೆಗೆ ಹಾಗೇ ಇತ್ತು. ಈ ನಿವೇಶನವ ಎಸ್.ಜೆ.ಎಂ. ಕೋಆಪರೇಟಿವ್ ಬ್ಯಾಂಕ್‌ಗೆ ಖರೀ ಲಾಯಿತು. ನಂತರ ಇದನ್ನು ಆರು ಭಾಗ ಮಾಡಿ ತ 11 ಲಕ್ಷದಂತೆ ಖಾಸಗಿಯವರಿಗೆ ಮಾರಾಟ ಮಾ ಲಾಯಿತು. ಇದರಲ್ಲಿ ಇನ್ನೂ ಎರಡು ನಿವೇಶನಗಳಿ

ನಿಯಮಾವಳಿಯ ಪ್ರಕಾರ ಯಾವುದೇ ಕೋ-ಆಪರೇಟಿವ್ ಬ್ಯಾಂಕ್, ಸೊಸೈಟಿ ಆಸ್ತಿ ಪರಭಾರೆ, ಖರೀದಿಗೆ ಸರ್ಕಾರದ ಅನುಮತಿ ಪಡೆಯಬೇಕು. ಜನತಾ ಬಜಾರ್‌ನವರೇನೂ ನಿವೇಶನ ಮಾರಾಟ ಮಾಡಲಿಕ್ಕೆ ಪರವಾನಗಿ ಪಡೆದಿದ್ದರು. ಆದರೆ ಇದೇ ನಿವೇಶನವನ್ನು ಎಸ್.ಜೆ.ಎಂ. ಬ್ಯಾಂಕ್‌ಗೆ ಖರೀದಿ ಮಾಡಲಿಕ್ಕಾಗಲೀ, ನಂತರ ಮಾರಾಟ ಮಾಡಲಿಕ್ಕಾಗಲೀ ಸರ್ಕಾರದ ಪರವಾನಗಿ ಪಡೆದಿಲ್ಲ. ಬಹಳ ಮುಖ್ಯವಾಗಿ 25 ಲಕ್ಷಕ್ಕೆ ಬ್ಯಾಂಕ್‌ಗೆ ಖರೀದಿಸಲಾಗಿದೆಯೆಂದು ಹೇಳಲಾಗಿದೆಯಾದರೂ ಖರೀದಿಯಾದ ವರ್ಷದಲ್ಲಿ ಸದರಿ ಬ್ಯಾಂಕ್‌ನ ಆಡಿಟ್ ವರದಿಯಲ್ಲಿ ಈ 25 ಲಕ್ಷ ವಹಿವಾಟಿನ ದರ್ಶನವೇ ಇಲ್ಲ. ಈ ಕ್ಷಣಕ್ಕೂ ಇದೀ ಖರೀದಿ ವ್ಯವಹಾರ ಕಾನೂನಿನ ಪ್ರಕಾರ ಅನೂರ್ಜಿತವಾಗುತ್ತದೆ. ಇಂತಹ ಐನಾತಿ ಕೆಲಸ ಗಳಿಗೆಲ್ಲಾ ಐಡಿಯಾ ಕೊಟ್ಟವರು, ದೊಡ್ಡಮಟ್ಟದಲ್ಲಿ ಫಲಾನುಭವಿಯಾದವನು once again ಇದೇ ಸೈಟ್ ಬಾಬು. ಈಗ ಉಳಿದೆರಡು ನಿವೇಶನಗಳಿಗೂ ತಕರಾರು ಹಾಕಿದ್ದಾರೆ.

ಪೆಟ್ರೋಲ್‌ಬಂಕ್ ಲೀಸ್ ಪುರಾಣ

ಎಸ್‌ಜೆ ಡೆಂಟಲ್ ಕಾಲೇಜಿಗೆ ಹೊಂದಿಕೊಂಡಿರುವ ಪೆಟ್ರೋಲ್ ಬಂಕ್ ಹಾಗೂ ಜ್ಯೂಸ್ ಸ್ಟಾಲ್ ಇರುವ ನಿವೇಶನವನ್ನು 2004ರಲ್ಲಿ ತಿಂಗಳಿಗೆ 2 ಸಾವಿರ ರೂ.ಗಳಂತೆ 5 ವರ್ಷ ಬಸವರಾಜನ್ ತನ್ನ ಹೆಸರಿಗೆ ಲೀಸ್ ಮಾಡಿಸಿಕೊಂಡಿದ್ದಾರೆ. ವಿಪರ್ಯಾಸವೆಂದರೆ ಈ ಲೀಸ್ ನ ಸಮಯದಲ್ಲೇ ಅದೇ ನಿವೇಶನದಿಂದ ಬೃಹನ್ಮಠಕ್ಕೆ ಬಾಡಿಗೆ ರೂಪದಲ್ಲಿ ತಿಂಗಳಿಗೆ 35 ಸಾವಿರ ಬರುತ್ತಿತ್ತು.

ಮಠದಿಂದ ಹೊರಹಾಕಿದ ನಂತರ ಸದರಿ ನಿವೇಶನದ ಬಾಡಿಗೆ ತನಗೆ ಬರಬೇಕೆಂದು ಪಟ್ಟುಹಿಡಿದಿದ್ದಾರೆ. ನಿವೇಶನದ ಬಳಕೆದಾರರು ಬೃಹನ್ಮಠಕ್ಕೆ ಬಾಡಿಗೆ ಕಟ್ಟುತ್ತಿದ್ದರಿಂದ ಈ ಬಾಡಿಗೆ ಹಣವನ್ನು ಬಸವರಾಜನ್‌ಗೆ ಕೊಡುವುದೋ ಬಿಡುವುದೋ ಗೊಂದಲದಲ್ಲಿ ಪೆಟ್ರೋಲ್ ಬಂಕ್‌ನ್ನೇ ಬಂದ್ ಮಾಡಿದ್ದಾರೆ. ಇದರಿಂದ ಮಠಕ್ಕೆ ಬರುತ್ತಿದ್ದ ಆದಾಯವೂ ನಿಂತು ಹೋಗಿದೆ. ಇದಕ್ಕೂ ಮುಖ್ಯವಾದ ಅಂಶವೆಂದರೆ ಈ ನಿವೇಶನವನ್ನು ಆಡಳಿತಾಧಿಕಾರಿಯಾಗಿದ್ದ ಬಸವರಾಜನ್ ತಮ್ಮ ಸ್ವಂತ ಹೆಸರಿಗೆ ಲೀಸ್ ಮಾಡಿಕೊಳ್ಳಲು ಕಾರಣವೇನು? ಮಠದ ನಿವೇಶನ ಬಸವರಾಜನ್‌ಗೆ ಲೀಸ್ ಮಾಡುವಾಗ ಶಿವಮೂರ್ತಿ ಶರಣರು ಏಕೆ ಆಕ್ಷೇಪಿಸಲಿಲ್ಲ?

ಮಲ್ಲಾಡಿಹಳ್ಳಿ ಅನಾಥ ಸೇವಾಶ್ರಮದಲ್ಲಿ ಆವಾಜ್

ಇದು ಕಳೆದ ಮೂರ್ನಾಲ್ಕು ದಿನಗಳ ಕೆಳಗೆ ನಡೆದ ಘಟನೆ. ಮಲ್ಲಾಡಿಹಳ್ಳಿ ಅನಾಥ ಸೇವಾಶ್ರಮದ ಟ್ರಸ್ಟ್ ಕಾರ್ಯದರ್ಶಿಯಾಗಿದ್ದ ಎಸ್.ಕೆ. ಬಸವರಾಜನ್ ತನ್ನ ಛೇಲಾ ಬಳಗ ಸಮೇತ ಮಲ್ಲಾಡಿಹಳ್ಳಿಯ ಬೆರಳೆಣಿಕೆಯ ಅತೃಪ್ತರ ಗುಂಡು ಕಟ್ಟಿಕೊಂಡು ಹೋಗಿ ಟ್ರಸ್ಟ್ ಆಡಳಿತಾಧಿಕಾರಿ, ಮಾಜಿ ರಾಘವೇಂದ್ರ ಪಾಟೀಲರಿಗೆ ಧಮ್ಕಿ ಹೊಡೆದಿದ್ದಾರೆ. ನಾನು ಟ್ರಸ್ಟ್‌ನ ಕಾರ್ಯದರ್ಶಿ, ಎಂ.ಎಲ್.ಎ ಗೊತ್ತಾ? ನನ್ನ ಗಮನಕ್ಕೆ ತರದೇ ಕಾರ್ಯಕ್ರಮಗಳನ್ನು ಮಾಡ್ತೀರಿ. ನನ್ನನ್ನು ಯಾಕೆ ಆಹ್ವಾನಿಸುವುದಿಲ್ಲ? ಹಾಗೆ-ಹೀಗೆ...., ನಡೆದಿದೆ ಮಾತುಕತೆ. ಆಗ ಬಸವರಾಜನ್‌ಗೆ ಕಾರ್ಯದರ್ಶಿ ಸ್ಥಾನದಿಂದ ಐದಾರು ತಿಂಗಳ ಕೆಳಗೆ ಕೈಬಿಟ್ಟಿರುವ ವಿಷಯವನ್ನು ತಿಳಿಸಿದ್ದಾರೆ. ಅದು ಹೇಗೆ ಸಾಧ್ಯ? ನಾನು ಕೋರ್ಟಿಗೆ ಹೋಗುತ್ತೇನೆ ಎಂದು ಹೇಳಿಬಂದಿದ್ದಾರೆ. ಮೇಲೆ ಹೇಳಿದ ಅಷ್ಟೂ ಪ್ರಕರಣಗಳ ಕಿರು ಮಾಹಿತಿಯನ್ನಷ್ಟೇ ಇಲ್ಲಿ ನೀಡಲಾಗಿದೆ. ಈ ಗೋಲ್‌ಮಾಲ್‌ಗಳು ಹೇಗೆ ನಡೆದವು? ಇದರಲ್ಲಿ ಪಾಲುದಾರರು ಯಾರ್‍ಯಾರು? ಬಸವರಾಜನ್ ಪಾತ್ರ ಯಾವ ರೀತಿಯದು? ಇಷ್ಟೆಲ್ಲಾ ನಡೆದಿದ್ದರೂ ನಾನೇನೂ ಮಾಡಿಲ್ಲ. ನನ್ನನ್ನು ಯಾರೂ ಏನು ಮಾಡ್ಕೊಳ್ಳೋಕಾಗಲ್ಲ ಎಂದು ಬಸವರಾಜನ್ ಯಾವ ಧೈರ್ಯದಿಂದ ಹೇಳುತ್ತಿದ್ದಾರೆ ಎಂಬುದನ್ನೆಲ್ಲಾ ದಾಖಲಿಸುತ್ತಾ ಹೋದರೆ ಮತ್ತೊಂದು 'ಬಸವ ಪುರಾಣವನ್ನೇ ಬರೆಯಬೇಕಾದೀತು.

ಒಟ್ಟಾರೆ ಮಠದ ಅಧಿಕಾರಿಯಾಗಿದ್ದಾಗ ಎಸ್.ಕೆ. ಬಸವರಾಜನ್ ಹೆಸರಲ್ಲಿ, ಇನ್ನೂ ಕೆಲವು ಬೇನಾಮಿ ವ್ಯಕ್ತಿಗಳ ಹೆಸರಲ್ಲಿ ಖರೀದಿಸಿದ ಆಸ್ತಿ-ಪಾಸ್ತಿಗಳು ತ್ರಿಶಂಕು ಸ್ಥಿತಿಯಲ್ಲಿವೆ. ಇಂತಹ ಬೇನಾಮಿ ಆಸ್ತಿಗಳ ವಿವರಗಳನ್ನು ಸಂಗ್ರಹಿಸಿ ಮಠದ ವಶಕ್ಕೆ ಪಡೆದುಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ. ಈ ಗೋಲ್‌ಮಾಲ್ ವ್ಯವಹಾರಗಳ ತಲೆ-ಬುಡ ತಿಳಿಯದ ಮುರುಘಾಶರಣರು ಈಗ ಎಲ್ಲವನ್ನೂ ಹತೋಟಿಗೆ ತೆಗೆದುಕೊಂಡು ದೃಢ ನಿರ್ಧಾರದಿಂದ ಮುಂದುವರಿಯುತ್ತಿದ್ದಾರೆ. ರಾಜ್ಯದಾದ್ಯಂತ ಇರುವ ಭಕ್ತ ಸಮೂಹದ ಬೆಂಬಲವೂ ಅವರಿಗಿದೆ.

ಮುರುಘೇಶನ ಕೃಪೆಯಿಂದಲೇ ಆಸ್ತಿ, ಹಣ, ಅಂತಸ್ತು ಆರಾಮಿ ಬದುಕು, ರಾಜಕೀಯಾಧಿಕಾರ ಎಲ್ಲವನ್ನೂ ಅನುಭವಿಸಿರುವ ಬಸವರಾಜನ್ ಇದೆಲ್ಲಾ ರಣಾರಂಪವಾಗುವ ಮೊದಲೇ ಉದಾತ್ತ ದಾಸೋಹ ಪರಂಪರೆಯ, ಜನತೆಯ ಸ್ವತ್ತಾಗಿರುವ ಮುರುಘಾಮಠದ ಆಸ್ತಿಪಾಸ್ತಿಗಳನ್ನು ಮಠಕ್ಕೆ ಹಿಂತಿರುಗಿಸುವುದು ಅವರಿಗೂ, ಅವರ ರಾಜಕೀಯ ಭವಿಷ್ಯಕ್ಕೂ ಒಳ್ಳೆಯದು. ■

ಮಠಕ್ಕೆ ಇಲಿಗಳಾದರು



ಬೃಹನ್ಮಠ

ಮಲ್ಲಿಕಾರ್ಜುನ ಸ್ವಾಮಿಗಳನಿಧನಾ ನಂತರ ಪೀಠಕ್ಕೇರಿದ ಶಿವಮೂರ್ತಿ ಮುರುಘಾಶರಣರು ಬದಲಾದ ಕಾಲಮಾನಕ್ಕೆ ತಕ್ಕಂತೆ ಬೃಹನ್ಮಠದಲ್ಲಿ ಹಲವಾರು ಪ್ರಗತಿಪರ, ವೈಚಾರಿಕ ಬದಲಾವಣೆ ತಂದರು. ಸಂಪ್ರದಾಯವಾದಿಗಳ ಉಗ್ರಟೀಕೆಗಳಿಗೂ ಸೊಪ್ಪುಹಾಕದೆ ತಾವು ಅಂದುಕೊಂಡದ್ದನ್ನು ಜಾರಿ ಮಾಡಿದರು. ನಾಡಿನ ಪ್ರಗತಿಪರರು ಒಂದಿಷ್ಟು ಭರವಸೆಯಿಂದ ಮುರುಘಾಮಠದತ್ತ ಗಮನಹರಿಸುತ್ತಿದ್ದರೆ ಅದಕ್ಕೆ ಶಿವಮೂರ್ತಿ ಶರಣರೇ ಕಾರಣ.

ಶಾಸ್ತ್ರ-ಸಂಪ್ರದಾಯಗಳನ್ನು ಪ್ರಶ್ನಿಸುವುದರಿಂದ ವಿಧವಾವಿವಾಹಗಳನ್ನು, ಅಂತರ್ಜಾತಿ ವಿವಾಹಗಳನ್ನು ಮಾಡುವವರೆಗೆ, ಕೋಮುಗಲಭೆಗಳು, ಜಾತಿಗಲಭೆಗಳು, ಸಾಮಾಜಿಕ ಬಹಿಷ್ಕಾರಗಳಂತ ವಿದ್ಯಮಾನಗಳು ನಡೆದ ಕಡೆ ಶಿವಮೂರ್ತಿ ಶರಣರು ಹಿಂದೆಮುಂದೆ ಯೋಚಿಸದೇ ಸಾಂತ್ವನ ಹೇಳಿಬಂದಿದ್ದಾರೆ.

ಮುರುಘಾಮಠದಲ್ಲಿ ಪ್ರತಿ ತಿಂಗಳ ಐದನೇ ತಾರೀಖಿನಂದು ನಡೆಯುವ ಸರಳ ವಿವಾಹಗಳು, ಸರಳ ಸಾಮೂಹಿಕ ವಿವಾಹಗಳ ಬಗೆಗಿದ್ದ ಹಗುರ ಭಾವನೆಯನ್ನು ಹೋಗಲಾಡಿಸಿದೆ. ಮಾತ್ರವಲ್ಲ, ಸಹಸ್ರಾರು ಬಡಕುಟುಂಬಗಳು ಮದುವೆಯ ನೆಪದಲ್ಲಿ ಸಾಲದ ಉರುಳಿಗೆ ಸಿಲುಕುವುದನ್ನು ತಪ್ಪಿಸಿದ್ದಾರೆ. ನಾಡಿನ ಮೂಲೆ ಮೂಲೆಗಳಿಗೆ ಅಕ್ಷರಶಃ ಜಂಗಮನಂತೆ ಸಂಚರಿಸಿ ಬಸವತತ್ವ ಪ್ರಚಾರ ಮಾಡಿದ್ದಾರೆ. ಇದೇ ಕ್ರಿಯಾಶೀಲತೆಯನ್ನು ಮಠದ ಆಡಳಿತಾತ್ಮಕ, ವ್ಯಾವಹಾರಿಕ ಆಗುಹೋಗುಗಳ ವಿಚಾರದಲ್ಲಿ ತೋರಿಸುವಲ್ಲಿ ಎಡವಿದ್ದಾರೆಂದೇ ಹೇಳಬೇಕು. ಶಿವಮೂರ್ತಿ ಮುರುಘಾಶರಣರ ಅಧೀನದಲ್ಲಿ ಕೆಲಸ ಮಾಡುವವರು ಅದರಲ್ಲೂ ಆಯಕಟ್ಟಿನ ಜವಾಬ್ದಾರಿಗಳನ್ನು ಹೊತ್ತವರು ಶ್ರೀಗಳ ಅತಿಯಾದ ವಿಶ್ವಾಸ, ನಂಬಿಕೆಯನ್ನು ಇನ್ನಿಲ್ಲದಂತೆ ದುರುಪಯೋಗಪಡಿಸಿಕೊಂಡಿದ್ದಾರೆ. ಹಾಗೆ ದುರುಪಯೋಗಪಡಿಸಿಕೊಂಡವರ ಪಟ್ಟಿಯಲ್ಲಿ ಆಡಳಿತಾಧಿಕಾರಿಯಾಗಿದ್ದ ಎಸ್.ಕೆ. ಬಸವರಾಜನ್, ಶ್ರೀಮತಿ ಸೌಭಾಗ್ಯ ಬಸವರಾಜನ್, ಸೈಟ್‌ಬಾಬು, ಸೌಭಾಗ್ಯಮ್ಮನ ತಮ್ಮ ದೇವರಾಜ್, ಪರ್ಚೇಸಿಂಗ್ ಆಫೀಸರ್ ರುದ್ರಪ್ಪ, ಮ್ಯಾನೇಜರ್ ವಿರೂಪಾಕ್ಷಪ್ಪ ಗಡ್ಡದ ತಿಪ್ಪಣ್ಣ ಸೈಟ್‌ಬಾಬು ತಮ್ಮ ಉಂಗುರದ ತಿಪ್ಪಣ್ಣ ಕೋಡಿಹಳ್ಳಿ ರಮೇಶ ಹೀಗೆ ಮುಂದುವರಿಯುತ್ತದೆ.

ಮಠದ ಆಸ್ತಿಯನ್ನು ತಮ್ಮ ಆಡುಂಬೊಲಕ್ಕೆ ತಕ್ಕಂತೆ ಬಳಸಿಕೊಂಡ ಈ ಮಹಾಶಯರು ಇಂದು ಕೋಟ್ಯಾಧೀಶರಾಗಿದ್ದಾರೆ. ಇದೆಲ್ಲಕ್ಕೂ ಕಿಂಗ್ ಪಿನ್‌ನಂತೆ ಕೆಲಸ ಮಾಡಿದವರು, ನೆರವಾದವರು ಬಸವರಾಜನ್ ಮತ್ತು ಸೌಭಾಗ್ಯ ಬಸವರಾಜನ್. ಬಸವರಾಜನ್ ಮೇಲಿದ್ದ ಅತಿಯಾದ ವಿಶ್ವಾಸದಿಂದ ಮುರುಘಾ ಶರಣರು ಇತ್ತ ಗಮನಹರಿಸಲಿಲ್ಲ.

ಸೈಟ್ ಬಾಬು



ಸೈಟ್ ಬಾಬು

ಏಳೆಂಟು ವರ್ಷಗಳ ಕೆಳಗೆ ಲಡಕಾಸಿ ಬಜಾಜ್‌ನಲ್ಲಿ ಅತ್ತಿಂದಿತ್ತ ತಿರುಗುತ್ತಾ ಮಠದ ಅಂಗಳಕ್ಕೆ ಬಂದ ಸೈಟ್‌ಬಾಬು ಇಂದು ಕೋಟ್ಯಾಧಿಪತಿ. ಈತ ವಾಸಿಸುವ ಮನೆಯ ಮೌಲ್ಯವೇ ಕೋಟಿ ಬೆಲೆ ಬಾಳುತ್ತದೆ. ಮ್ಯಾನೇಜರ್ ವಿರೂಪಾಕ್ಷಪ್ಪನ ಮೂಲಕ ಮಠಕ್ಕೆ ಎಂಟ್ರಿಯಾದವನು ಇವತ್ತು ಬೆಂಗಳೂರು ಸೇರಿದಂತೆ ಪ್ರಮುಖ ನಗರಗಳಲ್ಲಿ ರಿಯಲ್ ಎಸ್ಟೇಟ್ ಬಿಸಿನೆಸ್‌ನಲ್ಲಿ ಕೋಟಿಗಟ್ಟಲೇ ತೊಡಗಿಸಿದ್ದಾನೆ. ಇವನ ರಿಯಲ್ ಎಸ್ಟೇಟ್ ದಂಧೆಗೆ ಮುರುಘಾಮಠದ ಪ್ರಭಾವ ಮತ್ತು ಹಣವನ್ನು ದುಡಿಮೆಯ ಬಂಡವಾಳವಾಗಿ ಬಳಸಿಕೊಂಡಿದ್ದಾನೆ. ಲ್ಯಾಂಡ್ ಡೀಲುಗಳನ್ನೆಲ್ಲಾ ಮುರುಘಾಮಠದ ಹೆಸರಿನಲ್ಲಿ ಮಾಡಿ ನಂತರ ಅದನ್ನು ಖಾಸಗಿ ವ್ಯಕ್ತಿಗಳಿಗೆ ಪರಭಾರೆ ಮಾಡಿ ಕೋಟಿಗಟ್ಟಲೇ ಕಮೀಷನ್ ಪಡೆದಿದ್ದಾನೆ. ಜನತಾಬಜಾರ್ ಗೋಲ್‌ಮಾಲ್ ವ್ಯವಹಾರದಲ್ಲಿ ಕೆಂಚನಕಟ್ಟೆ ಜಮೀನು ವ್ಯವಹಾರದಲ್ಲೂ ಈತನೇ ಕಿಂಗ್‌ಪಿನ್. ಬಸವರಾಜನ್ ಹಾದಿತಪ್ಪಿ ಮಠದ ಆಸ್ತಿಯನ್ನು ಅಂದಾದುಂದಿ ಬಳಸಿಕೊಳ್ಳಲು ಪ್ರೇರಣೆ ನೀಡಿದವನೇ ಸೈಟ್‌ಬಾಬು. ಈತನ ಸಹೋದರ-ಉಂಗುರದ ತಿಪ್ಪಣ್ಣನದೂ ಅದೇ ಕತೆ. ಈತ ಕೂಡಾ ಕೋಟ್ಯಾಧೀಶ. ಈತ ಬಂಗಾರದ ಉಂಗುರಗಳನ್ನು ಕೈಬೆರಳಿಗೆ ಮಾತ್ರ ಹಾಕಿಕೊಳ್ಳುವ ಸಾಧ್ಯತೆ ಇರುವುದರಿಂದ ಬಂಗಾರದ ಪ್ರೀತಿ ಅಷ್ಟಕ್ಕೆ ಸೀಮಿತವಾಗಿದೆ. ವ್ಯವಹಾರಿಕ ಅಡೆತಡೆಗಳಿಂದ ತ್ರಿಶಂಕು ಸ್ಥಿತಿಯಲ್ಲಿದ್ದ ಮಾರುತಿ ಇನ್‌ಲಾಡ್ಜ್‌ನಲ್ಲಿ ದರ್ಬಾರು ನಡೆಸುತ್ತಿದ್ದ ಈತನಿಗೆ ಕೆಲವು ವಾರಗಳ ಹಿಂದೆ ಗೇಟ್‌ಪಾಸ್ ನೀಡಲಾಗಿದೆ.

ಪರ್ಚೇಸಿಂಗ್ ರುದ್ರಪ್ಪ

ಶಿವಮೂರ್ತಿ ಶರಣರ ಜೊತೆಯಲ್ಲಿದ್ದವನು ಎಂಬ ಕಾರಣದಿಂದ ಮಠದಲ್ಲಿ ನೆಲೆಕಂಡುಕೊಂಡ ರುದ್ರಪ್ಪ ಬಸವರಾಜನ್ ಕೃಪೆಯಿಂದಾಗಿ ಪರ್ಚೇಸಿಂಗ್ ಆಫೀಸರ್ ಆದ. ಬೃಹನ್ಮಠದ ಬಹುತೇಕ ಕಟ್ಟಡ ನಿರ್ಮಾಣದ ಕೆಲಸಗಳು ನಡೆದದ್ದು ಈತನ ಸಾರಥ್ಯದಲ್ಲೇ. ಸಮಸ್ತ ಖರೀದಿ ವ್ಯವಹಾರವೆಲ್ಲ ಕಮಿಷನ್ ದಂಧೆಯ ಮೇಲೆ ನಡೆಯುತ್ತಿದ್ದರಿಂದ ಅದರ ಪ್ರಮುಖ ಫಲಾನುಭವಿ ರುದ್ರಪ್ಪನೇ. ಈತ ಕೂಡಾ 70-80 ಲಕ್ಷ ಮೌಲ್ಯದ ಮನೆ ಕಟ್ಟಿಸಿದ್ದಾನೆ. ಇದು ಎಲ್ಲರ ಕಣ್ಣಿಗೂ ಕಾಣುವ ಆಸ್ತಿ, ಕಾಣದ ಆಸ್ತಿ ವಿವರಗಳು ಎಷ್ಟಿವೆಯೋ?

ಮ್ಯಾನೇಜರ್ ವಿರೂಪಾಕ್ಷಪ್ಪ

ಮಠಕ್ಕೆ ಟ್ರ್ಯಾಕ್ಟರ್ ಡ್ರೈವರ್ ಆಗಿ ಬಂದ ಮ್ಯಾನೇಜರ್ ವಿರೂಪಾಕ್ಷಪ್ಪನದೂ ಇಂಥದ್ದೇ ಕತೆ. ಮೊನ್ನೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಈತ ಎಸ್.ಕೆ. ಬಸವರಾಜನ್‌ಗೆ 50 ಲಕ್ಷ ರೂ. ಸಾಲ ದಯಪಾಲಿಸಿದ್ದಾನೆ. ಬೃಹನ್ಮಠದ ಹತ್ತಿರವೇ ಒಂದು ಬ್ರಿಕ್ ಫ್ಯಾಕ್ಟರಿ ಇದೆ.

ಕಿಮಿ ರಮೇಶ

ಎಸ್.ಜೆ.ಎಂ. ಮಹಿಳಾ ಕಾಲೇಜಿನಲ್ಲಿ ಎಫ್‌ಡಿಸಿಯಾಗಿರುವ ಈತ ಕೂಡಾ ಅರ್ಧ ಕೋಟಿಗೂ ಹೆಚ್ಚು ಮೌಲ್ಯದ ಮನೆ ಕಟ್ಟಿಸಿಕೊಂಡಿದ್ದಾನೆ. ಅದೂ ಎಸ್.ಜೆ.ಎಂ. ಕಾಲೇಜು ಹಿಂಭಾಗದಲ್ಲೇ. ಕುಂಚಟಿಗ ಲಿಂಗಾಯತ ಎಂಬ ಕಾರಣಕ್ಕೆ ಸೌಭಾಗ್ಯಮ್ಮನ ಆಶೀರ್ವಾದದಿಂದ ಬೆಳೆದವನು. ಈತನೂ ಕೋಟ್ಯಾಧೀಶ.

ಗಡ್ಡದ ತಿಪ್ಪಣ್ಣ



ತಿಪ್ಪಣ್ಣ

ಸದ್ಯ ರಾಣೆಬೆನ್ನೂರಿನ ಎಸ್.ಜೆ.ಎಂ. ಬಿಎಜೆಎಸ್‌ಎಸ್ ಕಾಲೇಜಿನಲ್ಲಿ ಸೂಪರಿಂಟೆಂಡೆಂಟ್ ಆಗಿರುವ ತಿಪ್ಪಣ್ಣ ಕೋಟಿಗಟ್ಟಲೇ ಆಸ್ತಿ ಮಾಡಿದ್ದಾನೆ. ನಿವೇಶನಗಳು, ತೋಟ, ಮನೆ, ಹೀಗೆ ಯಾವ್ಯಾವುದೋ ಬಾಬ್ತುಗಳಲ್ಲಿ ಈತನ ಬಂಡವಾಳ ಇದೆ. ಸಮಾಧಾನದ ಸಂಗತಿ ಎಂದರೆ ಹಾಲಿ ವಿವಾದದಲ್ಲಿರುವ ಮೆಡಿಕಲ್ ಕಾಲೇಜು ಆಡಿಟೋರಿಯಂ ಜಮೀನನ್ನು ಮುರುಘಾಮಠಕ್ಕೆ ಬರೆದುಕೊಟ್ಟಿರುವುದು. ಶಿವಮೂರ್ತಿಶರಣರು ಇಂತಹ ಎಲಿಮೆಂಟುಗಳನ್ನು ಗುರುತಿಸದೇ ಹೋದ ಪರಿಣಾಮ ಅದರ ಪ್ರತಿಫಲ ಈಗ ಅನುಭವಿಸುವ ಸ್ಥಿತಿ ನಿರ್ಮಾಣವಾಗಿದೆ. ಶರಣರ ಬಳಿ ನಡೆದಾಡುವ ಪ್ರತಿಯೊಬ್ಬರೂ ತಾವು ಶರಣರಿಗೆ ದಾಸಾನುದಾಸರು ವಿಧೇಯರು, ಶ್ರೀಗಳ ಶ್ರೇಯೋಭಿಲಾಷಿಗಳು ಎಂಬಂತೆ ನಟಿಸುತ್ತಾರೆ. ಶರಣರು ಬೆಳ್ಳಗಿರುವುದನ್ನೆಲ್ಲಾ ಹಾಲೆಂದು ನಂಬುತ್ತಾರೆ. ಗಿಮಿಕ್‌ವೀರರು, ವಂಚಕರನ್ನು ಪತ್ತೆಹಚ್ಚುವ ಪ್ರಯತ್ನ ಮಾಡುವುದಿಲ್ಲ. ಪರಿಣಾಮ ಮಠಕ್ಕೆ ವಂಚಿಸುವ ಮಹಾಮಹಿಮರೆಲ್ಲಾ ಆಸ್ತಿಪಾಸ್ತಿ ಮಾಡಿಕೊಂಡು ಮೆರೆಯುತ್ತಿದ್ದಾರೆ. ಮಠದಲ್ಲಿ ಪ್ರಾಮಾಣಿಕವಾಗಿ ದುಡಿಯುವವರದು ಬಾಯಿ ಮುಚ್ಚಿಕೊಳ್ಳುವ ಪರಿಸ್ಥಿತಿ. ಈಗಲಾದರೂ ಮುರುಘಾಶರಣರು ಬೃಹನ್ಮಠದ ಆಡಳಿತಾತ್ಮಕ ವ್ಯವಹಾರ, ಆಗುಹೋಗುಗಳನ್ನು ಹೊತ್ತವರ ಮೇಲೆ ಹದ್ದಿನ ಕಣ್ಣಿಡಬೇಕು. ಏಕೆಂದರೆ ಮೋಸ, ವಂಚನೆ, ಸ್ವಾರ್ಥಪರತೆ ಕೆಲವೇ ವ್ಯಕ್ತಿಗಳಿಗೆ ಸೀಮಿತವಾದ ಗುಣಸ್ವಭಾವಗಳಲ್ಲ, ಹಣದ ಹರಿವು ಇರುವ ಕಡೆ ತಾನೇತಾನಾಗಿ ಅರಳುವ ಈ ಗುಣಸ್ವಭಾವಗಳಿಗೆ ಅಂಕುಶವಿರಿಸುವುದು ತುಸು ಕಷ್ಟದ ಕೆಲಸವಾದರೂ ಆಗತ್ಯದ ಕೆಲಸ.

ಅನಾಹುತಕಾರಿ ಬೆಳವಣಿಗೆಗಳ ಮೂಲ: ಸೌಭಾಗ್ಯ ಬಸವರಾಜನ್



ಸೌಭಾಗ್ಯ

ಬೃಹನ್ಮಠದಲ್ಲಿ ಇಂತಹ ವಿದ್ಯಮಾನಗಳ ಆರಂಭವಾದದ್ದು ಹೇಗೆ? ಇಷ್ಟೊಂದು ವ್ಯವಸ್ಥಿತ, ವಿಸ್ತೃತಜಾಲ ನಿರಂತರವಾಗಿ ಮಠಕ್ಕೆ ವಂಚಿಸುವ ಕೆಲಸ ಮಾಡಿತಾದರೂ ಹೇಗೆ? ಮಠವೆಂದರೆ ಬಸವರಾಜನ್ ಎಂದರೆ ಮಠ ಎಂಬಂತಿದ್ದ ಬಸವರಾಜನ್ ಇಂತಹ ಆಗುಹೋಗುಗಳಿಗೆ ಮಠವನ್ನೇ ತೊರೆಯಬೇಕಾದ ಪರಿಸ್ಥಿತಿ ಏಕೆ ನಿರ್ಮಾಣವಾಯಿತು... ಎಂಬುದರ ಮೂಲವನ್ನು ಹುಡುಕುತ್ತಾ ಹೋದರೆ ದಶದಿಕ್ಕುಗಳಲ್ಲೂ ಕೇಳಿಬರುವ ಕಾರಣ ಮತ್ತು ಹೆಸರು ಸೌಭಾಗ್ಯ ಬಸವರಾಜನ್.

ಶ್ರೀಮಂತ ಮಠವೊಂದರ ಆಡಳಿತಾಧಿಕಾರಿಯ ಪತ್ನಿಯಾಗಿದ್ದ ಸೌಭಾಗ್ಯ ಬಸವರಾಜನ್‌ಗೆ ಸಕಲ ಸವಲತ್ತುಗಳೂ, ಗೌರವ-ಮರ್ಯಾದೆಗಳು-ಸಂದಾಯವಾಗುತ್ತಿದ್ದವು. ಅದಕ್ಕೆ ಕಾರಣ ಬೃಹನ್ಮಠ ಮತ್ತದರ ಆಡಳಿತಾಧಿಕಾರಿ ಹೊಣೆಹೊತ್ತಿದ್ದ ಬಸವರಾಜನ್ ಮೇಲೆ ಸಂಸ್ಥೆಯ ನೌಕರರು, ಅಭಿಮಾನಿಗಳು, ಭಕ್ತ ಸಮೂಹ ಇಟ್ಟಿದ್ದ ಪ್ರೀತಿವಿಶ್ವಾಸ.

ಮಹತ್ವಾಕಾಂಕ್ಷಿಯಾಗಿದ್ದ ಸೌಭಾಗ್ಯ ಬಸವರಾಜನ್‌ಗೆ ಈ ಪರಿ ದೊರೆತ ಗೌರವ ಪ್ರತಿಷ್ಠೆಗಳು ತಪ್ಪು ಸಂದೇಶ ನೀಡಿದವೇನೋ? ಕ್ರಮೇಣ ಮಠದ ಆಗುಹೋಗುಗಳನ್ನು ನಿಯಂತ್ರಿಸುವ ಪರೋಕ್ಷ ಆಡಳಿತಾಧಿಕಾರಿಯಾಗಿ ಅಧಿಕಾರ ಚಲಾಯಿಸ ಹೊರಟರು. ಬಸವರಾಜನ್ ಸೌಭಾಗ್ಯಮ್ಮನ ಯಾವ ಪ್ರಪೋಸಲ್ಲನ್ನೂ ರಿಜೆಕ್ಟ್ ಮಾಡದ ಪರಿಸ್ಥಿತಿಗೆ ಬಂದರು. ಸೌಭಾಗ್ಯಮ್ಮನ ರಾಜಕೀಯ ಪ್ರವೇಶವೂ ಆಯಿತು. ಗ್ರಾಮ ಪಂಚಾಯ್ತಿಯಿಂದ ಹಿಡಿದು ಜಿಲ್ಲಾ ಪಂಚಾಯ್ತಿ ವರೆಗೆ ಶಕ್ತಿ ರಾಜಕಾರಣದ ಎಲ್ಲಾ ವರಸೆಗಳನ್ನು ಬಳಸಿ ಕೊಂಡು ರಾಜಕೀಯಾಧಿಕಾರ ಮಾಡಿದರು. ಇದರ ಜೊತೆಗೆ ಮುರುಘಾಮಠಕ್ಕೆ ಸ್ಥಳೀಯವಾಗಿ ಒಂದಿಷ್ಟು ರಾಜಕೀಯ ಅಪಖ್ಯಾತಿಯನ್ನೂ ಅಂಟಿಸಿದರು.

ಜಾತ್ಯತೀತವಾಗಿ ಎಲ್ಲರ ಜನರ ಪ್ರೀತಿಗೆ ಪಾತ್ರವಾಗಿದ್ದ ಬೃಹನ್ಮಠದಲ್ಲಿ ಕುಂಚಟಿಗ ಲಿಂಗಾಯತರ ಸಾಮ್ರಾಜ್ಯ ಕಟ್ಟುವ, ಮತ್ತದನ್ನು ವಿಸ್ತರಿಸುವ ಕನಸು ಕಂಡು ಒಳ್ಳೆಯ ಬುನಾದಿ ಹಾಕಿದರು. ಇದರ ಮೊದಲ ಬೇರು ಹುಡುಗಾಟಿಕೆ-ಪುಂಡಾಟಿಕೆ ಸ್ವಭಾವದ ನಾಗರಾಜನನ್ನು ಬಸವಶಾಂತವೀರ ಸ್ವಾಮೀಜಿಯಾಗಿ ದೀಕ್ಷೆ ತೊಡಿಸಿ ಹೊಸದುರ್ಗದ ಒಪ್ಪತ್ತಿನ ಮಠಕ್ಕೆ ಪೀಠಾಧಿಪತಿಯನ್ನಾಗಿ ಪ್ರತಿಷ್ಠಾಪಿಸಿದ್ದು. ಈ ಶಾಂತವೀರ ಸ್ವಾಮೀಜಿ ಸೌಭಾಗ್ಯ ಬಸವರಾಜನ್‌ರ ಆಜ್ಞಾನುವರ್ತಿಯಾಗಿ ಬೆಳೆದುದು ಮಾತ್ರವಲ್ಲ, ಶಿವಮೂರ್ತಿ ಶರಣರ ಬಗ್ಗೆಯೇ ಹಗುರವಾಗಿ ಮಾತನಾಡುವಷ್ಟು ಉದ್ಧಟತನ ಪ್ರದರ್ಶಿಸಿದ.

ಶಿವಮೂರ್ತಿ ಶರಣರನ್ನು ಬೃಹನ್ಮಠದ ಪೀಠಾಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿ ಈ ಶಾಂತವೀರ ಸ್ವಾಮೀಜಿಯನ್ನು ಪೀಠಾಧ್ಯಕ್ಷ ಸ್ಥಾನಕ್ಕೇರಿಸುವ ಕಾರ್ಯತಂತ್ರಗಳಿಗೆ ಚಾಲನೆ ನೀಡಿದ್ದರು. ಅದೃಷ್ಟವಶಾತ್ ಅದಾವುದೂ ಕಾರ್ಯರೂಪಕ್ಕೆ ಬರಲಿಲ್ಲ. ಅಷ್ಟು ಮಾತ್ರವಲ್ಲ, ಹೊಸದುರ್ಗ ಒಪ್ಪತ್ತಿನ ಮಠದ ಆಸ್ತಿಯನ್ನು ನುಂಗುವ ಪ್ರಯತ್ನಗಳೂ ಫಲಕಾರಿಯಾಗಲಿಲ್ಲ. ಇದು ಒಪ್ಪತ್ತಿನ ಮಠದ ಕತೆಯಾದರೆ ಮತ್ತೊಂದುಕಡೆ ಕುಂಚಟಿಗ ಲಿಂಗಾಯತರಿಗೆ ಮಣೆಹಾಕುವ, ಅವರ ಪ್ರಾಬಲ್ಯ ಹೆಚ್ಚಿಸುವ ಕೆಲಸವನ್ನೂ ಸೌಭಾಗ್ಯಮ್ಮ ವ್ಯವಸ್ಥಿತವಾಗಿಯೇ ಮಾಡಿದರು.

ಇನ್ನು ಸೌಭಾಗ್ಯಮ್ಮನ ಸಹೋದರರ ಶ್ರೀಮಂತಿಕೆ ಆಸ್ತಿ-ಪಾಸ್ತಿಗಳನ್ನು ಅದಿದಾಖಲು ಮಾಡುವುದು ಊಹೆಗೆ ಬಿಟ್ಟದ್ದು. ■

ಓ ಬಸವಾ.... ಮತ್ತೆ ಹುಟ್ಟಿ ಬಾ!

ಹೌದು, ಕನ್ನಡನಾಡಿಗೆ ಬಸವಣ್ಣನ ಅಗತ್ಯ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಯಾವ ನಾಡಿನಲ್ಲಿ ಕ್ರಾಂತಿಕಾರಿ ಬಸವಣ್ಣ ಅಸಮಾನತೆಯ ವಿರುದ್ಧ ದಮನಿತ ಜನಸಮೂಹಗಳನ್ನು ಸಂಘಟಿಸಿ ಹೋರಾಡಿದ್ದರೋ, ಯಾವ ನಾಡಿನಲ್ಲಿ ಬಸವಣ್ಣ ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣಲಾಗುತ್ತಿದ್ದ ದಲಿತ ಸಮೂಹಗಳಲ್ಲಿ ಸ್ವಾಭಿಮಾನದ, ಆತ್ಮಗೌರವದ ಕಿಚ್ಚನ್ನು ಹೊತ್ತಿಸಿದ್ದರೋ, ಯಾವ ನಾಡಿನಲ್ಲಿ ಬಸವಣ್ಣ ವೈದಿಕ ಕಂದಾಚಾರಗಳ ವಿರುದ್ಧ ಸೆಡ್ಡು ಹೊಡೆದಿದ್ದರೋ, ಯಾವ ನಾಡಿನಲ್ಲಿ ಬಸವಣ್ಣ ದುಡಿಯುವ ಶ್ರಮಜೀವಿಗಳ ಆಂದೋಲನವನ್ನು ಕಟ್ಟಿದ್ದರೋ, ಯಾವ ನಾಡಿನಲ್ಲಿ ಬಸವಣ್ಣ ಸಮಾನತೆ, ಸ್ವಾಭಿಮಾನ, ಭ್ರಾತೃತ್ವ, ಜಾತ್ಯತೀತತೆ, ಮಾನವಪ್ರೇಮಗಳಂಥ ಉದಾತ್ತ ಧ್ಯೇಯಗಳ ಅಡಿಪಾಯದ ಮೇಲೆ ಮಹಾನ್ ಕ್ರಾಂತಿಯನ್ನು ಸಂಘಟಿಸಿದ್ದರೋ ಅಂತಹ ಕನ್ನಡನಾಡಿನಲ್ಲೀಗ ಕೋಮುವಾದಿಗಳ ಆರ್ಭಟ ಪ್ರಾರಂಭವಾಗಿದೆ; ಬ್ರಾಹ್ಮಣ್ಯದ ರುದ್ರನರ್ತನ ಅಲ್ಪಸಂಖ್ಯಾತ ಸಮುದಾಯಗಳಲ್ಲಿ ಮಾತ್ರವಲ್ಲ ದುಡಿಯುವ ದೀನ ದಲಿತ ಸಮುದಾಯಗಳಲ್ಲೂ ಆತಂಕ ಹುಟ್ಟಿಸಿದೆ; ಸಮಾನತೆ, ಭ್ರಾತೃತ್ವ, ಜಾತ್ಯತೀತತೆ, ಮಾನವಪ್ರೀತಿ, ಶಾಂತಿ, ಸಹಬಾಳ್ವೆಗಳಂತಹ ಉದಾತ್ತ ಮೌಲ್ಯಗಳು ಸಮಾಧಿಗೊಳ್ಳುತ್ತಿವೆ; ಅವುಗಳ ಜಾಗದಲ್ಲಿ ಅಸಮಾನತೆ, ಪರಧರ್ಮದ್ವೇಷ, ಅಸೂಯೆ, ಅಶಾಂತಿಗಳು ತಾಂಡವನೃತ್ಯ ಪ್ರಾರಂಭಿಸಿವೆ.

ಒಂದೆಡೆ ಬಸವಣ್ಣನ ಧ್ಯೇಯಾದರ್ಶಗಳನ್ನು, ತತ್ವಸಿದ್ಧಾಂತಗಳನ್ನು ಜನರಲ್ಲಿ ಬಿತ್ತುವ, ಬೆಳೆಸುವ ಮಹಾನ್ ಕರ್ತವ್ಯವನ್ನು ಹೆಗಲ ಮೇಲೆ ಹೊತ್ತುಕೊಳ್ಳಬೇಕಿದ್ದ ಬಸವ ಪರಂಪರೆಯ ಕೆಲವು ಮಠಗಳು 'ಪರರ ಚಿಂತೆ ನಮಗ್ಯಾಕೆ' ಎಂದು ಮೌನವ್ರತವನ್ನಾರಂಭಿಸಿಬಿಟ್ಟಿರುವುದು ಕನ್ನಡನಾಡಿನ ದೌರ್ಭಾಗ್ಯವಾದರೆ, ಇನ್ನೊಂದೆಡೆ ಯಾವ ವೈದಿಕ-ಬ್ರಾಹ್ಮಣಶಾಹಿಯನ್ನು ನಿರ್ಮೂಲನೆ ಮಾಡುವುದಕ್ಕಾಗಿ ಬಸವಣ್ಣ ಕೊನೆಯುಸಿರಿರುವ ತನಕ ಹೋರಾಡಿದ್ದರೋ ಅಂತಹ ವೈದಿಕ-ಬ್ರಾಹ್ಮಣಶಾಹಿಯೊಂದಿಗೇ ಬಸವ ಪರಂಪರೆಯ ಕೆಲವು ಮಠಗಳು ಕೈಜೋಡಿಸಿರುವುದು ಈ ನಾಡಿನ ಈ ಹೊತ್ತಿನ ಮಹಾದುರಂತವೇ ಸರಿ.



ಓ ಬಸವಾ... ಮತ್ತೆ ಹುಟ್ಟಿ ಬಾ!

■ ಕುಮಾರ್ ಬುರಡಿಕಟ್ಟಿ

ಸಿದ್ದಗಂಗೆಯ ಜಾತ್ಯತೀತತೆ ಎಲ್ಲಿ ಹೋಯಿತು?

ತುಮಕೂರಿನ ಸಿದ್ದಗಂಗಾಮಠವನ್ನೇ ತೆಗೆದುಕೊಳ್ಳಿ. ಶತಾಯುಷಿ ಶಿವಕುಮಾರ ಸ್ವಾಮಿಗಳ ನೇತೃತ್ವದಲ್ಲಿ ಸಿದ್ದಗಂಗಾ ಮಠ ಮಾಡಿದ ಜನಸೇವೆಯನ್ನು ಲೆಕ್ಕ ಹಾಕಲು ಸಾಧ್ಯವೇ? ಅನ್ನ, ಅಕ್ಷರಗಳನ್ನು ಅರಸಿಬಂದವರನ್ನು ಈ ಮಠ ಎಂದಾದರೂ ವಾಪಾಸ್ಸು ಕಳಿಸಿದ ಉದಾಹರಣೆಗಳು ಸಿಗುತ್ತವೆಯೇ? ಈ ಮಠದ ಅನ್ನ ತಿಂದು ಬದುಕಿ ಮಹತ್ಸಾಧನೆ ಮಾಡಿದ ಅದೆಷ್ಟು ಲಕ್ಷ ಜನರಿದ್ದಾರೆಂಬುದನ್ನು ಊಹಿಸಲು ಸಾಧ್ಯವೆ? ಇಲ್ಲ, ಖಂಡಿತಾ ಇಲ್ಲ. ಶಿವಕುಮಾರ ಸ್ವಾಮಿಗಳ ನೇತೃತ್ವದ ಸಿದ್ಧಗಂಗಾಮಠ ತನ್ನ ಅನ್ನದಾಸೋಹದ ಮೂಲಕ ಅದೆಷ್ಟು ಜನರಿಗೆ ಅನ್ನ ನೀಡಿದೆಯೆಂಬುದನ್ನು ಊಹಿಸಲು ಸಾಧ್ಯವಿಲ್ಲ; ತನ್ನ ಅಕ್ಷರ ದಾಸೋಹದ ಮೂಲಕ ಅದೆಷ್ಟು ಅಕ್ಷರಹೀನ ನಿರಕ್ಷರ ಕುಕ್ಷಿಗಳಿಗೆ ಅಕ್ಷರದ ಬೆಳಕು ನೀಡಿ ಅವರ ಬಾಳು ಬೆಳಗಿಸಿದೆ ಎಂಬುದನ್ನು ಲೆಕ್ಕ ಹಾಕಲು ಸಾಧ್ಯವಿಲ್ಲ. ಒಂದೊಂದು ಮಠ ಒಂದೊಂದು ಸಮುದಾಯದ ಮಠವಾಗಿ ಬೆಳೆದು ಆಯಾ ಸಮುದಾಯದ ಏಳಿಗೆಗಾಗಿ ಮಾತ್ರವೇ ದುಡಿಯುತ್ತಿರುವ ಈ ಕಾಲದಲ್ಲಿ ಯಾವುದೇ ಒಂದು ಸಮುದಾಯದ, ಜಾತಿಯ ಸೊತ್ತಾಗದೇ 'ಸರ್ವೇಜನ ಸುಖಿನೋಭವಂತು' ಎಂಬಂತೆ ಎಲ್ಲಾ ಜಾತಿಗಳ, ಧರ್ಮಗಳ, ಸಮುದಾಯಗಳ ಆಶ್ರಯ ತಾಣವಾಗಿ ಸಿದ್ದಗಂಗಾ ಮಠ ಮಾಡಿದ ಜನಸೇವೆ ನಿಜಕ್ಕೂ ಶ್ಲಾಘನೀಯ. ನಿಮಗೆ ಆಶ್ಚರ್ಯವಾಗಬಹುದು, ಈ ಮಠ ಕೇವಲ ಲಿಂಗಾಯತರ ಅಥವ ಹಿಂದೂಗಳ ಸೊತ್ತಾಗದೇ ಕ್ರಿಶ್ಚಿಯನ್ನರು, ಮುಸ್ಲಿಮರು, ಹಿಂದೂಗಳೊಳಗೇ ಇರುವ ಅಸಂಖ್ಯಾತ ಜಾತಿ, ಸಮುದಾಯಗಳ ಜನರು ಈ ಮಠದಲ್ಲಿ ಆಶ್ರಯ ಪಡೆದಿದ್ದಾರೆ.



ಸಿದ್ದಗಂಗಾ ಮಠದ ಶಿವಕುಮಾರ ಶ್ರೀಗಳು

ಆದರೆ....

ಇಂಥ ಅಮೋಘ ಸಾಧನೆ ಮಾಡಿದ, ಜಾತ್ಯತೀತ ಮೌಲ್ಯಗಳನ್ನು ಕೇವಲ ಮಾತಿನಲ್ಲಿ ಮಾತ್ರವಲ್ಲ ಕೃತಿಯಲ್ಲೂ ಸಾಧಿಸಿ ತೋರಿಸಿದ ಸಿದ್ದಗಂಗಾಮಠ ಈಹೊತ್ತು ಎತ್ತ ಸಾಗುತ್ತಿದೆ? ಆರೆಸ್ಸೆಸ್ ಮತ್ತು ಬಜೆಪಿಗಳನ್ನು ಬೆಂಬಲಿಸುವ ಮಟ್ಟಕ್ಕೆ ಅದು ಯಾಕೆ ಇಳಿಯಿತು? ವೈದಿಕ-ಬ್ರಾಹ್ಮಣಶಾಹಿಗಳ ಮತೀಯ ದ್ವೇಷ, ಕಂದಾಚಾರ, ಜಾತೀಯತೆಗಳ ನಂಜಿಗೆ ಮುಖಾಮುಖಿಯಾಗಿ ಜಾತ್ಯತೀತತೆ, ಪ್ರಗತಿಪರತೆ, ಮಾನವ ಪ್ರೀತಿಗಳನ್ನು ನಿಲ್ಲಿಸಬೇಕಿದ್ದ ಸಿದ್ದಗಂಗಾ ಮಠ ಒಂದು ಜಾತಿಯವರ ಮಠವಾಗಿ, ಬಜೆಪಿ-ಆರೆಸ್ಸೆಸ್‌ಗಳ ತಾಣವಾಗಿ ಹೋಗುತ್ತಿರುವುದೇಕೆ? ಯಡಿಯೂರಪ್ಪ ಶಿವಕುಮಾರ ಶ್ರೀಗಳಿಗೆ ರಾಜ್ಯ ಸರ್ಕಾರದ ಬಸವಶ್ರೀ ಪ್ರಶಸ್ತಿ ಕೊಟ್ಟರು. ಅದಿಷ್ಟಕ್ಕೇ ಶ್ರೀಗಳು ಸಂತೃಪ್ತರಾಗಿ ಯಡಿಯೂರಪ್ಪನ ಕೋಮು ರಾಜಕೀಯವನ್ನು ಬೆಂಬಲಿಸಲಾರಂಭಿಸಿಬಿಟ್ಟರೆ? ಯಡಿಯೂರಪ್ಪ ಲಿಂಗಾಯತ ಅನ್ನೋ ಒಂದೇ ಕಾರಣಕ್ಕೆ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಜಾತ್ಯತೀತದ ಕಗ್ಗೊಲೆಗೆ ಸಮ್ಮತಿ ಸೂಚಿಸುತ್ತಾ ಸಿದ್ದಗಂಗಾ ಮಠದ ಜಾತ್ಯತೀತ ಪರಂಪರೆಗೆ, ತಾವೇ ತಮ್ಮ ಜೀವನದುದ್ದಕ್ಕೂ ನಂಬಿಕೊಂಡು ಪರಿಪಾಲಿಸುತ್ತಾ ಬಂದಿರುವ ಧ್ಯೇಯಾದರ್ಶಗಳಿಗೆ ಈ ಇಳಿವಯಸ್ಸಿನ[ಲ್ಲಿ] ತಿಲಾಂಜಲಿಯಿಟ್ಟುಬಿಟ್ಟರೆ? ಯಡಿಯೂರಪ್ಪ ಪ್ರಶಸ್ತಿ ಕೊಡುವುದರ ಹಿಂ[ದೆ] ಸ್ವಾಮೀಜಿ ಮಾಡಿದ ಮಹತ್ಸಾಧನೆಯನ್ನು ಶ್ಲಾಘಿಸುವುದಕ್ಕಿಂತ ಸ್ವಾಮೀಜಿಗ[ಳ] ಹಿಂದಿರುವ ಭಕ್ತಕೋಟಿಯನ್ನು ತನ್ನ ಓಟ್‌ಬ್ಯಾಂಕ್ ಆಗಿ ಪರಿವರ್ತಿಸಿಕೊಳ್ಳು[ವ] ತಂತ್ರ ಅಡಗಿತ್ತೆಂಬುದು ಎಲ್ಲರಿಗೂ ಗೊತ್ತಿರುವ ಸತ್ಯ. ಅದು ಸ್ವಾಮೀಜಿ[ಗೆ] ಅರ್ಥವಾಗಲಿಲ್ಲವೆ? ಭಜರಂಗದಳ, ವಿಶ್ವಹಿಂದೂ ಪರಿಷತ್‌ನಂತಹ ಪುಂಡರ[ು] ಈ ನಾಡಿನ ಮುಸ್ಲಿಮರ ಮೇಲೆ, ಕ್ರಿಶ್ಚಿಯನ್ನರ ಮೇಲೆ ಮಾರಣಾಂತಿಕವಾ[ದ] ದಾಳಿ ನಡೆಸುತ್ತಿರುವ ಈ ಹೊತ್ತಿನಲ್ಲಿ, ಅಪರಾಧವೇ ಅಧಿಕಾರವಾ[ಗಿ] ಮೆರೆಯುತ್ತಿರುವ ಈ ಸಂದರ್ಭದಲ್ಲಿ ಶಿವಕುಮಾರ ಸ್ವಾಮೀಜಿಯಂ[ತಹ] ಯುಗಪುರುಷರ ಪಾತ್ರ ಬಹಳ ದೊಡ್ಡದಿತ್ತು. ಮಾನವೀಯತೆಯ ಮೇಲಿ[ನ] ಈ ದಾಳಿಗಳನ್ನು ಅವರು ಸಾರಾಸಗಟಾಗಿ ವಿರೋಧಿಸಬೇಕಿತ್ತು; ಮಾನವೀಯ ಧರ್ಮವನ್ನು, ಮಾನವ ಪ್ರೀತಿಯನ್ನು, ಪರಧರ್ಮ ಸಹಿಷ್ಣುತೆಯನ್ನು ಜಾತ್ಯತೀತೆಯನ್ನು ಎತ್ತಿ ಹಿಡಿಯಬೇಕಿತ್ತು. ಆದರೆ, ಸ್ವಾಮೀಜಿ ಒಂದು ಮಾತನ್ನು ಆಡಲಿಲ್ಲ, ಸಂಪೂರ್ಣ ಮೌನವ್ರತ ಆಚರಿಸಿಬಿಟ್ಟರು. 'ಮೌನಂ ಸಮ್ಮ[ತಿ] ಲಕ್ಷಣಂ' ಎಂಬುದನ್ನು ಮತ್ತೆ ವಿವರಿಸುವ ಅವಶ್ಯಕತೆಯಿಲ್ಲ.

ತುಮಕೂರಿನಲ್ಲಿ ಶಿವಣ್ಣ ಎಂಬ ಲಿಂಗವಂತ, ಕ್ಷಮಿಸಿ ಶಿವಣ್ಣ ಎಂ[ಬ] ಅಪ್ಪಟ ಕೋಮುವಾದಿ, ಪ್ರತೀಬಾರಿಯೂ ಎಮ್ಮೆಲ್ಲೆಯಾಗಿ ಗೆದ್ದುಬರುವುದ[ರ ಹಿಂದೆ] ಇದೇ ಸಿದ್ದಗಂಗಾ ಶ್ರೀಗಳ ಕೃಪಾಕಟಾಕ್ಷವಿದೆ. ಕೋಮುಸೌಹಾರ್ದತೆಯನ್ನು ಸಾರಬೇಕಿದ್ದ ಶಿವಕುಮಾರ ಸ್ವಾಮೀಜಿ ಮತ್ತು ಸಿದ್ದಗಂಗಾ ಮಠ ಇಂತ[ಹ] ಕೋಮುವಾದಿಯೊಬ್ಬನನ್ನು ಪೋಷಿಸಿ ಬೆಳೆಸುತ್ತಿದೆಯಲ್ಲ, ಇದಕ್ಕೇನೆನ್ನಬೇಕು[?]


ಬ್ರಾಹ್ಮಣ ಮಠಗಳು ದಲಿತರಿಗೆ ನ್ಯಾಯ ಒದಗಿಸುತ್ತವೆಯೆ?

ಮತಾಂತರಗಳಿಂದ ಎಲ್ಲರಿಗಿಂತ ಹೆಚ್ಚಾಗಿ ಆತಂಕಕ್ಕೊಳಗಾಗಿರುವವರು ಎಂದರೆ ಬ್ರಾಹ್ಮಣ ಮಠಗಳು ಮತ್ತು ಸಂಘಪರಿವಾರಿಗಳು. ಮತಾಂತರವನ್ನು ತಡೆಯುವುದಕ್ಕಾಗಿ ಪೇಜಾವರ ವಿಶ್ವೇಶತೀರ್ಥರಂಥ ಬ್ರಾಹ್ಮಣ ಮಠಾಧೀಶರೆಲ್ಲಾ ಸೇರಿಕೊಂಡು ರಾಜ್ಯಪಾಲರಿಗೆ ಮನವಿ ಕೊಟ್ಟಿದ್ದಾರೆ.

ಈ ಹೊತ್ತು ಅಸಲಿಗೆ ಮತಾಂತರಗೊಳ್ಳುತ್ತಿರುವವರು ಶೂದ್ರ ಮತ್ತು ದಲಿತ ಸಮುದಾಯಗಳೇ ಹೊರತು ಬ್ರಾಹ್ಮಣರಲ್ಲ. ತಮ್ಮ ಸಮುದಾಯ ಮತಾಂತರಗೊಳ್ಳುತ್ತಿರುವುದು ಗೊತ್ತಿದ್ದರೂ ಯಾವ ಶೂದ್ರ ಸ್ವಾಮಿಯಾಗಲೀ ಅಥವಾ ದಲಿತ ನಾಯಕರಾಗಲೀ ಚಕಾರವೆತ್ತುತ್ತಿಲ್ಲ. ಅದರಲ್ಲೂ ದಲಿತರಂತೂ 'ಹಿಂದೂವಾಗಿ ಹುಟ್ಟಿರುವೆ, ಹಿಂದೂವಾಗಿ ಸಾಯಲಾರೆ' ಎಂದು ಹೇಳುತ್ತಾ ಬೌದ್ಧ ಧರ್ಮವನ್ನು ಸ್ವೀಕರಿಸಿದ ಮಹಾನ್ ದಲಿತ ನಾಯಕ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನೇ ಆದರ್ಶವಾಗಿಟ್ಟುಕೊಂಡು ಮತಾಂತರವನ್ನು ಬೆಂಬಲಿಸುತ್ತಿದ್ದಾರೆ.

ಆದರೆ, ತಮ್ಮ ಸಮುದಾಯದವರ್‍ಯಾರೂ ಮತಾಂತರಗೊಳ್ಳದಿದ್ದರೂ ಈ ಬ್ರಾಹ್ಮಣ ಸ್ವಾಮಿಗಳೇಕೆ ಇಷ್ಟೊಂದು ಕಳವಳಗೊಂಡಿದ್ದಾರೆ? ಅದಕ್ಕೂ ಕಾರಣವಿಲ್ಲದಿಲ್ಲ. ಶತಶತಮಾನಗಳಿಂದ ಶೂದ್ರರನ್ನು, ದಲಿತರನ್ನು ಅಮಾನವೀಯವಾಗಿ, ಪ್ರಾಣಿಗಳಂತೆ ಶೋಷಣೆ ನಡೆಸಿರುವ ಈ ಬ್ರಾಹ್ಮಣಶಾಹಿಗಳಿಗೆ ಶೂದ್ರರು, ದಲಿತರು ಮತಾಂತರಗೊಳ್ಳುವುದರಿಂದ ಕಳವಳ ಆಗುವುದು ನಿಜ. ಈಗ 'ಹಿಂದೂ ಎಲ್ಲಾ ಒಂದು' ಎನ್ನುತ್ತಲೇ ದಲಿತರನ್ನು ಹೀನಾಯವಾಗಿ ಕಾಣುತ್ತಿರುವುದು ಈಗಲೂ ಮುಂದುವರೆದಿದೆ. ಅವರೆಲ್ಲಾ ಮತಾಂತರಗೊಂಡು ಬಿಟ್ಟರೆ ಪುರೋಹಿತರ ಸೇವೆಯನ್ನು ಮಾಡುವವರ್‍ಯಾರು?

ತನಗಿಷ್ಟ ಬಂದ ಧರ್ಮವನ್ನು ಪಾಲಿಸುವ ಹಕ್ಕನ್ನು ಭಾರತದ ಸಂವಿಧಾನ ಪ್ರತಿಯೊಬ್ಬ ನಾಗರಿಕನಿಗೆ ಕೊಟ್ಟಿದೆ. ಈ ಹಕ್ಕನ್ನು ಕಾನೂನಿನ ಚೌಕಟ್ಟಿನೊಳಗೆ ಚರ್ಚಿಸುವ ಮೊದಲು ಅದನ್ನು ಮಾನವೀಯ ನೆಲೆಯಲ್ಲಿ ಚರ್ಚಿಸಿದರೂ ಮತಾಂತರ ಸಮರ್ಥನೀಯವೆನಿಸುತ್ತದೆ. ಇಂದು ದಲಿತರು, ಶೂದ್ರರು ಕ್ರಿಶ್ಚಿಯಾನಿಟಿಗೆ ಮತಾಂತರಗೊಳ್ಳುವ ಅನಿವಾರ್ಯತೆಯನ್ನು ಸೃಷ್ಟಿಸಿದ್ದು ಯಾರು? ಇದೇ ಹಿಂದೂತ್ವವಲ್ಲವೆ? ದಲಿತರನ್ನು, ಶೂದ್ರರನ್ನು ಮನುಷ್ಯರಂತೆ ಕಂಡಿದ್ದರೆ, ಅವರಿಗೆ 'ಇದು ನಮ್ಮ ಧರ್ಮ' ಎಂಬ ಭಾವನೆ ಬರುವಂತೆ ನೋಡಿಕೊಂಡಿದ್ದರೆ ಅವರ್‍ಯಾಕೆ ಬೇರೊಂದು ಧರ್ಮವನ್ನು ಹುಡುಕಿಕೊಂಡು ಹೋಗುತ್ತಿದ್ದರು?



ವಿಶ್ವೇಶತೀರ್ಥ ಸ್ವಾಮಿ

ಉಡುಪಿಯ ಬ್ರಾಹ್ಮಣಶಾಹಿ ಅಷ್ಟ ಮಠಗಳಲ್ಲಿಯಾಗಲೀ, ಶೃಂಗೇರಿ ಶಾರದಾಪೀಠದಲ್ಲಿಯಾಗಲೀ, ರಾಮಚಂದ್ರಾಪುರ ಮಠದಲ್ಲಿಯಾಗಲೀ ಇಂದಿಗೂ ಸಹಪಂಕ್ತಿ ಭೋಜನವಿಲ್ಲ. ಅಲ್ಲಿಯೂ ಅಬ್ರಾಹ್ಮಣರಿಗೆ ಪ್ರತ್ಯೇಕ ಸಾಲು, ಬ್ರಾಹ್ಮಣರಿಗೆ ಪ್ರತ್ಯೇಕ ಸಾಲು. ಹೀಗಿರುವಾಗ ಯಾವ ಶೂದ್ರ ತಾನೆ 'ಇದು ನಮ್ಮ ಧರ್ಮ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ?

ಈ ಧರ್ಮ ಎಂಬ ಸಂಕೋಲೆಯಿಂದ ಬಿಡಿಸಿಕೊಂಡು ಓಡಿಹೋಗುವುದಕ್ಕೆ ಸಹಜವಾಗಿ ಬಯಸುವುದಿಲ್ಲವೆ? ಪೇಜಾವರ ಮಠದ ವಿಶ್ವೇಶತೀರ್ಥರು, ಇನ್ನುಳಿದ ಅಷ್ಟ ಮಠಗಳು, ರಾಮಚಂದ್ರಾಪುರ ಮಠ, ಶೃಂಗೇರಿಯ ಶಾರದಾ ಪೀಠ ತಮ್ಮ ತಮ್ಮ ಮಠಗಳಲ್ಲಿ ಸಹಪಂಕ್ತಿ ಭೋಜನವನ್ನು ಏರ್ಪಡಿಸಿ ಸಮಾಜದ ಎಲ್ಲಾ ಸಮುದಾಯಗಳ ಜನರನ್ನು ಸಮಾನವಾಗಿ ಕಾಣುವ ಪರಂಪರೆಯನ್ನು ಪ್ರಾರಂಭಿಸಲಿ, ದಲಿತನೊಬ್ಬನನ್ನು ಶೂದ್ರನೊಬ್ಬನನ್ನು ತಮ್ಮ ತಮ್ಮ ಉತ್ತರಾಧಿಕಾರಿಯನ್ನಾಗಿ ಘೋಷಿಸಲಿ. ಶೂದ್ರ ಮತ್ತು ದಲಿತ ಸಮುದಾಯಗಳಲ್ಲಿ ಭರವಸೆ ಮೂಡಿಸಲಿ. ಆಮೇಲೆ ಮತಾಂತರವನ್ನು ನಿಷೇಧಿಸಬೇಕೆಂದು ಮನವಿ ಹಿಡಿದುಕೊಂಡು ರಾಜಭವನಕ್ಕೆ ಬರಲಿ!


ಈ ವರ್ಷ ಮೈಸೂರು ದಸರಾ ಒಂದು ನಾಡಹಬ್ಬವಾಗಿರದೇ ಆರೆಸ್ಸೆಸ್ ಹಬ್ಬವಾಗಿ ಮಾರ್ಪಟ್ಟಿದೆ. ಇಡೀ ಮೈಸೂರಿನ ತುಂಬಾ ಕೇಸರಿ ಬಾವುಟಗಳು ರಾರಾಜಿಸುತ್ತಿವೆ. ಇಂಥ ಆರೆಸ್ಸೆಸ್ ಹಬ್ಬವನ್ನು ಶಿವಕುಮಾರ ಸ್ವಾಮಿಗಳು ಉದ್ಘಾಟಿಸುವುದಾರೆ. ಇದು ಸಿದ್ಧಗಂಗಾ ಪರಂಪರೆಯಲ್ಲಿಯೇ ಒಂದು ಕಪ್ಪುಚುಕ್ಕೆ ಯಾಗಿ ಉಳಿಯಲಿದೆ.

ಓ ಬಸವಣ್ಣನೇ.... ಸಿದ್ಧಗಂಗಾಮಠ ಆರೆಸ್ಸೆಸ್ ಅಡ್ಡೆಯಾಗದಂತೆ ತಡೆಯಲು ಮತ್ತೆ ಹುಟ್ಟಿ ಬಾ!

ಸಿರಿಗೆರೆ ಆರೆಸ್ಸೆಸ್‌ನ ಗರ್ಭಗುಡಿ ಏಕಾಯಿತು?

ಇನ್ನು, ಲಕ್ಷಾಂತರ ಸಾದು ಲಿಂಗಾಯತರ ಏಕೈಕ ಬೃಹನ್ಮಠವಾದ ಸಿರಿಗೆರೆ ಮಠದ ಕಥೆಯಂತೂ ಕೇಳಲೇ ಬೇಡಿ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯ ಸಾರಥ್ಯದಲ್ಲಿ ಇಡೀ ಸಿರಿಗೆರೆ ಮಠ ಆರೆಸ್ಸೆಸ್, ಭಜರಂಗದಳ, ವಿಶ್ವ ಹಿಂದೂ ಪರಿಷತ್ತು, ಬಿಜೆಪಿಗಳಂತಹ ಹಿಂದೂತ್ವವಾದಿಗಳ ಅಡ್ಡೆಯಾಗಿಹೋಗಿದೆ. ಬಸವಣ್ಣನ ಧ್ಯೇಯಾದರ್ಶಗಳನ್ನು, ಜಾತ್ಯತೀತತೆಯನ್ನು, ಮಾನವತೆಯನ್ನು ಜನರ ಹೃದಯಾಂತರಾಳದಲ್ಲಿ ಬಿತ್ತಿಬೆಳೆಸಬೇಕಿದ್ದ ಸಿರಿಗೆರೆ ಮಠ ಇಂದು ಹಿಂದೂತ್ವವಾದದ ನಂಜಿನ ರಾಜಕೀಯಕ್ಕೆ ಗರ್ಭಗುಡಿಯಾಗಿರುವುದು ಸಾದು ಲಿಂಗಾಯತರ ದೌರ್ಭಾಗ್ಯವೇ ಸರಿ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಬಹಳ ಓದಿಕೊಂಡಿದ್ದಾರೆ; ರಾಜ್ಯದ, ದೇಶದ ಅಷ್ಟೇ ಏಕೆ ಜಗತ್ತಿನಾದ್ಯಂತ ಸುತ್ತಾಡಿ ಅಪಾರ ಜ್ಞಾನ ಸಂಪಾದಿಸಿಕೊಂಡಿದ್ದಾರೆ. ಇಂತಹ ಪ್ರತಿಭಾವಂತ ಸ್ವಾಮೀಜಿಯೊಬ್ಬರು ಸಿರಿಗೆರೆ ಮಠದ ಚುಕ್ಕಾಣಿ ಹಿಡಿದಾಗ ಸಾದು ಲಿಂಗಾಯತ ಸಮುದಾಯ ಹೆಮ್ಮೆಪಟ್ಟುಕೊಂಡಿತ್ತು. ಆದರೆ, ಈ ಹೊತ್ತು ಅದೇ ಶಿವಕುಮಾರ ಸ್ವಾಮಿಗಳು ಬಸವಣ್ಣನ ಹೆಸರಿನಲ್ಲಿಯೇ ಬಸವಣ್ಣನ ಧ್ಯೇಯಾದರ್ಶಗಳನ್ನು ಸಮಾಧಿ ಮಾಡುತ್ತಿರುವುದನ್ನು ಕಂಡು ಮರುಕಪಟ್ಟುಕೊಳ್ಳುತ್ತಿದ್ದಾರೆ; ಬಸವಣ್ಣ ಯಾವ ವೈದಿಕ-ಬ್ರಾಹ್ಮಣಶಾಹಿಗಳ ವಿರುದ್ಧ ದಣಿವರಿಯದಂತೆ ಹೋರಾಡಿ ಲಿಂಗೈಕ್ಯರಾದರೋ ಅದೇ ವೈದಿಕ-ಬ್ರಾಹ್ಮಣಶಾಹಿಗಳೊಂದಿಗೆ ಕೈಜೋಡಿಸಿರುವುದನ್ನು ಕಂಡು ತಲೆತಗ್ಗಿಸುವಂತಾಗಿದೆ.

ತರಳಬಾಳು ಹುಣ್ಣಿಮೆಯೆಂದರೆ ಇಡೀ ಸಾದು ಲಿಂಗಾಯತ ಸಮುದಾಯಕ್ಕೆ ಅದೆಂತಹದ್ದೋ ಅಪಾರ ಭಕ್ತಿ. ಸಾಯುವುದರೊಳಗೆ ಒಮ್ಮೆಯಾದರೂ ತರಳಬಾಳು ಹುಣ್ಣಿಮೆಯಲ್ಲಿ ಭಾಗವಹಿಸಬೇಕೆಂದು ಪ್ರತಿಯೊಬ್ಬ ಸಾದು ಲಿಂಗಾಯತನೂ ಹಂಬಲಿಸುತ್ತಾನೆ. ರಾಜ್ಯದ ವಿವಿಧ ಭಾಗಗಳಲ್ಲಿ ಸಿರಿಗೆರೆ ಮಠವು ಆಯೋಜಿಸುವ ಈ ಹುಣ್ಣಿಮೆಗೆ ಲಕ್ಷಾಂತರ ಸಂಖ್ಯೆಯಲ್ಲಿ ಸಾದು ಲಿಂಗಾಯತ ಸಮುದಾಯ ನೆರೆಯುವುದು ಇದರ ಜನಪ್ರಿಯತೆಯನ್ನೂ, ಲಿಂಗಾಯತರ ಸಮುದಾಯಕ್ಕೆ ಈ ಆಚರಣೆಯ ಮೇಲಿರುವ ಭಕ್ತಿಯನ್ನೂ ತೋರಿಸುತ್ತದೆ. ಈ ಆಚರಣೆಯ ಮೂಲಕವೇ ಸಿರಿಗೆರೆ ಮಠವು ಬಸವಣ್ಣನ ಆದರ್ಶಗಳನ್ನು, ಜಾತ್ಯತೀತ ಮೌಲ್ಯಗಳನ್ನು ಜನರ ಹೃದಯಾಳದಲ್ಲಿ ಬಿತ್ತುವುದಕ್ಕೆ ಬಳಸಿಕೊಳ್ಳುತ್ತಾ ಬಂದಿದೆ. ಆದರೆ, ಈ ವರ್ಷದ ಆರಂಭದಲ್ಲಿ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳ ಸಾರಥ್ಯದಲ್ಲಿ ಬಾಳೆಹೊನ್ನೂರಿನಲ್ಲಿ ನಡೆದ ತರಳಬಾಳು ಹುಣ್ಣಿಮೆಲ್ಲಿ ಸಿರಿಗೆರೆ ಮಠದ ಜಾತ್ಯತೀತ ಸಂಪ್ರದಾಯವನ್ನೇ ಗಾಳಿಗೆ ತೂರಿಬಿಟ್ಟಿತು; ಹಿಂದೂತ್ವದ ವಿಷವನ್ನು ಕಾರುತ್ತಾ ಸಮಾಜಿಕ ಸಂಕ್ಷೋಭೆಯ ಬೀಜ ಬಿತ್ತುತ್ತಿರುವ ಆರೆಸ್ಸೆಸ್, ಭಜರಂಗದಳ, ಬಿಜೆಪಿಯಂಥ ಸಮಾಜಘಾತುಕ ಶಕ್ತಿಗಳೊಂದಿಗೆ ಜಾತ್ಯತೀತ ಮಠವೊಂದು ಕೈಜೋಡಿಸಿದ ಇತಿಹಾಸ ಆವತ್ತು ಸೃಷ್ಟಿಯಾಯಿತು.



ಸಿರಿಗೆರೆಯ ಶಿವಮೂರ್ತಿ ಸ್ವಾಮೀಜಿ

ಸಿರಿಗೆರೆ ಸಂಸ್ಥಾನದ ಪರಂಪರೆಯನ್ನೇ ಗಾಳಿಗೆ ತೂರಿದ ಶಿವಮೂರ್ತಿ ಸ್ವಾಮಿಗಳು ಬಾಬ್ರಿ ಮಸೀದಿಯನ್ನು ಕೆಡಹುವ ಮೂಲಕ ಇಡೀ ದೇಶದಲ್ಲಿ ಕೋಮುದಳ್ಳುರಿಯನ್ನು ಹಚ್ಚಿ ಚಳಿ ಕಾಯಿಸಿಕೊಂಡ ನಂಬರ್ ಒನ್ ಭಯೋತ್ಪಾದಕ ಎಲ್.ಕೆ. ಅಡ್ವಾಣಿಯನ್ನು ಅಧಿಕೃತವಾಗಿ ಈ ತರಳಬಾಳು ಹುಣ್ಣಿಮೆಗೆ ಆಹ್ವಾನಿಸಿದ್ದರು. ಅಡ್ವಾಣಿಯಂತೆಯೇ ಕರ್ನಾಟಕ ರಾಜ್ಯದಲ್ಲಿ ಹಿಂದೂತ್ವದ ವಿಷವನ್ನು ಬಿತ್ತುತ್ತಿರುವ ಅನಂತಕುಮಾರ್ ಎಂಬ ಮಿನಿ ಭಯೋತ್ಪಾದಕ ಕೂಡ ಈ ತರಳಬಾಳು ಹುಣ್ಣಿಮೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ. ಹೀಗೆ, ಬಸವಣ್ಣನ ಹೆಸರಿನಲ್ಲಿಯೇ, ತರಳಬಾಳು ಹುಣ್ಣಿಮೆಯಲ್ಲಿಯೇ ಶಿವಮೂರ್ತಿ ಶ್ರೀಗಳು ಬಸವಣ್ಣನ ಜಾತ್ಯತೀತ ಮೌಲ್ಯಗಳನ್ನು, ವೈದಿಕ ವಿರೋಧಿ ಆದರ್ಶಗಳನ್ನು ಸಮಾಧಿ ಮಾಡಿಬಿಟ್ಟರು.

ದಾವಣಗೆರೆಯ ಸಂಸದ ಸಿದ್ದೇಶ್ ಸಿರಿಗೆರೆ ಮಠದ ಪ್ರಮುಖ ದಾನಿಗಳಲ್ಲಿ ಒಬ್ಬ. ಸಂಸದನಾಗಿದ್ದುಕೊಂಡು ದೇಶವನ್ನು, ತನ್ನ ಕ್ಷೇತ್ರವನ್ನು ಕೊಳ್ಳೆ ಹೊಡೆದು ಅಪಾರ ಸಂಪತ್ತನ್ನು ಕೂಡಿ ಹಾಕಿಕೊಂಡಿರುವ ಈತ ತನ್ನ ಲೂಟಿಯ ಒಂದಷ್ಟು ಭಾಗವನ್ನು ಸಿರಿಗೆರೆ ಮಠಕ್ಕೆ ದಾನವಾಗಿ ಕೊಡುತ್ತಾನೆ. ಶಿವಮೂರ್ತಿ ಸ್ವಾಮಿಗಳಿಗೆ ಸ್ವಾಭಿಮಾನವಿದ್ದಿದ್ದರೆ "ಮಠದ ಹಿಂದೆ ಲಕ್ಷಾಂತರ ಸಾದು ಲಿಂಗಾಯತ ಸಮೂಹವಿದೆ. ನಿನ್ನ ಭ್ರಷ್ಟಾಚಾರದ ಹಣ ನಮ್ಮ ಮಠಕ್ಕೆ ಬೇಕಿಲ್ಲ" ಎಂದು ಸಾರಾಸಗಟಾಗಿ ತಿರಸ್ಕರಿಸಬಹುದಿತ್ತು, ಆದರೆ, ಅವರು ಹಾಗೆ ಮಾಡಲಿಲ್ಲ. ಈತ ಭ್ರಷ್ಟಾಚಾರಿ ಎಂಬುದಕ್ಕಿಂತಲೂ ಆತ ಬಿಜೆಪಿ ಮತ್ತು ಆರೆಸ್ಸೆಸ್‌ನ ಹಿಂದೂತ್ವವಾದಿ ನಂಜನ್ನು ಚೆನ್ನಾಗಿ ಕಾರುತ್ತಾನೆ ಎಂಬ ಕಾರಣಕ್ಕೋ ಏನೋ ಆತನ ಎಲ್ಲಾ 'ದಾನ' ಮಠ ಸ್ವೀಕರಿಸುತ್ತಿದೆ. ಮಾತ್ರವಲ್ಲ, ಆತನನ್ನು ಗೆಲ್ಲಿಸುವಂತೆ ಸಾದು ಲಿಂಗಾಯತ ಸಮುದಾಯದ ಮೇಲೆ ತನ್ನ ಪ್ರಭಾವ ಬೀರುತ್ತದೆ. ಆ ಮೂಲಕ ಆತ ಮುತ್ತಾತನ ನಂಜುಕಾರಕ ಹಿಂದೂತ್ವ ಸಿದ್ಧಾಂತ ಸಮಾಜದಲ್ಲಿ ಹರಡುತ್ತಿರುವ ಪಾಪದಲ್ಲಿ ತಾನೂ ಪಾಲುದಾರನಾಗುತ್ತಿದೆ.

ಈ ಹಿಂದೆ ಕೋ-ಬಿಜೆಪಿ ಸಮ್ಮಿಶ್ರ ಸರ್ಕಾರದ ಸಮಯದಲ್ಲಿ ಜೆಡಿಎಸ್ ಯಡಿಯೂರಪ್ಪಗೆ ಮುಖ್ಯಮಂತ್ರಿ ಗಾದಿ ಬಿಟ್ಟುಕೊಡದಿದ್ದಾಗ 'ಜೆಡಿಎಸ್‌ನವರು ವಚನಭ್ರಷ್ಟರು' ಎಂದೆಲ್ಲಾ ಬಿಜೆಪಿಗರು ದೊಡ್ಡ ಮಟ್ಟದಲ್ಲಿ ಸಿಂಪಥಿ ಅಲೆಯನ್ನು ಸೃಷ್ಟಿಸಿದ್ದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ, ಬಹಳಷ್ಟು ಜನಕ್ಕೆ ಗೊತ್ತಿರದ ವಿಚಾರವೇನೆಂದರೆ, ಸಿರಿಗೆರೆ ಸಂಸ್ಥಾನವು 'ಒಬ್ಬ ಲಿಂಗಾಯತ ಮುಖ್ಯಮಂತ್ರಿಯಾಗುವುದನ್ನು ತಡೆದು ಇಡೀ ಲಿಂಗಾಯತ ಸಮುದಾಯಕ್ಕೆ ಅನ್ಯಾಯ ಮಾಡಲಾಗಿದೆ. ಹಾಗಾಗಿ, ಬರುವ ಚುನಾವಣೆಯಲ್ಲಿ ಲಿಂಗಾಯತರು ಬಿಜೆಪಿಗೆ ಓಟು ಹಾಕಬೇಕು' ಎಂದು ಅಘೋಷಿತ ಫರ್ಮಾನು ಹೊರಡಿಸಿ ವಿಶೇಷ ಅಭಿಯಾನ ಮಾಡಿದ್ದು, ಇಡೀ ಸಾದು ಲಿಂಗಾಯತ ಸಮುದಾಯವೇ ಸ್ವಾಮಿಯ ಮಾತಿಗೆ ಓಗೊಟ್ಟು ಬಿಜೆಪಿಗೇ ಓಟು ಹಾಕಿ ಯಡ್ಡಿಯನ್ನು ಮುಖ್ಯಮಂತ್ರಿ ಗಾದಿಯಲ್ಲಿ ಕೂರಿಸಿತು. ಹೀಗೆ ಮುಂಬರುವ ದಿನಗಳಲ್ಲಿ ಬಿಜೆಪಿ ಮತ್ತು ಸಂಘಪರಿವಾರ ರಾಜ್ಯದಲ್ಲಿ ಚೆಲ್ಲುವ ಒಂದೊಂದು ಹನಿ ರಕ್ತದಲ್ಲೂ, ಅವರು ಉರುಳಿಸುವ ಒಂದೊಂದು ಹೆಣದಲ್ಲೂ ಶಿವಮೂರ್ತಿ ಸ್ವಾಮಿಗಳೂ ಪಾಲುದಾರರಾದಂತಾಗುತ್ತದೆ.

ಮೊನ್ನೆ ನಡೆದ ಇನ್ನೊಂದು ಘಟನೆಯನ್ನೇ ನೋಡಿ. ಸಿರಿಗೆರೆ ಮಠದ ಈ ಹಿಂದಿನ ಸ್ವಾಮೀಜಿಯಾಗಿದ್ದ ಶಿವಕುಮಾರ ಸ್ವಾಮಿಗಳ ಪುಣ್ಯತಿಥಿ ಸಂದರ್ಭದಲ್ಲಿ ಒಂದು ಸಭೆ ಏರ್ಪಾಟಾಗಿತ್ತು, ಆ ಹೊತ್ತು ವೇದಿಕೆಯಲ್ಲಿ ಶಿವಮೂರ್ತಿ ಸ್ವಾಮಿಗಳೊಂದಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಹೊನ್ನಾಳಿ ಶಾಸಕ 'ನರ್ಸ್' ರೇಣುಕಾಚಾರಿ ಎಂಬ ಅಪ್ಪಟ ಲಂಪಟನೂ ಇದ್ದ. ಯಡಿಯೂರಪ್ಪನ ವಿರುದ್ಧ ಶಾಸಕ ರೇಣುಕಾಚಾರ್ಯ ಮಸಲತ್ತು ನಡೆಸುತ್ತಿರುವುದನ್ನು ಮೊದಲೇ ಗಮನಿಸಿದ್ದ ಶಿವಮೂರ್ತಿ ಸ್ವಾಮಿಗಳು ಬಹಿರಂಗ ಸಭೆಯಲ್ಲಿಯೇ ಯಡಿಯೂರಪ್ಪನವರ ಪರವಹಿಸಿ ರೇಣುಕಾಚಾರ್ಯನ ಮೇಲೆ ವಾಗ್ದಾಳಿ ನಡೆಸಿಬಿಟ್ಟರು. ಅವರ ಆ ಹೊತ್ತಿನ ಮಾತುಗಳನ್ನು ಕೇಳಿದರೆ ರೇಣುಕಾಚಾರ್ಯನ ಮಸಲತ್ತಿನಿಂದ ಯಡಿಯೂರಪ್ಪನಿಗಿಂತ ಸ್ವಾಮಿಗಳಿಗೇ ಹೆಚ್ಚು ತೊಂದರೆಯಾಯಿತೇನೋ ಎಂಬ ಅನುಮಾನ ಹುಟ್ಟದಿರದು.

ನಿಮಗೆ ನೆನಪಿರಲಿ, ಇದೇ ರೇಣುಕಾಚಾರ್ಯ ನರ್ಸ್ ಜಯಲಕ್ಷ್ಮಿಯ ಸೆರಗಿನ ಹಿಂದೆ ಓಡಾಡಿ ಕೊನೆಗೆ ಅವಳಿಗೆ ಕೈಕೊಟ್ಟು ರಾದ್ಧಾಂತ ಮಾಡಿಕೊಂಡಾಗ ಇಡೀ ರಾಜ್ಯವೇ ಅವನ ಮುಖಕ್ಕೆ ಛೀ... ಥೂ.... ಎಂದು ಕ್ಯಾಕರಿಸಿ ಉಗಿದಿತ್ತು, ಆ ಹೊತ್ತು ಇದೇ ಶಿವಮೂರ್ತಿ ಸ್ವಾಮಿಗಳು ಅವನ ವಿರುದ್ಧ ಒಂದು ಮಾತನ್ನೂ ಆಡಿರಲಿಲ್ಲ, ಅದೊಂದು ದೊಡ್ಡ ವಿಷಯವಾಗಿ ಅವರಿಗೆ ಕಾಣಲಿಲ್ಲ. ಈಹೊತ್ತು ಅದೇ ರೇಣುಕಾಚಾರ್ಯ ಯಡಿಯೂರಪ್ಪನ ವಿರುದ್ಧ ಮಸಲತ್ತು ಮಾಡುತ್ತಿರುವುದು ಅವರಿಗೆ ದೊಡ್ಡ ವಿಷಯವಾಗಿ ಕಾಣುತ್ತಿದೆ.

ಇನ್ನೊಂದು ವಿಷಯ ನಿಮಗೆ ಗೊತ್ತಿರಲಿ. ನರ್ಸ್ ರೇಣುಕಾಚಾರ್ಯನ ಕಚ್ಚೆ ಕಾಮಾಯಣಗಳು, ರಾಸಲೀಲಾ ಪುರಾಣಗಳು ಹೊನ್ನಾಳಿಯಲ್ಲೆ ಅವನಿಗೆ ಎಷ್ಟೊಂದು ಕುಖ್ಯಾತಿಯನ್ನು ತಂದುಕೊಟ್ಟಿದ್ದವೆಂದರೆ ಕಳೆದ ಚುನಾವಣೆಯಲ್ಲಿ ಠೇವಣಿಯೂ ಸಿಗದಂತೆ ಸೋಲನ್ನನುಭವಿಸುವವನಿದ್ದ. ಆದರೆ, ಆತ ಲಿಂಗಾಯತ ಅನ್ನೊ ಒಂದೇ ಕಾರಣಕ್ಕೆ ಇದೇ ಶಿವಮೂರ್ತಿ ಸ್ವಾಮಿಗಳು ಈ ಕಚ್ಚೆ ಹರುಕನ ಬೆಂಬಲಕ್ಕೆ ನಿಂತರು. ಸ್ವಾಮಿಗಳ ಮುಖ ನೋಡಿಕೊಂಡು ಲಿಂಗಾಯತರು ನರ್ಸ್ ರೇಣುಕನನ್ನು ಮತ್ತೆ ಗೆಲ್ಲಿಸಿ ವಿಧಾನಸೌಧಕ್ಕೆ ಕಳುಹಿಸಿದರು.

ನಿಮಗೆ ಆಶ್ಚರ್ಯವಾಗಬಹುದು. ಈ ಹೊತ್ತು ಸಾದು ಲಿಂಗಾಯತ ಸಮುದಾಯ ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶದಲ್ಲಿ ಆರೆಸ್ಸೆಸ್‌ನ ಕಾರ್ಯಕರ್ತರು ನಾಮಮಾತ್ರವಾಗಿ ಬಂದು ತಮ್ಮ ಸಿದ್ಧಾಂತವನ್ನು ಪ್ರಚಾರ ಮಾಡಿ ಹೋಗುತ್ತಾರೆ. ಉಳಿದಂತೆ ಆ ಸಿದ್ಧಾಂತವನ್ನು ಸದೃಢೀಕರಿಸಿ ಅತ್ಯುತ್ತಮ ಹಿಂದೂತ್ವದ ಕೇಡರ್‌ಗಳನ್ನು ಬೆಳೆಸುವ ಕೆಲಸವನ್ನು ಸಿರಿಗೆರೆ ಮಠವೇ ಮಾಡುತ್ತದೆ ಎಂಬುದು ಅತಿಶಯೋಕ್ತಿಯೇನಲ್ಲ.

ಸಂಸ್ಕೃತದಲ್ಲಿ ವಿಶೇಷ ಪಾಂಡಿತ್ಯ ಹೊಂದಿರುವ ಶಿವಮೂರ್ತಿ ಸ್ವಾಮಿಗಳು ಸಂಸ್ಕೃತವನ್ನು ಒಂದು ಭಾಷೆಯನ್ನಾಗಿ ಮಾತ್ರ ಕಲಿತಿಲ್ಲ, ಸಂಸ್ಕೃತದ ಜೊತೆಗೆ ಅದರೊಳಗಿರುವ ಬ್ರಾಹ್ಮಣಶಾಹಿ-ವೈದಿಕಶಾಹಿ ಮೌಲ್ಯಗಳೂ ಅವರ ತಲೆಯೊಳಗೆ ಆಳವಾಗಿ ಇಳಿದುಬಿಟ್ಟವೆ. ಹೀಗಾಗಿಯೇ ಈ ಹೊತ್ತು ಇಡೀ ಸಾದು ಲಿಂಗಾಯತ ಸಮುದಾಯವನ್ನು ಬ್ರಾಹ್ಮಣಶಾಹಿ-ವೈದಿಕಶಾಹಿಗಳ ಪಾದಾರವಿಂದಗಳಿಗೆ ಅರ್ಪಿಸಿಬಿಟ್ಟಿದ್ದಾರೆ.

ಸಿರಿಗೆರೆ ಸಂಸ್ಥಾನದ ಶಾಖಾ ಮಠವಾಗಿರುವ ಸಾಣೆಹಳ್ಳಿಯ ಮಠದ ಮಠಾಧೀಶರಾದ ಪಂಡಿತಾರಾಧ್ಯ ಸ್ವಾಮಿಗಳು ಶಿವಮೂರ್ತಿ ಸ್ವಾಮಿಗಳಂತಲ್ಲ, ಬಸವಣ್ಣನ ತತ್ವಗಳಲ್ಲಿ ಇಂದಿಗೂ ನಂಬಿಕೆಯುಳಿಸಿಕೊಂಡು ಆಚರಿಸುತ್ತಿರುವ ಆದರ್ಶವಂತರು. ಮಲೆಬೆನ್ನೂರಿಗೆ ಮುತಾಲಿಕ್ ಎಂಬ ಕೊಳ್ಳಿದೆವ್ವ ಬೆಂಕಿಯಿಟ್ಟಾಗ ಅವನ ವಿರುದ್ಧ ನೇರವಾಗಿ ಕಿಡಿಕಾರಿ ಕೋಮುಸಾಮರಸ್ಯ ಕಾಪಾಡುವುದಕ್ಕೆ ಪ್ರಯತ್ನಿಸಿದ್ದರು.

ಸಮಾಜದಲ್ಲಿ ಕೋಮುಸಾಮರಸ್ಯ ಕಾಪಾಡುವುದಕ್ಕಾಗಿ, ಪ್ರಗತಿಪರ ಮೌಲ್ಯಗಳನ್ನು ಬಿತ್ತುವುದಕ್ಕಾಗಿ ದಿವಂಗತ ಸಿ.ಜಿ.ಕೃಷ್ಣಮೂರ್ತಿಯಂಥ ರಂಗಕರ್ಮಿಗಳ ಜೊತೆ ಸೇರಿಕೊಂಡು ಸಾಣೆಹಳ್ಳಿಯಲ್ಲಿ ರಂಗಹಬ್ಬವನ್ನೇ ಆಚರಿಸುತ್ತಿದ್ದರು. ಬಸವಣ್ಣನ ಮೌಲ್ಯಗಳನ್ನು, ಕೋಮುಸಾಮರಸ್ಯವನ್ನು, ಜಾತ್ಯತೀತ ಮೌಲ್ಯಗಳನ್ನು ಕಾಪಾಡುವುದಕ್ಕಾಗಿ ಕೋಮುವಾದಿಗಳನ್ನು, ಸರ್ಕಾರಗಳನ್ನು ಎದುರುಹಾಕಿಕೊಳ್ಳಲೂ ಅವರು ಹಿಂಜರಿಯುತ್ತಿರಲಿಲ್ಲ.

ಶಿವಮೂರ್ತಿ ಶರಣರ ನೇತೃತ್ವದಲ್ಲಿರುವ ಸಿರಿಗೆರೆಯ ಪ್ರಧಾನ ಮಠವೇ ಬ್ರಾಹ್ಮಣ್ಯದ ಗರ್ಭಗುಡಿಯಾಗಿ ಹೋಗಿರುವಾಗ ಇನ್ನು ಅದರ ಶಾಖಾ ಮಠವಾಗಿರುವ ಸಾಣೆಹಳ್ಳಿ ಮಠದಲ್ಲಿ ಸ್ವಾಮಿಯಾಗಿರುವ ಪಂಡಿತಾರಾಧ್ಯರಾದರೂ ಏನು ಮಾಡಲು ಸಾಧ್ಯ? ಹೀಗಾಗಿ, ಅವರೂ ಇತ್ತೀಚೆಗೆ ಒಂದಿಷ್ಟು ಮೌನಿಯಾಗಿಬಿಟ್ಟಿದ್ದಾರೆ.


ಓ ಬಸವಣ್ಣನೇ.... ಶಿವಮೂರ್ತಿ ಸ್ವಾಮಿಗಳನ್ನು ಬ್ರಾಹ್ಮಣ್ಯದಿಂದ ಮುಕ್ತಗೊಳಿಸುವುದಕ್ಕೆ, ಪಂಡಿತಾರಾಧ್ಯ ಸ್ವಾಮಿಗಳಿಗೆ ಮತ್ತಷ್ಟು ಕಸುವು ಕೊಡುವುದಕ್ಕೆ ಮತ್ತೆ ಹುಟ್ಟಿ ಬಾ!

ಸಿದ್ದಲಿಂಗ ಕೊಳ್ಳಿದೆವ್ವ ಏಕಾದ?

ಈ ಸ್ವಾಮಿಯ ಬಗ್ಗೆ ಬರೆಯದಿದ್ದರೇನೇ ಚೆನ್ನಾಗಿರುತ್ತಿತ್ತೇನೋ? ಆದರೂ ಸಮಾಜಕ್ಕೆ ಇವನೆಂಥಾ ಅಪಾಯಕಾರಿಯಾಗಿ ಹೊರಹೊಮ್ಮಬಲ್ಲ ಎಂಬ ಆತಂಕದಿಂದ ಬರೆಯಲೇಬೇಕಾಗಿದೆ. ಹಿಂದೂತ್ವ ಭಯೋತ್ಪಾದಕತೆಯ ವಿಷವನ್ನು ಮೈತುಂಬಾ ತುಂಬಿಕೊಂಡಿರುವ ಈತನ ಬಗ್ಗೆ ವಿವರವಾಗಿಯೇ ಬರೆಯುವುದೇ ಸೂಕ್ತವಾಗಿದೆ.

▶▶

ಶೂದ್ರ ಮಠಗಳೇಕೆ ಮೌನ?



ಇದು ಇನ್ನೊಂದು ದುರಂತ. ಶಾಂತಿ-ಸಹಬಾಳ್ವೆಗಳ ತವರಾಗಿದ್ದ ಕನ್ನಡ ನಾಡು ಸಂಘಪರಿವಾರದ ಕೊಳ್ಳಿದೆವ್ವಗಳ ಕೈಯಲ್ಲಿ ಸಿಕ್ಕು ರಣರಂಗವಾಗುತ್ತಿರುವ ಈ ಹೊತ್ತಿನಲ್ಲಿ ಬಸವಾದಿ ಪರಂಪರೆಯ ಮಠಗಳ ಮೇಲೆ ಎಷ್ಟು ಜವಾಬ್ದಾರಿಯಿದೆಯೋ ಅಷ್ಟೇ ಜವಾಬ್ದಾರಿ ಇನ್ನಿತರ ಶೂದ್ರ ಪರಂಪರೆಯ ಮಠಗಳ ಮೇಲೂ ಇದೆ. ಆದರೆ, ದುರದೃಷ್ಟವಶಾತ್ ಈ ಎಲ್ಲಾ ಮಠಗಳೂ ಈ ಹೊತ್ತು ಮೌನವಾಗಿ ಬಿಟ್ಟವೆ.

ಕುರುಬ ಸಮಾಜದ ಕನಕಪೀಠವಾಗಲೀ, ಉಪ್ಪಾರ ಸಮುದಾಯದ ಭಗೀರಥ ಪೀಠವಾಗಲೀ, ವಾಲ್ಮೀಕಿ ಸಮಾಜದ ಸ್ವಾಮಿಗಳಾಗಲೀ, ಲಂಬಾಣಿ ಮಠವಾಗಲೀ-ಯಾರೂ ಬಾಯಿಬಿಡುತ್ತಿಲ್ಲ, ಈ ಎಲ್ಲಾ ಮಠಗಳೂ ವಾಸ್ತವದಲ್ಲಿ ತಮ್ಮ ಶೂದ್ರತ್ವವನ್ನು ಗಟ್ಟಿಯಾಗಿ ಎದೆತಟ್ಟಿಕೊಂಡು ಸಮರ್ಥಿಸಿಕೊಳ್ಳಬೇಕಿತ್ತು. ಆದರೆ ಬ್ರಾಹ್ಮಣ-ವೈದಿಕಶಾಹಿಗಳ ಈ ಅಬ್ಬರದಲ್ಲಿ ಅದನ್ನು ಮಾಡುವುದಕ್ಕೆ ವಿಫಲವಾಗುತ್ತಿವೆ. ಬದಲಿಗೆ, ತಾವು ಶೂದ್ರರು ಎಂದು ಹೇಳಿಕೊಳ್ಳುವುದಕ್ಕೆ ಎಲ್ಲೋ ಒಂದು ಕಡೆ ಹಿಂದೇಟು ಹಾಕುತ್ತಿವೆ.

ತಮ್ಮ ತಮ್ಮ ಶೂದ್ರ ಸಮುದಾಯಗಳ ಶ್ರೇಯೋಭಿವೃದ್ಧಿಯ ಹೊಣೆಗಾರಿಕೆಯನ್ನು ಹೊತ್ತುಕೊಂಡು ಈ ಮಠಗಳಲ್ಲಿ ಸ್ವಾಮಿಗಳಾಗಿರುವವರೆಲ್ಲರೂ ಹೆಚ್ಚೂಕಡಿಮೆ ಸಂಸ್ಕೃತ ಓದಿಕೊಂಡಿದ್ದಾರೆ. ಬ್ರಾಹ್ಮಣ ಸ್ವಾಮಿಗಳಿಗಿಂತ ತಾವೇನು ಕಡಿಮೆಯಲ್ಲ ಎಂದು ತೋರಿಸಿಕೊಳ್ಳುವುದಕ್ಕೋ ಏನೋ ಆಗಾಗ ಸಂಸ್ಕೃತ ಶ್ಲೋಕಗಳನ್ನೋ, ಉಪನಿಷತ್ತಿನ ಭಾಗಗಳನ್ನೋ ಉದ್ಧರಿಸಿ ಚಪ್ಪಾಳೆ ತಟ್ಟಿಸಿಕೊಳ್ಳುತ್ತಾರೆ. ಇವರೂ ಕೂಡ ಸಂಸ್ಕೃತವನ್ನು ಒಂದು ಭಾಷೆಯಾಗಿ ಮಾತ್ರ ಕಲಿಯದೇ ಅದರೊಳಗಿರುವ ಬ್ರಾಹ್ಮಣ್ಯವನ್ನೂ ತಲೆಗಿಳಿಸಿಕೊಂಡಿದ್ದಾರೆ. ಆ ಮೂಲಕ ಅಂತಿಮವಾಗಿ ಸಂಘಪರಿವಾರದ ಹಿಂದೂತ್ವ ಸಿದ್ಧಾಂತದ ಪಲ್ಲಕ್ಕಿಗೆ ಭೋವಿಗಳಾಗಿ ವರ್ತಿಸುತ್ತಿದ್ದಾರೆ.

ಈ ಹೊತ್ತು ಬಿಜೆಪಿ ಅಧಿಕಾರದಲ್ಲಿದೆ. ತೋರಿಕೆಗೆ ಒಬ್ಬ ಲಿಂಗಾಯತನಾದರೂ ಅಂತರ್ಯದಲ್ಲಿ ಬ್ರಾಹ್ಮಣ್ಯವನ್ನು ತುಂಬಿಕೊಂಡಿರುವ ಯಡ್ಡಿ ರಾಮಚಂದ್ರಾಪುರ ಮಠದಂತಹ ಅಪ್ಪಟ ಬ್ರಾಹ್ಮಣಶಾಹಿ ಮಠಗಳಿಗೆ ಸಾರ್ವಜನಿಕ ಸಂಪತ್ತನ್ನು ಧಾರೆಯೆರೆಯುತ್ತಿದ್ದಾನೆ. ಉಳಿದ ಶೂದ್ರ ಮಠಾಧೀಶರೂ ಕೋಪಗೊಳ್ಳಬಾರದೆಂದು ಬ್ರಾಹ್ಮಣರು ತಿಂದಮೇಲೆ ಅಳಿದುಳಿದ ಚೂರುಗಳನ್ನು ಈ ಶೂದ್ರ ಮಠಗಳಿಗೆ ಅರ್ಪಿಸುತ್ತಿದ್ದಾನೆ. ಈ ಶೂದ್ರಮಠಗಳು. 'ಸಿಕ್ಕಷ್ಟು ಸಿಗಲಿ, ವಿರೋಧಿಸಿದರೆ ಅದೂ ಸಿಗುವುದಿಲ್ಲ' ಎಂದು ಸಂತೃಪ್ತ ಭಾವದಿಂದ ಯಡ್ಡಿಯ ಮತ್ತು ಸಂಘಪರಿವಾರದ ಭಯೋತ್ಪಾದಕರ ಬೆಂಬಲಕ್ಕೆ ನಿಂತಂತಿವೆ. ಕನಕದಾಸರ ಜನ್ಮದಿನಾಚರಣೆಯ ದಿನವನ್ನು ಸರ್ಕಾರಿ ರಜಾದಿನವನ್ನಾಗಿ ಘೋಷಿಸಿದ್ದನ್ನೇ ದೊಡ್ಡ ಸಾಧನೆಯೆಂಬಂತೆ ಬಿಂಬಿಸಿ ಇಡೀ ಕುರುಬ ಸಮಾಜವನ್ನು ಬಿಜೆಪಿಯ ಪಾದಾರವಿಂದಗಳಿಗೆ ಅರ್ಪಿಸಲು ಕುರುಬ ನಾಯಕರು, ಕುರುಬ ಸ್ವಾಮಿಗಳು ಪ್ರಯತ್ನಿಸುತ್ತಾರೆಂದರೆ ಏನೆನ್ನಬೇಕು?

ಇದೇ ಪುರೋಹಿತಶಾಹಿಗಳು ಉಡುಪಿಯಲ್ಲಿ ಕನಕಗೋಪುರ ಕೆಡವಿದನ್ನು ಇವರು ಮರೆತರೇಕೆ? ಹಿಂದೂಗಳೆಲ್ಲಾ ಒಂದು ಎನ್ನುವ ಪೇಜಾವರ ಸ್ವಾಮಿ ಉಡುಪಿಯ ಕೃಷ್ಣ ದೇವಾಲಯ ಮಾತ್ರ ನನ್ನದು ಎಂದು ಸ್ವಾರ್ಥ ಸಾಧಿಸುವುದನ್ನು ಮರೆತರೇಕೆ?

ಇದೇ ಶೂದ್ರ ಸಮುದಾಯಗಳನ್ನು ಬಸವಣ್ಣ ಸಂಘಟಿಸಿ ವೈದಿಕ-ಬ್ರಾಹ್ಮಣಶಾಹಿಯ ವಿರುದ್ಧ ಕ್ರಾಂತಿಯನ್ನು ನಡೆಸಿದ್ದರು. ಜಡ್ಡುಗಟ್ಟಿರುವ ಶೂದ್ರ ಸಮುದಾಯಕ್ಕೆ, ಬ್ರಾಹ್ಮಣರು ಬಿಸಾಡಿದ ಚೂರುಗಳಿಗೇ ಸಂತೃಪ್ತಿ ಪಟ್ಟುಕೊಳ್ಳುತ್ತಿರುವ ಶೂದ್ರ ಮಠಗಳಿಗೆ ಮನಶ್ಚೇತನ ನೀಡಲು ಆ ಬಸವಣ್ಣನೇ ಮತ್ತೆ ಹುಟ್ಟಿ ಬರಬೇಕು.

ಕೆಲವು ವರ್ಷಗಳ ಹಿಂದೆ ಬ್ರಾಹ್ಮಣ್ಯವನ್ನು ಖಂಡತುಂಡವಾಗಿ ಖಂಡಿಸುತ್ತಾ ಪ್ರಗತಿಪರ ಮತ್ತು ಜಾತ್ಯತೀತ ಮೌಲ್ಯಗಳನ್ನು ಸಾರುತ್ತಾ ಕೋಮುಸಾಮರಸ್ಯಕ್ಕಾಗಿ ನಡೆಯುವ ಎಲ್ಲಾ ಹೋರಾಟಗಳಲ್ಲೂ, ಆಂದೋಲನಗಳಲ್ಲೂ ಸಕ್ರಿಯವಾಗಿ ಭಾಗವಹಿಸುತ್ತಾ ತಮ್ಮ ಮಠಕ್ಕೆ ದಲಿತನೊಬ್ಬನನ್ನು ಉತ್ತರಾಧಿಕಾರಿಯಾಗಿ ನೇಮಿಸುವ ಮೂಲಕ ಇಡೀ ನಾಡಿನಲ್ಲೇ ಸಂಚಲನ ಸೃಷ್ಟಿಸಿದ ನಿಡುಮಾಮಿಡಿ ಸಂಸ್ಥಾನದ ವೀರಭದ್ರ ಚನ್ನಮಲ್ಲಿಕಾರ್ಜುನ ಸ್ವಾಮಿಗಳೂ ಈ ಹೊತ್ತು ಮೌನಿಯಾಗಿದ್ದಾರೆ. ಅವರ ಮೌನವನ್ನು ನಾವು 'ಕೋಮುವಾದಿಗಳಿಗೆ ಬೆಂಬಲ' ಎಂದು ತಪ್ಪಾಗಿ ಅರ್ಥೈಸಕೂಡದು. ಚಿತ್ರದುರ್ಗದ ಮುರುಘಾ ಶರಣರಂತೆ ಅವರಿಗೂ ಕೂಡ ಹಲವಾರು ಜವಾಬ್ದಾರಿಗಳು, ಸಮಸ್ಯೆಗಳು ಇರಬಹುದು. ಒಲೆ ಹೊತ್ತಿ ಉರಿದರೆ ನಿಲಬಹುದಲ್ಲದೇ ಧರೆ ಹೊತ್ತಿ ಉರಿದೊಡೆ ನಿಲಬಹುದೇ ಎಂಬ ಮಾತನ್ನು ಅವರೂ ಅರ್ಥ ಮಾಡಿಕೊಳ್ಳಬೇಕು. ಕೋಮುವಾದದ ವಿಷಜ್ವಾಲೆಗಳು ಇಡೀ ಧರೆಯನ್ನು ಸುಡುವ ಮೊದಲು ಅದನ್ನು ಆರಿಸಬೇಕಾದ ಹೊಣೆಗಾರಿಕೆ ಅವರ ಮೇಲೂ ಇದೆ. ■

ಬಸವಾದಿ ಶರಣ ಪರಂಪರೆಯ ಮಠಗಳು ಬಸವಣ್ಣನ ಹೆಸರು ಹೇಳುತ್ತಲೇ ಬಸವಣ್ಣನ ತತ್ವಾದರ್ಶಗಳಿಗೆ ತಿಲಾಂಜಲಿ ಇಡುತ್ತಾ ವೈದಿಕ-ಬ್ರಾಹ್ಮಣಶಾಹಿಗಳ ಮಡಿಲಿಗೆ ಜಾರುತ್ತಿದ್ದರೂ ಪರವಾಗಿಲ್ಲ, ಶರಣರು ತಮ್ಮ ತಮ್ಮ ಮಠಮಾನ್ಯಗಳ ದೈನಂದಿನ ಚಟುವಟಿಕೆಗಳಲ್ಲಿ ಕುತ್ತಿಗೆಯ ತನಕ ಮುಳುಗಿ ಸಾಮಾಜಿಕ ಸಂಕ್ಷೋಭೆಯ ಬಗ್ಗೆ ಮಾತನಾಡುವುದಕ್ಕೆ ಪುರುಸೊತ್ತು ಮಾಡಿಕೊಳ್ಳದಿದ್ದರೂ ಪರವಾಗಿಲ್ಲ, ತಾನು ಮಾತ್ರ ಏಕಾಂಗಿಯಾದರೂ ಸರಿ ಕೊನೆಯುಸಿರಿರುವ ತನಕ ಬಸವಾದಿ ಶರಣರ ತತ್ವಗಳಿಗಾಗಿ ಹೋರಾಡುವೆ ಎಂದು ತೋಂಟದ ಮಹಾಸ್ವಾಮಿಗಳು ಪಣತೊಟ್ಟಿದ್ದಾರೆ.

ಈತ ಜೇವರ್ಗಿಯಿಂದ 15 ಕಿ.ಮೀ. ದೂರದಲ್ಲಿರುವ ಆಂದೋಲ ಮಠದ ಸ್ವಾಮಿ. ಈ ಆಂದೋಲ ಮಠವೂ ಕೂಡ ಶರಣ ಸಂಪ್ರದಾಯದಿಂದ ಬಂದ ಮಠವೇ ಆಗಿದೆ. ಶರಣ ಸಂಪ್ರದಾಯ ಎಂದರೆ ಬಸವಣ್ಣನ ಜಾತ್ಯತೀತ, ಧರ್ಮನಿರಪೇಕ್ಷ, ವೈದಿಕ-ಬ್ರಾಹ್ಮಣ್ಯ ವಿರೋಧಿ, ಮಾನವ ಪ್ರೇಮಿ ಮುಂತಾದ ತತ್ವಾದರ್ಶಗಳನ್ನು ಬರೀ ಮಾತಿನಲ್ಲಲ್ಲದೇ ಕೃತಿಯಲ್ಲೂ ತೋರಿಸಿಕೊಟ್ಟಿರುವ ಸಂಪ್ರದಾಯ. ಕಲಬುರ್ಗಿಯ ಶರಣಬಸವೇಶ್ವರರಂತಹ ಬಸವಾದಿ ಶರಣರಿಂದ ಗಾಢವಾಗಿ ಪ್ರಭಾವಕ್ಕೊಳಗಾಗಿರುವ ಕರುಣೇಶ್ವರರು ಈ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಬಸವಣ್ಣನ, ಬಸವಾದಿ ಶರಣರ ಉದಾತ್ತ ಧ್ಯೇಯಗಳಿಂದಲೇ ಈ ಮಠ ಮೈದಳೆಯುವಂತೆ ಮಾಡುವಲ್ಲಿ ಕರುಣೇಶ್ವರರ ಪಾತ್ರ ಅಮೋಘವಾದದ್ದು.

ಆದರೆ, ಇಂಥ ಮಹಾನ್ ಶರಣರ ಮಠಕ್ಕೆ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿಯಂತಹ ಭಯೋತ್ಪಾದಕ ಸ್ವಾಮಿ ವಕ್ಕರಿಸಿಕೊಂಡಿದ್ದಾನೆ ನೋಡಿ. ಕೇವಲ ಇಪ್ಪತ್ತೆರಡು ವರ್ಷ ವಯಸ್ಸಿನ ಈತನಿಗೆ ಬಸವಣ್ಣನ ತತ್ವಾದರ್ಶಗಳ ಬಗ್ಗೆಯಾಗಲಿ, ಬಸವಾದಿ ಶರಣರ ಜಾತ್ಯತೀತ ಪರಂಪರೆಯ ಬಗ್ಗೆಯಾಗಲಿ ಒಂದಿಷ್ಟೂ ಗೊತ್ತಿಲ್ಲ. ಗೊತ್ತಿರುವುದೆಲ್ಲಾ ಸಂಘಪರಿವಾರದ ಹಿಂದೂತ್ವ ಎಂಬ ನಂಜುಕಾರರ ಸಿದ್ಧಾಂತ ಮಾತ್ರ.

ಮೊನ್ನೆ ಈತ ಗೋಕರ್ಣದಲ್ಲಿ ಮಾಡಿದ ಭಾಷಣವನ್ನೇ ನೋಡಿ. "ಇದು ಹಿಂದೂಗಳ ದೇಶ, ಇಲ್ಲಿ ಹಿಂದೂಗಳು ಮಾತ್ರವೇ ಬದುಕಬೇಕು. ಮುಸ್ಲಿಮರನ್ನು, ಕ್ರಿಶ್ಚಿಯನ್ನರನ್ನು ಬಡಿದು ಸಾಯಿಸಿ. ಅವರನ್ನು ಸಾಯಿಸುವುದಕ್ಕೆ ಏನೆಲ್ಲಾ ಬೇಕೋ ಅದನ್ನೆಲ್ಲಾ ಮಾಡಿ" - ಹೀಗೆ ಸಾಗುತ್ತದೆ ಇವನ ಬಹಿರಂಗ ಭಾಷಣ. ಬಸವಣ್ಣ ಇದನ್ನು ಪ್ರತಿಪಾದಿಸಿದ್ದರೆ? ಈತ ಬಸವಣ್ಣನ ಧ್ಯೇಯಾದರ್ಶಗಳನ್ನು ಎಷ್ಟರಮಟ್ಟಿಗೆ ಸಮಾಧಿ ಮಾಡಿದ್ದಾನೆ ಎಂಬುದಕ್ಕೆ, ಹಿಂದೂತ್ವದ ವಿಷವನ್ನು ಎಷ್ಟರಮಟ್ಟಿಗೆ ಕುಡಿದಿದ್ದಾನೆ ಎಂಬುದಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ?

ಈ ಆಂದೋಲ ಮಠ ಶರಣ ಸಂಪ್ರದಾಯದ ತಾಣವಾಗಿದ್ದಾಗ ಅದರ ಹಿಂದೆ ಅಪಾರ ಭಕ್ತ ಸಮೂಹವಿತ್ತು. ಈ ಹೊತ್ತು ಸಿದ್ದಲಿಂಗ ಸ್ವಾಮಿಯ ಭಯೋತ್ಪಾದನೆಯ ದೆಸೆಯಿಂದ ಮಠದ ಭಕ್ತ ಸಮೂಹವೂ ಕರಗಿಹೋಗಿದೆ. ಇದ್ದಬದ್ದ ಒಂದಿಷ್ಟು ಭಕ್ತರೂ ಕೂಡ ಇವನನ್ನು ಮನೆ ಹತ್ತಿರ ಬಿಟ್ಟುಕೊಳ್ಳಲು ಹಿಂಜರಿಯುತ್ತಾರೆ. ಮತ್ತೆ ಕೆಲವರಂತೂ ಉಗಿದು ಓಡಿಸುತ್ತಾರೆ.

ನೆನಪಿರಲಿ, ಈತ ಕರ್ನಾಟಕದ ಕೊಳ್ಳಿ ದೆವ್ವ ಪ್ರಮೋದ್ ಮುತಾಲಿಕನ ಸ್ನೇಹಿತ. ಪ್ರಮೋದ್ ಮುತಾಲಿಕ್ ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಇಷ್ಟೊಂದು ಮಿಂಚುತ್ತಾನೆ ಎಂದರೆ ತಾನೇನು ಕಡಿಮೆಯೇ? ಎಂದು ಅವನೊಂದಿಗೆ ರೇಸಿಗಿಳಿದಿರುವ ಪ್ರಚಾರಪ್ರಿಯ. ಈ ರೀತಿ ಹಿಂದೂತ್ವದ ಏಜೆಂಟನಂತೆ ಬಾಯಿಬಡಿದುಕೊಂಡರೆ ಪತ್ರಿಕೆಗಳಲ್ಲಿ ತಾನು ಸುದ್ದಿಯಲ್ಲಿರಬಹುದೆಂದು ಅಂದಾಜಿಸಿ ವಿಷಕಕ್ಕುತ್ತಿರುವ ವಿಷಕಾರಿ.


ಅದಕ್ಕಾಗಿಯೇ, ಆಂದೋಲ ಮಠದಲ್ಲಿ ಮುತಾಲಿಕನ ತ್ರಿಶೂಲ ದೀಕ್ಷೆಯ ಕಾರ್ಯಕ್ರಮವನ್ನು ಇವನೇ ಸಂಘಟಿಸುತ್ತಾನೆ; ಹಿಂದೂತ್ವದ ಬಗ್ಗೆ ಆರೆಸ್ಸೆಸ್‌ಗಿಂತಲೂ ಚೆನ್ನಾಗಿ ಮಾತನಾಡುತ್ತಾನೆ; ಹಿಂದೂತ್ವ ಭಯೋತ್ಪಾದನೆಯಲ್ಲಿ ಭಜರಂಗಿಗಳಿಗಿಂತ ತಾನೇನು ಕಡಿಮೆಯಿಲ್ಲ ಎಂದು ತೋರಿಸುತ್ತಾನೆ. ಅಂತೂ ಶರಣ ಸಂಪ್ರದಾಯದ ಶಾಂತಿಧಾಮವಾಗಿದ್ದ ಆಂದೋಲ ಮಠದಲ್ಲಿ ಬಸವಣ್ಣನ ತತ್ವಾದರ್ಶಗಳು ಸಮಾಧಿಯಾಗಿ ಭಯೋತ್ಪಾದಕ ತ್ರಿಶೂಲಗಳು ಝಳಪಿಸುತ್ತಿರುವುದು ಎಂಥ ದೌರ್ಭಾಗ್ಯ?

ಓ ಬಸವಣ್ಣಾ... ತ್ರಿಶೂಲಗಳ ಭಯೋತ್ಪಾದನೆಯಿಂದ ಆಂದೋಲ ಮಠವನ್ನು ಮುಕ್ತಗೊಳಿಸಲು ಮತ್ತೆ ಹುಟ್ಟಿ ಬಾ!

ಮುರುಘಾ ಶರಣರೇಕೆ ಮೌನಿಯಾದರು?

ಇದುವರೆಗೆ ಹೇಳಿದ್ದು ವಿಷಪೂರಿತ ಹಿಂದೂತ್ವದ ಮಡಿಲಿಗೆ ಬಿದ್ದ, ಬೀಳುತ್ತಿರುವ ಬಸವ ಪರಂಪರೆಯ ಮಠಗಳ ಕಥೆ. ಈಗ ಹೇಳಬೇಕಿರುವುದು ಅಪರಾಧವೇ ಅಧಿಕಾರವಾಗಿ, ಜನರನ್ನು ಅಪರಾಧಿಗಳನ್ನಾಗಿಸಿ ಬೇಟೆಯಾಡುತ್ತಿರುವಾಗ ಬಾಯಿದ್ದೂ ಸುಮ್ಮನೇ ಕುಳಿತ ಅಪರಾಧಿ ಶರಣರ ಕತೆ. ಈ ಸಾಲಿನಲ್ಲಿ ನಿಲ್ಲುವವರು ಚಿತ್ರದುರ್ಗದ ಶರಣ ಪರಂಪರೆಯ ಬೃಹನ್ಮಠದ ಸ್ವಾಮಿ ಶ್ರೀ ಮುರುಘಾರಾಜೇಂದ್ರ ಶರಣರು.

ಚಿತ್ರದುರ್ಗದ ಶರಣರು ಬಸವಣ್ಣನ ತತ್ವಾದರ್ಶಗಳನ್ನು ಕೇವಲ ಬಾಯ್ಮಾತಿನಲ್ಲಿ ಮಾತ್ರವಲ್ಲ ಅವುಗಳನ್ನು ಕೃತಿಯಲ್ಲೂ ತೋರಿಸುತ್ತಾ ಬಂದವರು. ಈ ಹೊತ್ತು ಬಸವಣ್ಣನ ಜಾತ್ಯತೀತ ತತ್ವಗಳನ್ನು, ಸ್ವಾಭಿಮಾನಿ ಆಂದೋಲನದ ಮೌಲ್ಯಗಳನ್ನು, ಶೋಷಕ ವೈದಿಕ-ಬ್ರಾಹ್ಮಣಶಾಹಿ ವಿರೋಧಿ ಸಿದ್ಧಾಂತಗಳನ್ನು ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಮಾನವಪ್ರೀತಿಯನ್ನು ಜನರ ಹೃದಯದೊಳಗೆ ಬಿತ್ತುತ್ತಿರುವ ಕೆಲವೇ ಶರಣ ಪರಂಪರೆಯ ಮಠಗಳಲ್ಲಿ ಚಿತ್ರದುರ್ಗದ ಮಠವೂ ಒಂದು. ಈ ಆದರ್ಶಗಳಿಂದಲೇ ಮಠ ಮೈದಳೆಯುವಂತೆ ಮಾಡುವಲ್ಲಿ ಮುರುಘಾ ಶರಣರ ಪಾತ್ರ ಅಮೋಘವಾಗಿದೆ.



ಚಿತ್ರದುರ್ಗದ ಮುರುಘಾಶರಣರು

ನಿಮಗೆ ಗೊತ್ತಿರಬಹುದು, ಕಳೆದ ಹೆಚ್ಚೂಕಡಿಮೆ ಒಂದು ದಶಕದ ಅವಧಿಯಲ್ಲಿ ಕರ್ನಾಟಕದಲ್ಲಿ ನಡೆದ ಜನಪರ ಚಳವಳಿಗಳಲ್ಲಿ ಮುರುಘಾ ಶರಣರು ಭಾಗವಹಿಸದ ಚಳವಳಿಯಿಲ್ಲ ಎನ್ನುವಷ್ಟರ ಮಟ್ಟಿಗೆ ಅವರ ಭಾಗವಹಿಸುವಿಕೆ ಇತ್ತು. ಅದರಲ್ಲೂ ನಾಡಿನಲ್ಲಿ ಕೋಮುದಳ್ಳುರಿಯನ್ನು ಹಚ್ಚಿ ಅದರಲ್ಲಿ ತಮ್ಮ ಚಳಿ ಕಾಯಿಸಿಕೊಳ್ಳುತ್ತಿದ್ದ ಹಿಂದೂತ್ವದ ಭಯೋತ್ಪಾದಕ ಶಕ್ತಿಗಳ ವಿರುದ್ಧ ನಡೆದ ಚಳವಳಿಗಳಲ್ಲಿ ಅವರು ಭಾಗವಹಿಸಿ ಇತರ ಶರಣ ಸಂಪ್ರದಾಯದ ಮಠಗಳಿಗೆ, ಸ್ವಾಮಿಗಳಿಗೆ ಆದರ್ಶವಾಗಿದ್ದರು.

ಆದರೆ....

ಅಂತಹ ಮುರುಘಾ ಶರಣರೂ ಈ ಹೊತ್ತು ಮೌನವ್ರತ ಆರಂಭಿಸಿದ್ದಾರೆ. ಚರ್ಚುಗಳ ಮೇಲಿನ ದಾಳಿಯನ್ನು ಖಂಡಿಸಿ ಅವರ ಚಿತ್ರದುರ್ಗ ಮಠದ ಪಕ್ಕದ ದಾವಣಗೆರೆಯಲ್ಲಿ ಇತ್ತೀಚೆಗೆ ಬೃಹತ್ ಸಮಾವೇಶ ನಡೆದರೂ ಮುರುಘಾ ಶರಣರು ಅಲ್ಲಿಗೆ ಬರಲಿಲ್ಲ. ಸಂಘಪರಿವಾರದ ಹಿಂದೂತ್ವದ ಭಯೋತ್ಪಾದಕ ಶಕ್ತಿಗಳು ನಾಡಿನ ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ಆಲ್‌ಔಟ್ ಯುದ್ಧ ಪ್ರಾರಂಭಿಸಿ ಆ ಸಮುದಾಯಗಳು ಆತಂಕದಲ್ಲಿ ಬದುಕುವ ಅನಿವಾರ್ಯತೆಯನ್ನು ಸೃಷ್ಟಿಸುತ್ತಿರುವ ಈ ಸಂದರ್ಭದಲ್ಲಿ ಮುರುಘ ರಾಜೇಂದ್ರರಂಥ ಆದರ್ಶವಾದಿ ಶರಣರ ಪಾತ್ರ ಇನ್ನೂ ದೊಡ್ಡದಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಮುರುಘಾ ಶರಣರು ಮೌನಿಯಾಗಿರುವುದಕ್ಕೆ ಕಾರಣವಾದರೂ ಏನು?

ಮುರುಘಾ ಶರಣರ ಮೌನವನ್ನು "ಮೌನಂ ಸಮ್ಮತಿ ಲಕ್ಷಣಂ" ಎಂದು ಅರ್ಥೈಸಲಾಗದು. ಏಕೆಂದರೆ, ಚಿತ್ರದು[...] ಮಠದ ಆಡಳಿತಾಧಿಕಾರಿಯಾಗಿದ್ದ ಬಸವರಾಜನ್ ಅವ[...] ಮಠದಿಂದ ಹೊರ ಹಾಕಿದ ಮೇಲೆ ಇಡೀ ಬೃಹನ್[...] ಆಡಳಿತದ ಜವಾಬ್ದಾರಿ ಮುರುಘಾ ಶರಣರ ಹ[...] ಮೇಲೆ ಬಂದು ಕುಳಿತಿದೆ. ಬಸವರಾಜನ್ ಹೊರಿ[...] ಕೋಟ್ಯಂತರ ರೂಪಾಯಿ ಸಾಲದ ಭಾರ ಕೂಡ ಶರ[...] ತಲೆ ಮೇಲೆ ಕುಳಿತಿದೆ.

ಅದೂಅಲ್ಲದೇ, ಬಸವಣ್ಣನ ಜಾತ್ಯತೀತ ಮೌಲ್ಯಗ[...] ಜನಮನದಲ್ಲಿ ಬಿತ್ತಿ ಬೆಳೆಸುವ ತಮ್ಮ ಕಾರ್ಯ[...] ಅವರು ತಮ್ಮ ಸೀಮಿತ ಚೌಕಟ್ಟಿನೊಳಗೇ ಮುಂದುವ[...] ದ್ದಾರೆ. ಅಂತರ್ಜಾತಿ ವಿವಾಹ ಎಂಬುದು ಒಂ[...] ಅನುಕರಣೀಯ ಮೌಲ್ಯ ಎಂಬುದನ್ನು ಪ್ರತಿಪಾದಿಸ[...] ದಕ್ಕಾಗಿಯೇ ಅಂತರ್ಜಾತಿ ವಿವಾಹವಾದವರನ್ನು [...] ದೊಡ್ಡ ಮಟ್ಟದಲ್ಲಿ ಸಮಾವೇಶ ಮಾಡುತ್ತಿದ್ದಾರೆ. [...] ಮತಗಳನ್ನು ತೊರೆದು ಮಾನವ ಪ್ರೇಮದ ಅಡಿಪಾಯ[...] ಮೇಲೆ ಬಸವ ಧರ್ಮವನ್ನು ಕಟ್ಟುವ ಕೆಲಸವನ್ನು ಅವ[...] ಮಾಡುತ್ತಲೇ ಇದ್ದಾರೆ.


ಆದರೂ....

ಹಿಂದೂತ್ವದ ಭಯೋತ್ಪಾದಕರು ನಾಡಿನಾದ್[...] ಕೋಮುಬೆಂಕಿ ಹಚ್ಚುತ್ತಿರುವ ಈ ಸನ್ನಿವೇಶದ[...] ಅಲ್ಪಸಂಖ್ಯಾತ ಸಮುದಾಯಗಳು ಆತಂಕದಲ್ಲಿ ಬದುಕುತ್ತಿ[...] ಈ ಸಂದರ್ಭದಲ್ಲಿ ಮುರುಘಾ ಶರಣರಂಥವರ ಮ[...] ಮತ್ತಷ್ಟು ಜವಾಬ್ದಾರಿಗಳಿವೆ. ಅವರು ಒಂದು ಮ[...] ಸೀಮಿತವಾಗದೇ ವಿಶಾಲ ಜನಸ್ತೋಮದ ನಡ[...] ಬಸವಣ್ಣನ ತತ್ವಾದರ್ಶಗಳನ್ನು ಹರಡಲು ಮುಂದಾಗಬೇ[...] ಅವರು ಮೌನವನ್ನು ಮುರಿಯಬೇಕಿದೆ.

ಓ ಬಸವಾ.... ಮುರುಘಾ ಶರಣರ ಮ[...] ಮುರಿಯಲು ಮತ್ತೆ ಹುಟ್ಟಿ ಬಾ!


ಮಾತೆ ಮಹಾದೇವಿ ಮತ್ತು ಸುತ್ತೂ[...] ಶ್ರೀ

ಇನ್ನು ಮಾತೆ ಮಹಾದೇವಿಯಂಥ ಸೋಕಾ[...] ಮಾತೆಯರಿಗೆ, ಸುತ್ತೂರಿನ ಶ್ರೀಗಳಿಗೆ ನಾಡಿನ ಸಂಕ್ಷೋ[...] ಭೆಯ ಬಗ್ಗೆ ತಲೆ ಕೆಡಿಸಿಕೊಳ್ಳುವಷ್ಟು ಪುರುಸೊತ್ತಾಗ[...] ವ್ಯವಧಾನವಾಗಲಿ ಇಲ್ಲವೇ ಇಲ್ಲ. ಮಾತೆ ಮಹಾದೇ[...] ಕಂಡಕಂಡವರ ಜಮೀನಿಗೆ ಬೇಲಿ ಹಾಕಿಕೊಳ್ಳುತ್ತಾ ಸಾಮ[...]




ಮಾತ ಮಹಾದೇವಿ

ಮತಾಂತರವಿರದಿದ್ದರೆ ಲಿಂಗಾಯತರೆಲ್ಲಿರುತ್ತಿದ್ದರು?




ಬ್ರಾಹ್ಮಣರ್ಯಾರೂ ಮತಾಂತರ ಹೊಂದದಿದ್ದರೂ ಪೇಜಾವರದ ವಿಶ್ವೇಶತೀರ್ಥರಂಥ ಬ್ರಾಹ್ಮಣ ಮಠಾಧೀಶರು ಮತಾಂತರದ ಬಗ್ಗೆ ಆತಂಕಕ್ಕೀಡಾಗಿದ್ದಾರೆ. ಇನ್ನೊಂದು ದುರದೃಷ್ಟಕರ ಬೆಳವಣಿಗೆ ಎಂದರೆ ಇದಕ್ಕೆ ಕೆಲವು ಲಿಂಗಾಯತ ಮಠಾಧೀಶರೂ ಕೈಜೋಡಿಸುತ್ತಿರುವುದು.

ಹನ್ನೆರಡನೇ ಶತಮಾನದಲ್ಲಿ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿಯಂತಹ ವಚನಕಾರರ ನೇತೃತ್ವದಲ್ಲಿ ದುಡಿಯುವ ಸಮುದಾಯಗಳು, ದಲಿತ ಸಮುದಾಯಗಳು, ಶೂದ್ರ ಸಮುದಾಯಗಳು ಸಂಘಟಿತಗೊಂಡು ವೈದಿಕ-ಬ್ರಾಹ್ಮಣಶಾಹಿಯ ವಿರುದ್ಧ ರಾಜಿರಹಿತ ಹೋರಾಟ ನಡೆಸಿದ್ದು ನಮಗೆಲ್ಲಾ ಗೊತ್ತೇ ಇದೆ. ದೈಹಿಕ ಶ್ರಮವನ್ನು ಮತ್ತು ದುಡಿಯುವ ಸಮುದಾಯಗಳನ್ನು ಕೀಳಾಗಿ ಕಾಣುತ್ತಿದ್ದ ಅಂದಿನ ವೈದಿಕಶಾಹಿಯ ವಿರುದ್ಧ ಬಸವಣ್ಣನವರು ದೈಹಿಕ ಶ್ರಮದ ಹಿರಿಮೆಯನ್ನು ಎತ್ತಿಹಿಡಿಯುವುದಕ್ಕಾಗಿ 'ಕಾಯಕವೇ ಕೈಲಾಸ' ಎಂಬ ತತ್ವವನ್ನು ಮುಖಾಮುಖಿಯಾಗಿಸಿದರು. ಕಾಯಕವೇ ಕೈಲಾಸ, ಅನ್ನದಾಸೋಹ, ಅಕ್ಷರ ದಾಸೋಹಗಳಂತಹ ಪರಿಕಲ್ಪನೆಗಳ ಆಧಾರದಲ್ಲಿಯೇ ವೀರಶೈವ ಧರ್ಮವನ್ನು ಸ್ಥಾಪಿಸಿದರು. ವೀರಶೈವ ಧರ್ಮ ಎಂಬುದು ಹಿಂದೂ ಧರ್ಮವಲ್ಲ, ಹಿಂದೂ ಧರ್ಮಕ್ಕೆ ವಿರುದ್ಧವಾಗಿ, ಅದರ ವಿರುದ್ಧದ ಪ್ರತಿಭಟನೆಯಾಗಿ ಹುಟ್ಟಿದ ಹೊಸ ಧರ್ಮ. ಅವತ್ತು ಶೂದ್ರರು, ದಲಿತರು, ಅಸ್ಪೃಶ್ಯರು, ಸಮಾಜದ ಕೆಳಸ್ತರದಲ್ಲಿ ಪ್ರಾಣಿಗಳಿಗಿಂತ ಕೀಳಾಗಿ ಜೀವಿಸುತ್ತಿದ್ದ ಸಮುದಾಯಗಳು ವೀರಶೈವ ಧರ್ಮವನ್ನು ಸಾಗರೋಪಾದಿಯಲ್ಲಿ ಸೇರಿದರು. ಅಂದರೆ, ಹಿಂದೂ ಧರ್ಮದಿಂದ ವೀರಶೈವ ಧರ್ಮಕ್ಕೆ ಮತಾಂತರಗೊಂಡರು. ಅವತ್ತು ಈ ಮತಾಂತರ ನಡೆಯದಿದ್ದರೆ ಈ ಹೊತ್ತು ವೀರಶೈವ ಧರ್ಮ ಎಂಬುದಾಗಲೀ, ಲಿಂಗಾಯತ ಸಮುದಾಯ ಎಂಬುದಾಗಲೀ ಇರುತ್ತಲೇ ಇರಲಿಲ್ಲ. ಅವರೆಲ್ಲಾ ಈ ಹೊತ್ತು ವೈದಿಕಶಾಹಿ-ಬ್ರಾಹ್ಮಣಶಾಹಿಗಳ ಕಾಲು ತೊಳೆಯುತ್ತಾ, ಅವರ ದೌರ್ಜನ್ಯ ಅನುಭವಿಸುತ್ತಾ ಪ್ರಾಣಿಗಳಂತೆ ಶೋಚನೀಯ ಜೀವನ



ನಡೆಸಬೇಕಾಗುತ್ತಿತ್ತು, ಅವತ್ತು ನಡೆದ ಮತಾಂತರ[...] ಅವರಿಗೆ ಈ ಹೊತ್ತು ಉನ್ನತ ಸಾಮಾ[...] ಸ್ಥಾನಮಾನವನ್ನು, ಆರ್ಥಿಕ ಸಬಲತೆಯನ್ನು ತಂ[...] ಕೊಟ್ಟಿದೆ.

ಹಾಗಿದ್ದ ಮೇಲೆ, ಈ ಹೊತ್ತೂ ಕ[...] ಪ್ರಾಣಿಗಳಂತೆ, ಅಸ್ಪೃಶ್ಯರಾಗಿ ಜೀವನ ಸಾಗಿಸುತ್ತಿರ[...] ಕೋಟ್ಯಾನುಕೋಟಿ ದಲಿತ ಸಮೂಹವಿದೆ. ಅವ[...] ಈ ಹಿಂದೂ ಧರ್ಮದಲ್ಲಿ ಆತ್ಮಗೌರವವಾಗ[...] ಘನತೆಯಾಗಲೀ, ಸಮಾನ ಸಾಮಾ[...] ಸ್ಥಾನಮಾನವಾಗಲೀ; ಆರ್ಥಿಕ ಸಬಲತೆಯಾಗ[...] ಯಾವುದೂ ಇಲ್ಲ. ಇದನ್ನು ಹಿಂದೂ ಧರ[...] ಒಳಗಿದ್ದುಕೊಂಡೇ ಸರಿಪಡಿಸಲು ಜೀವನವಿ[...] ಹೋರಾಡಿದ ಡಾ.ಬಿ.ಆರ್.ಅಂಬೇಡ್ಕರ್ ಕೊನೆಗ[...] ವಿಫಲರಾಗಿ ಬೌದ್ಧಧರ್ಮಕ್ಕೆ ಮತಾಂತರಗೊಂಡ[...] ಅಂತೆಯೇ ಅವರನ್ನನುಸರಿಸಿ ದಲಿತ ಸಮೂಹ[...] ಈ ಹೊತ್ತು ಮತಾಂತರದ ದಾರಿ ಹಿಡಿದಿದೆ. ಅದ[...] ವೀರಶೈವ ಮಠಾಧೀಶರು ಬೆಂಬಲಿಸಬೇಕಿತ್ತು, ಆದ[...] ದುರದೃಷ್ಟಕರ ಎಂದರೆ ಅದನ್ನವರು ವಿರೋಧಿಸುತ್ತಿದ[...] ತಾವು ಮಾತ್ರ ಹಿಂದೂ ಧರ್ಮದಿಂದ ವೀರಶೈ[...] ಧರ್ಮಕ್ಕೆ ಮತಾಂತರಗೊಂಡು ಉನ್ನತ ಸಾಮಾ[...] ಜಾರ್ಥಿಕ ಸ್ಥಾನಮಾನ ಪಡೆದರೆ ಸಾಕೆ? ಉಳಿದ ಶೂ[...] ಮತ್ತು ದಲಿತ ಸಮುದಾಯಗಳು ಬ್ರಾಹ್ಮಣ[...] ಸಂಕೋಲೆಯನ್ನು ಬಿಡಿಸಿಕೊಳ್ಳಲು ಬೇರೆ ಧರ್ಮಗ[...] ಮತಾಂತರಗೊಂಡರೆ ಅದರಿಂದ ಇವರಿಗೇನು ನ[...] ಇದಕ್ಕೆ ಲಿಂಗಾಯತ ಮಠಾಧೀಶರು ಉತ್ತರಿ[...] ತ್ತಾರೆಯೇ?



ಸುತ್ತೂರು ದೇಶೀಕೇಂದ್ರ ಶ್ರೀಗಳು


...ನೆ ಮಾಡುವುದರಲ್ಲೋ, ಹನ್ನೆರಡನೇ ಶತಮಾನದ ವಚನಕಾರರ ಅಂಕಿತಗಳನ್ನು ...ಲಿಸುತ್ತಾ ಒಂದಿಲ್ಲೊಂದು ಜಾತ್ರೆ ತೆಗೆದು ಪ್ರಚಾರ ಗಿಟ್ಟಿಸಿಕೊಳ್ಳುವುದರಲ್ಲೋ ...ಯಾಗಿಬಿಟ್ಟಿದ್ದಾರೆ. ಸುತ್ತೂರು ಶ್ರೀಗಳಂಥ ಕೆಲವು ಸ್ವಾಮಿಗಳು ಎಲ್ಲೆಲ್ಲಿ ...ಲಾ-ಕಾಲೇಜುಗಳನ್ನು ತೆರೆಯಬೇಕು, ಎಷ್ಟೆಷ್ಟು ಡೊನೇಶನ್ ಪೀಕಬೇಕು, ...ಗೆ ಮಠದ ಆಸ್ತಿಯನ್ನು ಬೆಳೆಸಬೇಕು ಎಂಬ ಲೆಕ್ಕಾಚಾರದಲ್ಲಿಯೇ ...ಳುಗಿಹೋಗಿರುವುದರಿಂದ ಅವರಿಗೆ ಈ ನಾಡಿನ ಅಲ್ಪಸಂಖ್ಯಾತ ...ಮುದಾಯದ ಸಂಕಷ್ಟಗಳಾಗಲೀ, ಹಿಂದೂ ಭಯೋತ್ಪಾದನೆಯಾಗಲೀ ಕಣ್ಣಿಗೆ ...ಸುವುದಿಲ್ಲ. ಅಥವ ಅದನ್ನು ನೋಡುವುದಕ್ಕೆ ಇಷ್ಟ ಪಡುವುದಿಲ್ಲ ಎಂದರೇನೇ ...ಯಾಗುತ್ತದೆಯೇನೋ?

ಓ ಬಸವಾ... ಮಾತೆ ಮಹಾದೇವಿಗೆ, ಸುತ್ತೂರು ಶ್ರೀಗಳಂಥವರಿಗೆ ...ಮಾಜದ ಸಂಕ್ಷೋಭೆ ತೋರಿಸಲು ಮತ್ತೆ ಹುಟ್ಟಿ ಬಾ!

ತೋಂಟದಾರ್ಯರೊಬ್ಬರೇ ಭರವಸೆಯ ಕಿರಣ!

ಬಸವಣ್ಣನ ತತ್ವಾದರ್ಶಗಳನ್ನು ಜನಮನದಲ್ಲಿ ಬಿತ್ತಿ ಕೋಮುವಾದಿಗಳ ...ಟ್ಟಹಾಸವನ್ನು ಮೆಟ್ಟಿ ನಿಲ್ಲಬೇಕಿದ್ದ ಬಸವಾದಿ ಶರಣ ಪರಂಪರೆಯ ಮಠಗಳು ...ಘಪರಿವಾರಿಗಳ ಹಿಂದೂತ್ವದ ವಿಷಪಾನ ಮಾಡುತ್ತಿರುವ ಈ ಸಂದರ್ಭದಲ್ಲಿ, ...ಲ್ಲವೇ ಅನ್ಯರ ಗೊಡವೆ ನಮಗೇಕೆ ಎಂದು ...ನಿಯಾಗುತ್ತಿರುವ ಈ ಹೊತ್ತಿನಲ್ಲಿ, ಅಥವಾ ತಮ್ಮ ...ಠಗಳ ದೈನಂದಿನ ಚಟುವಟಿಕೆಗಳಲ್ಲಿಯೇ ...ಳುಗಿಹೋಗಿರುವ ಈ ಸಮಯದಲ್ಲಿ ನಮ್ಮೆಲ್ಲರ ...ರು ಒಂದು ಭರವಸೆಯ ಕಿರಣವಾಗಿ ನಿಲ್ಲುವವರು ...ದುಗಿನ ತೋಂಟದಾರ್ಯ ಮಠದ ಸಿದ್ಧಲಿಂಗ ...ಹಾಸ್ವಾಮಿಗಳು ಮಾತ್ರ.

ಬಸವಾದಿ ಶರಣರ ಜಾತ್ಯತೀತ ತತ್ವಾದರ್ಶಗಳನ್ನು ...ವಲ ಬಾಯ್ಮಾತಿನಲ್ಲಿ ಮಾತ್ರವಲ್ಲ-ಆಚರಣೆಯಲ್ಲೂ ...ರುತ್ತಿರುವ ನಾಡಿನ ಕೆಲವೇ ಮಠಗಳಲ್ಲಿ ಗದುಗಿನ ...ಂಟದಾರ್ಯ ಮಠ ಕೂಡ ಒಂದು. ತೋಂಟ ...ರ್ಯ ಶ್ರೀಗಳ ನೇತೃತ್ವದಲ್ಲಿ ಇಡೀ ಮಠ ಆಧುನಿಕ ...ನುಭವ ಮಂಟಪವಾಗಿ ಹೊರಹೊಮ್ಮಿರುವುದು ...ಳ್ಳಲ್ಲ.



ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು

ತೋಂಟದಾರ್ಯ ಶ್ರೀಗಳು ಒಣಪಾಂಡಿತ್ಯ ...ದರ್ಶಿಸುವ ಜಾಯ ಮಾನದವರಲ್ಲ, ಹನ್ನೆರಡನೇ ಶತಮಾನದಲ್ಲಿ ವಚನಕಾರರ ...ತೃತ್ವದಲ್ಲಿ ನಡೆದ ದಮನಿತ ಜನಸಮುದಾಯಗಳ ಮಹಾನ್ ಕ್ರಾಂತಿಯ ...., ಅದರ ತತ್ವಾದರ್ಶಗಳ ಬಗ್ಗೆ, ಸಿದ್ಧಾಂತದ ಬಗ್ಗೆ ಅಪಾರವಾಗಿ ಓದಿ ...ದುಕೊಂಡಿರುವ ಒಬ್ಬ ನೈಜ ಪಂಡಿತರಿವರು. ಅಷ್ಟೇ ಏಕೆ, ಸೂಫಿ, ದತ್ತ ಪಂಥಗಳ ಪರಂಪರೆಯಿಂದ ಹಿಡಿದು ಹಿಂದೂ ಧಾರ್ಮಿಕ ಸಾಹಿತ್ಯದ ತನಕ ಎಲ್ಲಾ ರೀತಿಯ ಸಾಹಿತ್ಯವನ್ನು ಓದಿಕೊಂಡಿರುವ ವಿದ್ವಾಂಸರು. ಹಾಗಾಗಿಯೇ ಅವರು ನುಡಿದರೆ ಮುತ್ತಿನ ಹಾರದಂತಿರುತ್ತದೆ; ಅವರು ನುಡಿದರೆ ಲಿಂಗಮೆಚ್ಚಿ ಅಹುದಹುದೆನ್ನುತ್ತದೆ; ಹಸಿ ಗೋಡೆಗೆ ಹರಳು ಹೊಡೆದಂತಿರುತ್ತದೆ. ಅವರ ಮಾತುಗಳನ್ನು ಕೇಳಿಸಿಕೊಳ್ಳುವುದೇ ಸಂಭ್ರಮವೆನಿಸುತ್ತದೆ.

ಬಸವಾದಿ ಶರಣರ ತತ್ವಾದರ್ಶಗಳನ್ನು, ಮೌಲ್ಯಗಳನ್ನು ಜನಮನದಲ್ಲಿ ಬಿತ್ತುವುದಕ್ಕಾಗಿ ಅವರು ಪಡುತ್ತಿರುವ ಶ್ರಮ ನಿಜಕ್ಕೂ ಶ್ಲಾಘನೀಯ. ನೀರನ್ನೂ ಕೂಡ ನೀಡಲು ಹಿಂದುಮುಂದು ನೋಡುವ ಈ ಕ್ರೂರ ವ್ಯವಸ್ಥೆಯಲ್ಲಿ ತಮ್ಮ ಅಮೂಲ್ಯ ಪ್ರಾಣವನ್ನೆ ಸಮಾಜಕ್ಕಾಗಿ ಮುಡುಪಿಟ್ಟ ಅವರ ತ್ಯಾಗಶೀಲತೆ ನಿಜಕ್ಕೂ ಪ್ರಶಂಸಾರ್ಹ.

ಅವರ ಎಲ್ಲಾ ಮಾತುಗಳಿಗೂ, ಕೃತಿಗಳಿಗೂ ಬಸವಾದಿ ಶರಣರ ತತ್ವಾದರ್ಶಗಳೇ ಅಡಿಪಾಯ. ಅದರ ಆಧಾರದಲ್ಲಿಯೇ ಪ್ರತಿಯೊಂದೂ ಕ್ರಿಯೆಯನ್ನವರು ಮಾಡುತ್ತಾರೆ. ಅದಕ್ಕೆ ವ್ಯತಿರಿಕ್ತವಾಗಿ ಯಾರೇ ಮಾತನಾಡಿದರೂ ಅದನ್ನು ನೇರವಾಗಿಯೇ ಖಂಡಿಸುವ, ವಿರೋಧಿಸುವ ನಿಷ್ಠುರತೆಯನ್ನು ಈಹೊತ್ತಿಗೂ ಕಾಪಾಡಿಕೊಂಡು ಬಂದಿದ್ದಾರೆ.

ಬಸವಾದಿ ಶರಣ ಪರಂಪರೆಯ ಮಠಗಳು ಬಸವಣ್ಣನ ಹೆಸರು ಹೇಳುತ್ತಲೇ ಬಸವಣ್ಣನ ತತ್ವಾದರ್ಶಗಳಿಗೆ ತಿಲಾಂಜಲಿ ಇಡುತ್ತಾ ವೈದಿಕ-ಬ್ರಾಹ್ಮಣಶಾಹಿಗಳ ಮಡಿಲಿಗೆ ಜಾರುತ್ತಿದ್ದರೂ ಪರವಾಗಿಲ್ಲ, ಶರಣರು ತಮ್ಮ ತಮ್ಮ ಮಠಮಾನ್ಯಗಳ ದೈನಂದಿನ ಚಟುವಟಿಕೆಗಳಲ್ಲಿ ಕುತ್ತಿಗೆಯ ತನಕ ಮುಳುಗಿ ಸಾಮಾಜಿಕ ಸಂಕ್ಷೋಭೆಯ ಬಗ್ಗೆ ಮಾತನಾಡುವುದಕ್ಕೆ ಪುರುಸೊತ್ತು ಮಾಡಿಕೊಳ್ಳದಿದ್ದರೂ ಪರವಾಗಿಲ್ಲ, ತಾನು ಮಾತ್ರ ಏಕಾಂಗಿಯಾದರೂ ಸರಿ ಕೊನೆಯುಸಿರಿರುವ ತನಕ ಬಸವಾದಿ ಶರಣರ ತತ್ವಗಳಿಗಾಗಿ ಹೋರಾಡುವೆ ಎಂದು ಪಣತೊಟ್ಟಿದ್ದಾರೆ.

ಆದ್ದರಿಂದಲೇ ಸಂಘಪರಿವಾರದ ಕೋಮುದ್ವೇಷದಿಂದ ಅಲ್ಪಸಂಖ್ಯಾತ ಸಮುದಾಯಗಳು ಆತಂಕಕ್ಕೀಡಾಗಿರುವ ಈ ಹೊತ್ತಿನಲ್ಲಿ, ಕೋಮುದಳ್ಳುರಿ ನಾಡಿನ ಶಾಂತಿ-ನೆಮ್ಮದಿಯನ್ನು ಸುಟ್ಟು ಹಾಕುತ್ತಿರುವ ಈ ಸಂಕ್ಷೋಭೆಯ ದಿನಗಳಲ್ಲಿ ಎಲ್ಲರೂ ಮೌನವಾಗಿದ್ದರೂ ತೋಂಟದಾರ್ಯರು ಮಾತ್ರ ಮಾತನಾಡುತ್ತಿದ್ದಾರೆ.

ಯಡಿಯೂರು ಸಿದ್ದಲಿಂಗೇಶ್ವರ ಒಂದು ದೇವಸ್ಥಾನವಲ್ಲ, ಬದಲಿಗೆ ಒಂದು ಮಠ ಎಂದೂ, ಅದು ತೋಂಟದಾರ್ಯ ಪರಂಪರೆಯ ಮಠ ಎಂದೂ, ಅದನ್ನು ತೋಂಟದಾರ್ಯ ಮಠಕ್ಕೆ ಒಪ್ಪಿಸಬೇಕೆಂದೂ ಸರ್ಕಾರವನ್ನು ಅವರು ಒತ್ತಾಯಿಸುತ್ತಿದ್ದಾರೆ. ಅದಕ್ಕಾಗಿ ದಾಖಲೆಗಳನ್ನು ಅವರು ಸರ್ಕಾರಕ್ಕೆ ಒದಗಿಸುತ್ತಿದ್ದಾರೆ. ರಾಮಚಂದ್ರಾಪುರ ಮಠದ ರಾಘವೇಶ್ವರನಂತೆ ಯಡ್ಡಿಯ ಬೆಂಬಲಕ್ಕೆ ತೋಂಟದಾರ್ಯರೂ ನಿಂತಿದ್ದರೆ ಯಡಿಯೂರಿನ ಸಿದ್ದಲಿಂಗೇಶ್ವರ ಮಠ ತೋಂಟದಾರ್ಯ ಮಠಕ್ಕೆ ಯಾವತ್ತೋ ವರ್ಗಾವಣೆಯಾಗಿ ಹೋಗುತ್ತಿತ್ತು. ಆದರೆ, ಅಂಥ ಚೇಲಾಗಿರಿ ಮಾಡುವ ಜಾಯಮಾನ ಅವರದಲ್ಲ. ಅವರಿಗೆ ಯಡಿಯೂರು ಸಿದ್ದಲಿಂಗೇಶ್ವರ ಮಠ ಸಿಗುವುದು ಕಷ್ಟವಾದರೂ ಪರವಾಗಿಲ್ಲ, ತಮ್ಮ ಮೌಲ್ಯಗಳನ್ನು, ಆದರ್ಶಗಳನ್ನು ಬಿಟ್ಟುಕೊಡಲು ಅವರು ಸಿದ್ಧರಿಲ್ಲ. ಹಾಗಾಗಿಯೇ, ಯಡಿಯೂರಪ್ಪನ ಸಾರಥ್ಯದಲ್ಲಿ ನಡೆಯುತ್ತಿರುವ ಅಲ್ಪಸಂಖ್ಯಾತರ ಮೇಲಿನ ದಾಳಿಗಳನ್ನು ಅವರು ಖಂಡತುಂಡವಾಗಿ ಖಂಡಿಸಿದ್ದಾರೆ; ಕೋಮುವಾದಿಗಳ ಅಟ್ಟಹಾಸದ ವಿರುದ್ಧ ಮತ್ತು ಕೋಮುಸಾಮರಸ್ಯಕ್ಕಾಗಿ ನಡೆಯುತ್ತಿರುವ ಸಾಮಾಜಿಕ ಆಂದೋಲನಗಳಲ್ಲಿ ಒಬ್ಬ ಕ್ರಿಯಾಶೀಲ ಕಾರ್ಯಕರ್ತನಂತೆ ಭಾಗವಹಿಸುತ್ತಿದ್ದಾರೆ.

ಓ ಬಸವಾ... ಎಲ್ಲಾ ಮಠಗಳಲ್ಲೂ ತೋಂಟದಾರ್ಯ ಶ್ರೀಗಳಂಥ ಶರಣರನ್ನು ಪ್ರತಿಷ್ಠಾಪಿಸಲು ಮತ್ತೆ ಹುಟ್ಟಿ ಬಾ! ■

ಬಾಲಗಂಗಾಧರರು ಬ್ರಾಹ್ಮಣ್ಯದಿಂದ ಮುಕ್ತಿ ಹೊಂದುತ್ತಾರೆಯೇ?

[illegible] ಜನಸಮುದಾಯವಾದ ಒಕ್ಕಲಿಗರ ಪ್ರಮುಖ ಮಠ. ಜೀವನೋಪಾಯಕ್ಕಾಗಿ ವ್ಯವಸಾಯ ವೃತ್ತಿಯನ್ನೇ ಅವಲಂಬಿಸಿರುವ ಒಕ್ಕಲಿಗ [illegible] ಪರಂಪರೆಯನ್ನು, [illegible] ಹಿರಿಮೆಯನ್ನು ಎತ್ತಿಹಿಡಿಯುತ್ತದೆ. ಈ ಅರ್ಥದಲ್ಲಿ ವೇದ, ಉಪನಿಷತ್ತು, [illegible]



ಬಾಲಗಂಗಾಧರನಾಥ ಸ್ವಾಮಿಗಳು

ಒಕ್ಕಲಿಗ [illegible] 1992ರಲ್ಲಿ [illegible] ಬಾಲಗಂಗಾಧರನಾಥ ಸ್ವಾಮೀಜಿಯನ್ನು [illegible]



[illegible]

ಬಲವಂತದ ಮತಾಂತರವನ್ನು ಮೊದಲು ಪ್ರಾರಂಭಿಸಿದ್ದು ಯಾರು?



ವ್ಯಕ್ತಿಯೊಬ್ಬ ತನಗೆ ಇಷ್ಟ ಬಂದ ಧರ್ಮವನ್ನು ಪಾಲಿಸುವುದು, ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಮತಾಂತರಗೊಳ್ಳುವುದು ನಿನ್ನೆ ಮೊನ್ನೆಯಿಂದ ಪ್ರಾರಂಭವಾದ ವಿದ್ಯಮಾನವೇನಲ್ಲ. ಅಥವಾ ಭಾರತ ಸಂವಿಧಾನದಲ್ಲಿ ಪ್ರಜೆಗಳಿಗೆ ತಮಗಿಷ್ಟ ಬಂದ ಧರ್ಮವನ್ನು ಪಾಲಿಸುವ ಹಕ್ಕನ್ನು ಕೊಟ್ಟ ಮೇಲೆ ಹುಟ್ಟಿಕೊಂಡ ಬೆಳವಣಿಗೆಯೂ ಅಲ್ಲ, ಇದು ಅನಾದಿಕಾಲದಿಂದಲೂ ಬೆಳೆದುಕೊಂಡು ಬಂದಿರುವ ಪ್ರಕ್ರಿಯೆ.

ಈ ಹೊತ್ತು ಮತಾಂತರದ ಬಗ್ಗೆ ಇಷ್ಟೊಂದು ಗುಲ್ಲೆಬ್ಬಿಸುತ್ತಿದ್ದಾರಲ್ಲ, ಅವರಿಗೆ ಶಂಕರಾಚಾರ್ಯ ಮಾಡಿದ ಬಲವಂತದ, ದೌರ್ಜನ್ಯದ ಮತಾಂತರದ ಬಗ್ಗೆ ಗೊತ್ತಿದೆಯೆ?

ವೈದಿಕ-ಬ್ರಾಹ್ಮಣಶಾಹಿಗಳ ದಬ್ಬಾಳಿಕೆಯಿಂದ ಜರ್ಝರಿತವಾಗಿದ್ದ ತಳವರ್ಗದ ಜನಸಮುದಾಯಗಳು ಕ್ರಿ.ಪೂ. ಆರನೇ ಶತಮಾನದಲ್ಲಿ ಪರ್ಯಾಯವಾಗಿ ಹುಟ್ಟಿಕೊಂಡ ಜೈನ ಮತ್ತು ಬೌದ್ಧ ಧರ್ಮಗಳಿಗೆ ತಂಡೋಪತಂಡವಾಗಿ ಮತಾಂತರಗೊಂಡರು. ಹಿಂದೂ ವೈದಿಕ ಧರ್ಮದ ಉಸಿರುಕಟ್ಟಿಸುವ ವಾತಾವರಣದಲ್ಲಿ ಜೀವ ಕೈಯಲ್ಲಿ ಹಿಡಿದುಕೊಂಡು ಬದುಕಿದ್ದ ಈ ದಮನಿತ ಸಮುದಾಯಗಳಿಗೆ ಜೈನ ಮತ್ತು ಬೌದ್ಧ ಧರ್ಮಗಳು ನಿಜಕ್ಕೂ ಪ್ರಗತಿಪರ ಧರ್ಮಗಳಂತೆ ಕಂಡಿದ್ದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ಆದರೆ, ಇದು ಬಲವಂತದ ಮತಾಂತರವಾಗಿರಲಿಲ್ಲ, ಸ್ವಯಂಪ್ರೇರಿತ ಮತಾಂತರವಾಗಿತ್ತು. ಅಥವ ಬಲವಂತದ ಮತಾಂತರವೇ ಆಗಿತ್ತು ಎನ್ನುವುದಾದರೆ, ಹಿಂದೂ-ವೈದಿಕ ಧರ್ಮವೇ ಬಲವಂತವಾಗಿ ಅವರನ್ನು ಜೈನ-ಬೌದ್ಧ ಧರ್ಮಗಳೆಡೆ ಅಟ್ಟಿತು ಎಂದು ಅರ್ಥೈಸಬಹುದು.

ಆಮೇಲೆ, ಪ್ರಾರಂಭವಾಗಿದ್ದು ಶಂಕರಾಚಾರ್ಯನ ಬಲವಂತದ, ದೌರ್ಜನ್ಯದ ಮತಾಂತರ. ಅಕ್ಷರಶಃ ಪಾಳೆಗಾರನಂತೆ ದಂಡು ಕಟ್ಟಿಕೊಂಡು ಆತ ಜೈನ [illegible], ಬೌದ್ಧವಿಹಾರಗಳನ್ನು ಧ್ವಂಸಗೊಳಿಸುತ್ತಾ, ಜೈನ-ಬೌದ್ಧ ಧರ್ಮೀಯರನ್ನು ದೌರ್ಜನ್ಯದಿಂದ, ಬಲವಂತದಿಂದ ಶೋಷಕ ಹಿಂದೂ-ವೈದಿಕ ಧರ್ಮದ [illegible]. ಈ ಹೊತ್ತಿಗೂ ಶೃಂಗೇರಿ ಶಾರದಾಪೀಠದ ಎದುರು ಇರುವ ಸ್ತೂಪ ಜೈನ-ಬೌದ್ಧ ಧರ್ಮಗಳ ಮೇಲಿನ ಶಂಕರಾಚಾರ್ಯನ ದೌರ್ಜನ್ಯಕ್ಕೆ, [illegible] ಆಕ್ರಮಣಕ್ಕೆ ಸಾಕ್ಷಿಯಾಗಿ ನಿಂತಿದೆ. ಇದಕ್ಕೆ ಸಂಘಪರಿವಾರಿಗಳ ಬಳಿ [illegible]? ■

ಮತಾಂತರ ನಿಷೇಧ ಕಾಯ್ದೆ: ದಬ್ಬಾಳಿಕೆಗೆ ಕಾನೂನಿನ ಚೌಕಟ್ಟು

"ಇತ್ತೀಚೆಗೆ ಹಲವು ಊರುಗಳಲ್ಲಿ ಏಕಕಾಲಕ್ಕೆ ಕ್ರೈಸ್ತ ಪ್ರಾರ್ಥನಾಮಂದಿರಗಳ ಮೇಲೆ ಭಜರಂಗಿಗಳು ನಡೆಸಿದ ದಾಳಿ ನಾಡಿನ ಹಲವು ಸಜ್ಜನರನ್ನು ಕಂಗೆಡಿಸಿದೆ. "ಇದ್ದಕ್ಕಿದ್ದಂತೆ ಯಾಕೆ ಕ್ರೈಸ್ತರ ಮೇಲೆ ಈ ದಾಳಿ?" ಎಂದು ಅವರು ದಿಗ್ಭ್ರಮೆಗೊಳಗಾಗಿದ್ದಾರೆ. ಆದರೆ ಈ ಪ್ರತಿಕ್ರಿಯೆಯಲ್ಲಿ ಮುಗ್ಧತೆಯಿಂದ ಹೆಚ್ಚಾಗಿ ಕೆಟ್ಟದನ್ನು ನೋಡಲು ಕೇಳಲು ನಿರಾಕರಿಸುವ ನೈತಿಕ ಹೊಣೆಗೇಡಿತನವೇ ಇದೆ. ಯಾಕೆಂದರೆ ಕರ್ನಾಟಕದಲ್ಲಿ ಕ್ರೈಸ್ತ ಪ್ರಾರ್ಥನಾಮಂದಿರಗಳ ಮೇಲೆ ದಾಳಿ ನಡೆಯುತ್ತಿರುವುದು ಇದೇನೂ ಮೊದಲ ಬಾರಿ ಅಲ್ಲ.

ಬೆಂಗಳೂರು ಮೈಸೂರುಗಳಂತಹ ಶಹರುಗಳಲ್ಲೇ ಈ ಬಗೆಯ ದಾಳಿಗಳು ರಾಜಾರೋಷವಾಗಿ ನಡೆದಿವೆ. ಕ್ರೈಸ್ತರು ಗಣನೀಯ ಸಂಖ್ಯೆಯಲ್ಲಿರುವ ಕರಾವಳಿಯಲ್ಲೂ ಈ ಹಿಂದೆ ಮಂಗಳೂರು, ಸುರತ್ಕಲ್, ಮೂಡುಬಿದಿರೆ, ಕಾರ್ಕಳ, ಉಡುಪಿ, ಬ್ರಹ್ಮಾವರ, ಬೈಂದೂರು ಮುಂತಾದ ಹಲವೆಡೆ ಚರ್ಚು ಮತ್ತಿತರ ಪ್ರಾರ್ಥನಾ ಮಂದಿರಗಳ ಮೇಲೆ ದಾಳಿ ನಡೆದಿವೆ. ಕಾರ್ಕಳದಲ್ಲಿ ಎರಡು ವರ್ಷಗಳ ಕೆಳಗೆ ಏಸುವಿನ ಚಿತ್ರ ಹಾಕಿದ್ದಕ್ಕೆ ದಲಿತರ ಮನೆಗಳನ್ನು ನಾಶಪಡಿಸಲಾಗಿತ್ತು. ಕಳೆದ ವರ್ಷ ಕುಂದಾಪುರದಲ್ಲಿ ಭಜರಂಗಿಗಳು ಮತಾಂತರದ ಸುಳ್ಳು ಆರೋಪ ಹೊರಿಸಿ, ಸಿಲ್ವೆಸ್ಟರ್ ಪಿರೇರಾ ಎಂಬ ಪಾದ್ರಿಯ ಮೇಲೆ ಹಲ್ಲೆ ನಡೆಸಿದ್ದರು.

ಭಜರಂಗದಳದ ರಾಜ್ಯ ಸಂಚಾಲಕ (ಈಗ ಮಾಜಿ) ಮಹೇಂದ್ರ ಕುಮಾರ್, "ನಮ್ಮ ಸಂಘಟನೆ ಮತಾಂತರದಲ್ಲಿ ತೊಡಗಿರುವ ನ್ಯೂಲೈಫ್ ಸಂಸ್ಥೆಯನ್ನು ಮಾತ್ರ ವಿರೋಧಿಸುತ್ತಿದ್ದು ಮಂಗಳೂರಿನ ಕ್ಯಾಥೊಲಿಕ್ ಚರ್ಚುಗಳ ಮೇಲೆ ನಡೆದ ದಾಳಿ ಪ್ರಮಾದವಶಾತ್ ಆಗಿರುವಂತಹದ್ದು" ಎಂದು ಹೇಳಿದ್ದಾರೆ. ಆದರೆ ಕುಂದಾಪುರದಲ್ಲಿ ಭಜರಂಗಿಗಳಿಂದ ಹೊಡೆತ ತಿಂದ ಫಾದರ್ ಸಿಲ್ವೆಸ್ಟರ್ ಪಿರೇರಾ ನ್ಯೂಲೈಫ್ ಸೇರಿದವರಲ್ಲ. ಅವರು ಕ್ಯಾಥೊಲಿಕ್ ಧರ್ಮಗುರುಗಳು. ಕಳೆದ ಅನೇಕ ತಿಂಗಳುಗಳಿಂದ ಒರಿಸ್ಸಾದಲ್ಲಿ ಭಜರಂಗಿಗಳ ಅಮಾನುಷ ಹಿಂಸೆಗೆ ಗುರಿಯಾಗಿರುವವರಲ್ಲಿ ಕ್ಯಾಥೊಲಿಕ್ ಕ್ರೈಸ್ತರು ಮತ್ತು ಧರ್ಮಗುರುಗಳದ್ದೇ ದೊಡ್ಡ ಸಂಖ್ಯೆ.



ಭಜರಂಗದಳಕ್ಕೆ ತಾಯಿ ಬೇರಿನಂತಿರುವ ಆರ್‌ಎಸ್‌ಎಸ್‌ನ ಸಿದ್ಧಾಂತವನ್ನು ರೂಪಿಸಿದ ಎಂ.ಎಸ್. ಗೋಲ್ವಾಲ್ಕರ್, ಕಮ್ಯುನಿಸ್ಟರು ಮತ್ತು ಮುಸ್ಲಿಮರ ಜೊತೆ ಕ್ರೈಸ್ತರನ್ನು ರಾಷ್ಟ್ರದ ವೈರಿಗಳು ಎಂದು ಹೆಸರಿಸಿದ್ದರು. ಅವರು ಕ್ರೈಸ್ತರಲ್ಲಿ ಕ್ಯಾಥೊಲಿಕ್ ಪ್ರಾಟೆಸ್ಟಂಟ್, ಯೆಹೋವನ ಸಾಕ್ಷಿ ಇತ್ಯಾದಿ ಯಾವ ವ್ಯತ್ಯಾಸವನ್ನೂ ಮಾಡಲಿಲ್ಲ. "ಹಿಂದೂತ್ವ" ಎಂಬ ಶಬ್ದವನ್ನು ಹುಟ್ಟುಹಾಕಿದ ಸಾವರ್ಕರ್ ಕೂಡ ಕ್ರೈಸ್ತ ಸಮುದಾಯದ ಒಳಗೆ ಇರುವ ವಿಭಿನ್ನತೆಗಳನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಅವರ ಪ್ರಕಾರ ಮುಸ್ಲಿಮರ ಹಾಗೆ ಕ್ರೈಸ್ತರು ಕೂಡ ಪರಕೀಯರು ಹಾಗೂ ಅನ್ಯಮತೀಯರು, "ಯಾಕೆಂದರೆ ಅವರ ಪವಿತ್ರ ಗ್ರಂಥ ಭಾರತದ್ದಲ್ಲ; ಅವರ ಪವಿತ್ರ ಕ್ಷೇತ್ರ ಭಾರತದಿಂದ ಹೊರಗಿದೆ" ಮೊನ್ನೆ ನಡೆದ ದಾಳಿಗಳ ಕುರಿತು ಮಹೇಂದ್ರ ಕುಮಾರ್ ಅವರ ಸಮಜಾಯಿಷಿ ಒಂದು ನಾಚಿಗೆಗೆಟ್ಟ ಸುಳ್ಳಾಗಿದ್ದು ಅದು ಯಾರನ್ನೂ ವಂಚಿಸಲಾರದು. 'ಅನ್ಯಮತ' ಹಾಗೂ 'ಭಿನ್ನಮತ'ಗಳ ಕುರಿತು ದ್ವೇಷವೇ ಭಜರಂಗದಳದ ಮೂಲ ತತ್ವ. ಅದರಿಂದ ತಮಗೆ ವಿನಾಯಿತಿ ಇದೆ ಎಂದು ಭಾವಿಸುವವರು, ಉದಾ: ಉಡುಪಿ ಮತ್ತು ಮಂಗಳೂರಿನ ಕೆಲವು ಕ್ಯಾಥೊಲಿಕ್ ಕ್ರೈಸ್ತರು, ಮೂರ್ಖರ ಸ್ವರ್ಗದಲ್ಲಿ ವಿಹರಿಸುತ್ತಿದ್ದಾರೆ.

ಸಂಘ ಪರಿವಾರದ ಹೃದಯಹೀನ ಯಂತ್ರಮಾನವರು, ಲೆಕ್ಕಾಚಾರವಿಲ್ಲದೆ ಏನನ್ನೂ ಮಾಡುವುದಿಲ್ಲ. ರಾಜ್ಯದಲ್ಲಿ ಕ್ರೈಸ್ತ ಧಾರ್ಮಿಕ ಕೇಂದ್ರಗಳ ಮೇಲೆ ನಡೆದ ದಾಳಿಯ ಬೆನ್ನಿಗೇ ಮತಾಂತರ ನಿಷೇಧ ಕಾನೂನನ್ನು ಜಾರಿಗೊಳಿಸಬೇಕು ಎಂದು ಮಾಧ್ಯಮಗಳು ಮತ್ತು ಮಠಾಧೀಶರುಗಳ ಜೊತೆಗೆ ಮುಖ್ಯಮಂತ್ರಿಗಳು ಸಹ ಪ್ರತಿಪಾದಿಸುತ್ತಿರುವುದು ಕಾಕತಾಳೀಯವೇನೂ ಅಲ್ಲ. ಮತಾಂತರ ನಿಷೇಧದ ಕಾನೂನು ಸರ್ಕಾರದ ನಿರಂಕುಶ ಆಳ್ವಿಕೆಗೆ ದಾರಿ ಮಾಡಿಕೊಡುತ್ತದೆ. ದೇಶದ ಸಂವಿಧಾನ ಪ್ರಜೆಗಳಿಗೆ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯ ಧಾರ್ಮಿಕ ಸ್ವಾತಂತ್ರ್ಯ ಹಾಗೂ ಕಾನೂನಿನ ಎದುರು ಪ್ರಜೆಗಳೆಲ್ಲರ ಸಮಾನತೆಯ ಭರವಸೆಗಳನ್ನು ಬದಿಗೊತ್ತದೆ ಮತಾಂತರ ನಿಷೇಧ ಕಾನೂನನ್ನು ಜಾರಿಗೆ ತರಲು ಸಾಧ್ಯವಿಲ್ಲ.

ಆದಾಗ್ಯೂ ಈ ಕಾನೂನು ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ಹಲವು ರಾಜ್ಯಗಳಲ್ಲಿ ಈಗಾಗಲೇ ಜಾರಿಗೆ ಬಂದಿದೆ. ಉದಾ: ಒರಿಸ್ಸಾ (1967) ಮಧ್ಯಪ್ರದೇಶ (1968), ಅರುಣಾಚಲ ಪ್ರದೇಶ (1978), ಗುಜರಾತ್ (2003), ಛತ್ತೀಸ್‌ಗಢ (2003), ರಾಜಸ್ಥಾನ (2005) ಮತ್ತು ಹಿಮಾಚಲಪ್ರದೇಶ (2006). ಜಯಲಲಿತಾ ಅವರ ಅಧಿಕಾರಾವಧಿಯಲ್ಲಿ ತಮಿಳುನಾಡು ಸರ್ಕಾರ ಕೂಡ ಈ ಕಾನೂನನ್ನು ಜಾರಿಗೊಳಿಸಿತ್ತು (2002). ಆದರೆ ಆನಂತರ ಅಧಿಕಾರಕ್ಕೆ ಬಂದ ಕರುಣಾನಿಧಿ ಅವರ ನಾಯಕತ್ವದ ಡಿಎಂಕೆ ಸರ್ಕಾರ ಈ ಕಾನೂನನ್ನು ರದ್ದುಗೊಳಿಸಿತು (2004).

ಈ ಎಲ್ಲ ರಾಜ್ಯಗಳ ಮತಾಂತರ ನಿಷೇಧ ಕಾನೂನುಗಳ ಬಗೆಗೂ ದೇಶಾದ್ಯಂತ ವ್ಯಾಪಕ ವಿರೋಧ ವ್ಯಕ್ತವಾಗಿದೆ. ಈ ಕಾನೂನುಗಳು ಸಂವಿಧಾನದ 25 ನೆಯ ಕಲಮಿನಲ್ಲಿ ನಮೂದಿಸಿರುವ ಧಾರ್ಮಿಕ ಪ್ರತಿಪಾದನೆ, ಪ್ರಚಾರ ಮತ್ತು ಆಚರಣೆಗಳ ಸ್ವಾತಂತ್ರ್ಯವನ್ನು ಮೊಟಕುಗೊಳಿಸುತ್ತವೆ ಎಂದು ಕಾನೂನು ತಜ್ಞರು ಕೂಡ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮೇಲೆ ಹೇಳಿದ ಎಲ್ಲ ಮತಾಂತರ ನಿಷೇಧ ಕಾನೂನುಗಳು, ಮತಾಂತರ ಒಂದು ಅಕ್ರಮ ಎಂಬುದನ್ನು ಗೃಹೀತವಾಗಿರಿಸಿಕೊಂಡಿವೆ. ಈ ಕಾನೂನುಗಳು ಬಲಾತ್ಕಾರ ಪ್ರಯೋಗದಿಂದ ಅಥವಾ ಆಮಿಷಗಳನ್ನು ಒಡ್ಡಿ ಮತಾಂತರ ಮಾಡುವುದು ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸುತ್ತವೆ; ಆದರೆ ಬಲಾತ್ಕಾರ ಮತ್ತು ಆಮಿಷ ಎಂದರೆ ಖಚಿತವಾಗಿ ಏನು ಎಂದು ನಿರ್ವಹಿಸುವುದಿಲ್ಲ. ಹಾಗಾಗಿ ಈ ಕಾನೂನುಗಳ ಅನ್ವಯ, ಸ್ವಇಚ್ಛೆಯಿಂದ ಆದ ಮತಾಂತರಗಳನ್ನೂ ಬಲಾತ್ಕಾರದ ಮತಾಂತರ ಎಂದು ಮೂರನೆಯವರು ನ್ಯಾಯಾಲಯದ ಮುಂದೆ ಸಾಬೀತುಪಡಿಸಬಹುದು. ಸ್ವತಃ ಮತಾಂತರಗೊಂಡವನಿಗೆ ಈ ಬಗ್ಗೆ ತನ್ನ ಅಹವಾಲು ಹೇಳಿಕೊಳ್ಳಲು ಈ ಕಾನೂನುಗಳಲ್ಲಿ ಅವಕಾಶ ಹಾಗೂ ಕಾನೂನುಬದ್ಧ ರಕ್ಷಣೆಗಳಿಲ್ಲ.



ಅದೂ ಅಲ್ಲದೆ ಮತಾಂತರ ವೆಂದರೆ ಒಬ್ಬ ವ್ಯಕ್ತಿ ಅದುವರೆಗೆ ಅನುಸರಿಸುತ್ತಿದ್ದ ಧರ್ಮವನ್ನು ಸಂಪೂರ್ಣವಾಗಿ ತ್ಯಜಿಸಿ, ಇನ್ನೊಂದು ಧರ್ಮವನ್ನು ಸಂಪೂರ್ಣವಾಗಿ ಸ್ವೀಕರಿಸುವುದು ಎಂಬ ಈ ಕಾನೂನುಗಳ ಹಿಂದಿರುವ ಗ್ರಹಿಕೆ ಕೂಡ ನಿರಾಧಾರವಾದದ್ದು. ಭಾರತದಲ್ಲಿ ಮತಧರ್ಮ ಹಾಗೂ ಸಮುದಾಯಗಳ ಪರಿವರ್ತನಶೀಲ ದ್ರವರೂಪಿ ಸ್ವಭಾವವನ್ನೇ ಈ ಮತಾಂತರ ನಿಷೇಧ ಕಾನೂನುಗಳು ಅಲ್ಲಗಳೆಯುತ್ತವೆ. ಈ ದೇಶದಲ್ಲಿ ತಾವು ಇಂತಹದ್ದೇ ಧರ್ಮಕ್ಕೆ ಸೇರಿದವರು ಎಂದು ಖಡಾಖಂಡಿತವಾಗಿ ಹೇಳಲು ಸಾಧ್ಯವಾಗದ ಸುಮಾರು 650 ಸಮುದಾಯಗಳಿವೆ ಎಂದು ಖ್ಯಾತ ಚಿಂತಕ ಆಶೀಶ್ ನಂದಿ ಹೇಳುತ್ತಾರೆ. ಆದರೆ ಮತಾಂತರ ನಿಷೇಧ ಕಾನೂನುಗಳು, ಪ್ರಜೆಗಳ ಧಾರ್ಮಿಕ ಶ್ರದ್ಧೆಯನ್ನು ಖಡಾಖಂಡಿತವಾದ, ಸ್ಥಿರವಾದ, ಶಾಶ್ವತವಾದ ಮತ್ತು ಎಂದೆಂದಿಗೂ ಬದಲಾಗದ ಹಿಂದೂ, ಕ್ರೈಸ್ತ ಮುಸ್ಲಿಮ್, ಬೌದ್ಧ ಜೈನ್ ಇತ್ಯಾದಿ ಹಣೆಪಟ್ಟಿಗಳು ಎಂಬಂತೆ ಪರಿಭಾವಿಸುತ್ತವೆ.

ವಿವಿಧ ರಾಜ್ಯಗಳ ಮತಾಂತರ ನಿಷೇಧ ಕಾನೂನುಗಳು ವಿಹಿಂಪ ಮುಂತಾದ ಸಂಘಟನೆಗಳು ನಡೆಸುವ ಮರುಮತಾಂತರಕ್ಕೂ ಅನ್ವಯವಾಗುತ್ತವೋ? ಅಥವಾ "ಮರಳಿ ಮಾತೃಧರ್ಮಕ್ಕೆ" ಎಂದು ವಿಹಿಂಪ ಈ ಕಾರ್ಯಕ್ರಮವನ್ನು ವರ್ಣಿಸುವುದನ್ನು ಈ ಕಾನೂನುಗಳು ಮಾನ್ಯ ಮಾಡುತ್ತವೋ? ಮತಾಂತರ ನಿಷೇಧ ಕಾನೂನುಗಳು ಈ ಬಗ್ಗೆ ಏನೂ ಹೇಳುವುದಿಲ್ಲ. ಆದರೆ ಅವೆಲ್ಲವೂ "ಸ್ವಧರ್ಮ" (ಹಿಂದೂ) ಮತ್ತು "ಅನ್ಯಧರ್ಮ" (ಹಿಂದೂಯೇತರ) ಎಂಬ ಭೇದವನ್ನು-ಸಂವಿಧಾನ ದೇಶದ ಪ್ರಜೆಗಳ ನಡುವೆ ಕಲ್ಪಿಸದ ಭೇದವನ್ನು-ಗೃಹೀತವಾಗಿ ಇಟ್ಟುಕೊಂಡಿವೆ. ಇಂತಹ ಒಂದು ಸಂವಿಧಾನ ವಿರೋಧಿ ಕಾನೂನನ್ನು ಜಾರಿಗೆ ತರಲು ಕರ್ನಾಟಕದ ಹಾಲಿ ಬಜೆಪಿ ಸರ್ಕಾರ ಈಗ ಸಿದ್ಧತೆ ನಡೆಸುತ್ತಿದೆ: ಕ್ರೈಸ್ತ ಧಾರ್ಮಿಕ ಕೇಂದ್ರಗಳ ಮೇಲೆ ನಡೆದ ದಾಳಿಗೆ, ಅವು ನಡೆಸುತ್ತಿರುವ ಮತಾಂತರಗಳೇ ಕಾರಣವೆಂದು, ಸಂಘ ಪರಿವಾರ ಹಾಗೂ ಅದರ ಮುಖವಾಣಿಯಂತೆ ವರ್ತಿಸುತ್ತಿರುವ ಮಾಧ್ಯಮಗಳ ಜೊತೆ ಈಗ ರಾಜ್ಯದ ಮುಖ್ಯಮಂತ್ರಿಗಳೂ ಹೇಳುತ್ತಿದ್ದಾರೆ. ಇದು ಹಿಂಸೆಗೆ ಬಲಿಯಾದವರನ್ನೇ ಅಪರಾಧಿಗಳು ಎಂದು ಚಿತ್ರಿಸುವ ಫ್ಯಾಸಿಸ್ಟ್ ತಂತ್ರವಷ್ಟೇ ಅಲ್ಲ, ಮತಾಂತರದ ಗುಮ್ಮವನ್ನು ಸೃಷ್ಟಿಸಿ ಒಂದು ಕರಾಳ ಶಾಸನವನ್ನು ಜಾರಿಗೆ ತರಲು ಸರ್ಕಾರ ಹವಣಿಸುತ್ತಿದೆ.


ಅದಕ್ಕೆ ಸರಿಯಾಗಿ ಮೇಲುನೋಟಕ್ಕೆ ಸರ್ಕಾರಿ ಕೃಪಾಪೋಷಿತ ಎಂಬಂತೆ ಭಾಸವಾಗುವ ಅಧ್ಯಯನ ತಂಡವೊಂದು ಈಗ ಕರ್ನಾಟಕದ ವಿವಿಧ ಕಡೆಗಳಲ್ಲಿ ಕ್ರೈಸ್ತ ಧಾರ್ಮಿಕ ಕೇಂದ್ರಗಳ ಮೇಲೆ ನಡೆದ ದಾಳಿಯ "ಅಭ್ಯಾಸ" ನಡೆಸುತ್ತಿದೆ. "ಸಿಟಿಜನ್ಸ್ ಫಾರ್ ಹಾರ್ಮನಿ" ಎಂಬ ಹೆಸರಿನ ಈ ತಂಡ ಕಳೆದ ವಾರ ಮಂಗಳೂರು ಮತ್ತು ಉಡುಪಿಗೂ ಭೇಟಿ ನೀಡಿತ್ತು. ಎರಡು ಕಡೆಗಳಲ್ಲೂ ತಂಡ ತನ್ನ ಸಮೀಕ್ಷೆಯನ್ನು ನಡೆಸಿದ್ದು ಉನ್ನತ ಮಟ್ಟದ ಸರ್ಕಾರಿ ಮಂದಿಗೆ ಮಾತ್ರ ಮೀಸಲಾಗಿರುವ ಸರ್ಕ್ಯೂಟ್ ಹೌಸಿನಲ್ಲಿ. ಇತರ ಸತ್ಯಶೋಧಕ ತಂಡಗಳ ಬಗ್ಗೆ ಲೇವಡಿಯ ವರದಿಗಳನ್ನು ಪ್ರಕಟಿಸಿದ್ದ ಕರಾವಳಿಯ ಮಾಧ್ಯಮಗಳು ಈ ತಂಡದ ಬಗ್ಗೆ ಮಾತ್ರ ಗೌರವದಿಂದಲೇ ವರದಿ ಮಾಡಿದವು.

ಸಂಘ ಪರಿವಾರದ ವಿವಿಧ ಸಂಘಟನೆಗಳವರು ಸಾಕಷ್ಟು ಪೂರ್ವ ತಯಾರಿಯೊಡನೆ ಈ ಸಮಿತಿಯ ಎದುರು ಹಾಜರಾಗಿ ತಮ್ಮ ಅಹವಾಲುಗಳನ್ನು ಮಂಡಿಸಿದರು. ಉಡುಪಿಯಲ್ಲಿ ಈ ಸಮಿತಿಯ ಎದುರು "ಬಲಾತ್ಕಾರದ ಮತಾಂತರಕ್ಕೆ ಒಳಗಾದವರು" ಎನ್ನಲಾದ ಇಬ್ಬರು ಮಹಿಳೆಯರನ್ನು ತಂದು ಕೂರಿಸಲಾಗಿತ್ತು. ಅವರಲ್ಲಿ ಒಬ್ಬರು ರತಿ ಲಿಂಗಾಯತ ಎಂಬುವರು ಸಮಿತಿಯ ಎದುರು ಒಂದು ಸುದೀರ್ಘ ಹೇಳಿಕೆಯನ್ನೂ ಕೊಟ್ಟರು. ಅವರನ್ನು ಮತಾಂತರಿಸಲು ಬಂದವರು ಮೊದಲು 8000 ರೂಪಾಯಿ ಮತ್ತು ಒಂದು ಟಿವಿ ಕೊಟ್ಟರಂತೆ. ನಂತರ ಮನೆಯ ಅಂಗಳದಲ್ಲಿದ್ದ ತುಳಸಿಗಿಡ ಮತ್ತು ಬಿಲ್ವಪತ್ರೆ ಮರಗಳನ್ನು ಕಡಿಯಲು ಹೇಳಿದರಂತೆ; ಚಿನ್ನದ ಆಭರಣ ತೆಗೆದುಕೊಂಡು ರೋಲ್ಡ್ ಗೋಲ್ಡ್ ಆಭರಣ ಕೊಟ್ಟರಂತೆ. ಇವರು ಅವರಿಗೆ (ಅಂದರೆ ಮತಾಂತರ ಮಾಡಲು ಬಂದ ನ್ಯೂಲೈಫ್‌ನವರಿಗೆ) "ನಾವು ನಿಮ್ಮೊಟ್ಟಿಗೆ ಬರುವುದಿಲ್ಲ" ಎಂದು ಹೇಳಿದರಂತೆ. ಅವರು ಈಗ ದುಡ್ಡು ಮತ್ತು ಟಿವಿ ವಾಪಸ್ಸು ಕೇಳುತ್ತಿದ್ದಾರಂತೆ. ಬೇಡಬೇಡವೆಂದರೂ ಅವರ ಪುಸ್ತಕಗಳನ್ನು ಈಗಲೂ ಪೋಸ್ಟ್‌ನಲ್ಲಿ ಕಳುಹಿಸುತ್ತಾರಂತೆ. ಇಷ್ಟು ಹೇಳಿ ರತಿ, ಎರಡು ಕಿರುಪುಸ್ತಿಕೆಗಳನ್ನೂ (ಮುದ್ರಿತ, ಆದರೆ 'ಸತ್ಯದರ್ಶಿನಿ' ಅಲ್ಲ) ಸಮಿತಿ ಎದುರು ಇಟ್ಟರು. ರತಿ ಲಿಂಗಾಯತ ಬುದ್ಧಿ ತಿಳಿಯದ ಮಗುವಲ್ಲ; ಅಪ್ರಾಯಸ್ಥ ತರುಣಿಯೂ ಅಲ್ಲ; ನಡುವಯಸ್ಸಿನ ಗೃಹಿಣಿಯಾದ ಆಕೆ ತನಗೇನೋ ಮಹಾವಂಚನೆಯಾಗಿದೆ ಎಂಬಂತೆ ಸಮಿತಿ ಎದುರು ತಮ್ಮ ಅಹವಾಲು ಹೇಳಿಕೊಂಡರು. ಸಮಿತಿಯವರೂ ಅದನ್ನು ಅಷ್ಟೇ ಮುತುವರ್ಜಿಯಿಂದ ದಾಖಲಿಸಿಕೊಂಡರು. ಅದೇ ಸಂದರ್ಭದಲ್ಲಿ ಬಲಾತ್ಕಾರದ ಮತಾಂತರದ ವಿರುದ್ಧ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಮೂರು ದೂರುಗಳ ಪ್ರತಿಗಳನ್ನೂ ಸಮಿತಿಗೆ ಸಲ್ಲಿಸಲಾಯಿತು. ಒಟ್ಟಿನಲ್ಲಿ ಕರ್ನಾಟಕದಲ್ಲಿ ಮತಾಂತರ ಅಪಾಯಕಾರಿ ಪ್ರಮಾಣದಲ್ಲಿ ನಡೆಯುತ್ತಿದೆ ಎಂಬುದಕ್ಕೆ ಬೇಕಾದ ಸಾಕ್ಷ್ಯಾಧಾರಗಳನ್ನು ಸೃಷ್ಟಿಸಲೆಂದೇ ಈ ಸಮಿತಿ ತನ್ನ ಕಲಾಪಗಳನ್ನು ನಡೆಸುತ್ತಿದೆ" ಎಂದು ಉಡುಪಿಯ ಆ ಬೈಠಕ್‌ನಲ್ಲೂ ಭಾಸವಾಗುತ್ತಿತ್ತು.

ಮತಾಂತರವನ್ನು- ಮೇಲೆ ಹೇಳಿದ ಬಗೆಯ ಮತಾಂತರವನ್ನು ಕೂಡ-ಶಿಕ್ಷಾರ್ಹ ಅಪರಾಧ ಎಂದು ಘೋಷಿಸುವ ಕಾನೂನು ಜಾರಿಗೆ ಬಂದರೆ, ಪ್ರಜೆಗಳ ಮೇಲೆ ಕಣ್ಣಿರಿಸಲು ಒಬ್ಬ ಸಾಮಾನ್ಯ ಪೊಲೀಸು ಪೇದೆಗೂ ಪ್ರಾಪ್ತವಾಗುವ ಅಧಿಕಾರ ಭಯ ಹುಟ್ಟಿಸುತ್ತದೆ. ರಾಜ್ಯ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ಇನ್ನೊಂದು ಕರಾಳ ಕಾನೂನು KOCCA ದಂತೆ ಮತಾಂತರ ನಿಷೇಧ ಕಾನೂನು ಸಹ, ಸರ್ಕಾರಕ್ಕೆ ಪ್ರಜೆಗಳ ಮೇಲೆ ಹಿಂದೆಂದೂ ಕಾಣದಂತಹ ದಬ್ಬಾಳಿಕೆ ನಡೆಸಲು ಅವಕಾಶ ಮಾಡಿಕೊಡುತ್ತದೆ. ರಾಜ್ಯದಲ್ಲಿ ಈ ಕಾನೂನು ಜಾರಿಗೆ ಬರಬೇಕು ಎಂದು ಆಳುವವರು ಮತ್ತು ಮಾಧ್ಯಮಗಳ ಜೊತೆ ಮಠಾಧೀಶರು ಸಹ ಆಗ್ರಹಪಡಿಸುತ್ತಿರುವುದರಲ್ಲಿ ಇನ್ನೂ ಒಂದು ವಿಲಕ್ಷಣ ವೈಪರೀತ್ಯವಿದೆ. ಪ್ರಜೆಗಳ ಭೌತಿಕ ಅಗತ್ಯಗಳಾದ ಶಿಕ್ಷಣ, ವಸತಿ, ಆರೋಗ್ಯ, ಉದ್ಯೋಗ ಇತ್ಯಾದಿಗಳನ್ನು ಒದಗಿಸುವ ಜವಾಬ್ದಾರಿಯಿಂದ ಸರ್ಕಾರ ದಿನೇದಿನೇ ದೂರ ಸರಿಯುತ್ತಿದೆ. ಆದರೆ ಪ್ರಜೆಗಳ ಆತ್ಮದ ಉಸ್ತುವಾರಿ ನಡೆಸುವುದು ಸರ್ಕಾರದ ಕರ್ತವ್ಯ ಎಂದು ಈಗ ಸರ್ಕಾರಗಳ ಜೊತೆಗೆ ಮಠಾಧೀಶರು ಸಹಭಾವಿಸುತ್ತಿದ್ದಾರೆ!

■

ಜಿ. ರಾಜಶೇಖರ



ಅರಿವು ಮೂಡಿಸಿದ ದಾಳಿಗಳು

ಕ್ರೈಸ್ತರ ಮೇಲಿನ ಭಜರಂಗಿ ಮತ್ತು ಪೊಲೀಸರ ಜಂಟಿ ದಾಳಿಗಳು ಖಂಡನೀಯ. ಇವು ಅಮಾನುಷ ಕೃತ್ಯಗಳು. ಈ ಮತಾಂಧರು , ಮನುಷ್ಯತ್ವ ಮರೆತ ದುಷ್ಟರು ಕಾನೂನನ್ನು ಕೈಗೆತ್ತಿಕೊಂಡು ಚರ್ಚ್‌ಗಳ ಮೇಲೆ, ಏಸು ಪ್ರತಿಮೆಯ ಮೇಲೆ, ಧರ್ಮಗುರುಗಳ ಮೇಲೆ, ಕ್ರೈಸ್ತ ಭಗಿನಿಯರ ಮೇಲೆ, ನ್ಯಾಯಕ್ಕಾಗಿ ದನಿ ಎತ್ತಿದ ಕ್ರೈಸ್ತರ ಮೇಲೆ ಹಲ್ಲೆಗಳನ್ನು ನಡೆಸಿ ಅಟ್ಟಹಾಸ ಮೆರೆದರೂ ಇನ್ನೂ ಹಲವು ಮಾಧ್ಯಮಗಳಿಗೆ ತೃಪ್ತಿಯಾಗಿಲ್ಲ. ಈ ರೀತಿಯ ಹೇಯಕೃತ್ಯಗಳು ನಡೆದ ಆರಂಭದಿಂದಲೂ ಅಂತಹ ಪತ್ರಿಕೆಗಳು ಪತ್ರಿಕೋದ್ಯಮದ ಘನತೆಯನ್ನೇ ಮರೆತು, ಕೋಮುಗಲಭೆಗಳಿಗೆ ತುಪ್ಪ ಸುರಿಯುವಂತಹ ಲೇಖನಗಳನ್ನೇ ಪ್ರಕಟಿಸುತ್ತಿವೆ.

'ಈಗ ಕ್ರೈಸ್ತರಿಗೆ ಬುದ್ಧಿ ಕಲಿಸಿರುವುದು ಏನೂ ಸಾಲದು' ಎಂಬಂತಹ ಸಂದೇಶಗಳನ್ನು ತಮ್ಮ ಪತ್ರಿಕೆಗಳ ಅಂಕಣಕೋರರಿಂದ ಬರೆಸುತ್ತಾ ಹಿಂದೂ ಮೂಲಭೂತವಾದಿಗಳ 'ಪ್ರತಾಪ' ತಮ್ಮದೇ 'ವಿಜಯ' ಎಂದು ಬೀಗುತ್ತಿದ್ದಾರೆ. ಈಗ ಓದುಗರಿಗೆ ಬೇಕಿರುವುದು ಶಾಂತಿ-ಸೌಹಾರ್ದತೆಯ ಮಾರ್ಗದರ್ಶನ ನೀಡುವಂತಹ ಲೇಖನಗಳು ಎಂಬುದರ ಕುರಿತು ಬೇಕೆಂದೇ ಜಾಣ ಮರೆವು ತೋರಿಸುತ್ತಿದ್ದಾರೆ. ಈಗಿನ ಸಂದರ್ಭದಲ್ಲಿ ಇಂತಹ ಕೋಮುಸಂಘರ್ಷಕ್ಕೆ ಪ್ರಚೋದನೆ ಕೊಡುವಂತಹ ಲೇಖನಗಳ ಅಗತ್ಯವಿದೆಯೆ?

ಒಂದೆಡೆ ಕ್ರೈಸ್ತರನ್ನು ಹಿಂಸಿಸಲಿಕ್ಕಾಗಿಯೇ 'ಮತಾಂತರ' ಎಂಬ ಲೇಬಲ್ ಹಣೆಗೆ ಹಚ್ಚಿ, ಭಜರಂಗಿಗಳು ಮತ್ತು ಅವರ ಆಣತಿಯಂತೆ ಕುಣಿಯುತ್ತಿರುವ ಪೊಲೀಸರು, ಇನ್ನೊಂದೆಡೆ ಅವರ ದುಷ್ಟತನವನ್ನು ಮರೆಮಾಚಿ ಕ್ರೈಸ್ತರು ಮತಾಂತರ ಮಾಡಿದ್ದರಿಂದಲೇ ಹಿಂದೂಗಳೆಲ್ಲ ರೊಚ್ಚಿಗೆದ್ದರು ಎಂಬ ಭಾವನೆ ಬರುವಂತೆ ವರದಿ-ಸಂಪಾದಕೀಯ-ಅಂಕಣ ಬರಹಗಳನ್ನು ಪ್ರಕಟಿಸುತ್ತಿರುವ ಈ ಹೊಣೆಗೇಡಿ ಪತ್ರಕರ್ತರ ದಂಡು.

ಈ ಪತ್ರಕರ್ತರು ಮೊನ್ನೆ ಚರ್ಚ್‌ಗಳ ಮೇಲೆ ದಾಳಿ ಮಾಡಿದ ಭಜರಂಗಿಗಳನ್ನು ಹೇಗೆ ನಾಚಿಕೆ ಬಿಟ್ಟು ಸಮರ್ಥಿಸಿ ಕೊಳ್ಳುತ್ತಾರೆ ನೋಡಿ. "ಭಜರಂಗಿಗಳು ನಡೆಸಿದ ದಾಳಿಗಳಲ್ಲಿ ಯಾರೂ ಸತ್ತಿಲ್ಲವಲ್ಲ. ಕ್ರೈಸ್ತರು ತಮಗೆ ಅನ್ಯಾಯವಾಗಿದೆ ಎಂಬುದರ ಕುರಿತು ಉತ್ಪ್ರೇಕ್ಷಿತ ಹೇಳಿಕೆಗಳನ್ನು ನೀಡುತ್ತಿದ್ದಾರೆ" ಎಂದು ಬರೆಯುತ್ತಾರೆ. ಅಂದರೆ ಇವರ ಟಾರ್ಗೆಟ್ ಏನು? ಯಾವ ಕ್ರೈಸ್ತನೂ ಸಾಯಲಿಲ್ಲ ಎಂದು ಇವರಿಗೆ ಬೇಸರವೆ? ಚರ್ಚ್ ಮೇಲಿನ ದಾಳಿಗಳಿಂದ ನೊಂದ ಬಿಷಪ್ ಮುಖ್ಯಮಂತ್ರಿಯೊಂದಿಗೆ ತಮ್ಮ ಸಮುದಾಯಕ್ಕಾದ ನೋವನ್ನು ಹೇಳಿಕೊಂಡರೆ ಮುಖ್ಯಮಂತ್ರಿಯನ್ನು ಉದ್ದೇಶಪೂರ್ವಕವಾಗಿ ಅವಮಾನಿಸಲಾಗಿದೆ ಎಂದು ಸುದ್ದಿ ಮಾಡುತ್ತಾರೆ.

ರಾಜ್ಯದ ಬಿಜೆಪಿ ಸರಕಾರ, ಭಜರಂಗಿ ಪಡೆಗಳು, ಭಜರಂಗಿಗಳನ್ನು ಮೆಚ್ಚಿಸಲು ಅಮಾಯಕರ ಮೇಲೆ ಲಾಠಿ ಬೀಸುವ ಪೊಲೀಸರು; ಇವರನ್ನೆಲ್ಲ ಬೆಂಬಲಿಸುತ್ತಾ ಪತ್ರಿಕಾ 'ಉದ್ಯಮ' ನಿರತ ಜವಾಬ್ದಾರಿ ರಹಿತ ಮಾಧ್ಯಮಗಳು ಎಲ್ಲ ಸೇರಿ ಕ್ರೈಸ್ತರ ಮೇಲೆ ಮುಗಿಬಿದ್ದಿರುವುದರಿಂದ ಒಂದು ಒಳ್ಳೆಯ ಬೆಳವಣಿಗೆ ಆಗಿದೆ. ಮನೆ-ಮಕ್ಕಳು ಎಂದು ಹಾಯಾಗಿದ್ದ ನನ್ನಂತಹ ಸುಖೀ ಮಹಿಳೆಯರಿಗೆ, ಸಾಮಾನ್ಯ ಕ್ರೈಸ್ತರಿಗೆ ಕೂಡ ಬಿಜೆಪಿ ಸರಕಾರವನ್ನು ಆಯ್ಕೆ ಮಾಡಿದರೆ ಏನಾಗುತ್ತದೆ ಎಂಬುದರ ಅರಿವು ಮೂಡಿದೆ.


ಇದೆಲ್ಲದರಿಂದ ನನ್ನ ಮನಸ್ಸು ಘಾಸಿಗೊಂಡಿದ್ದರೂ ಕೂಡ ಹಿಂದೂಗಳೆಲ್ಲ ಭಜರಂಗಿಗಳಲ್ಲ, ಇಂದಿಗೂ ಬಹು ಸಂಖ್ಯೆಯ ಹಿಂದೂಗಳು ಕ್ರೈಸ್ತರು ಮತ್ತು ಮುಸ್ಲಿಮರೊಂದಿಗೆ ಸಹಬಾಳ್ವೆಯನ್ನೇ ಬಯಸುತ್ತಾರೆ ಎಂಬುದು ನನಗೆ ಗೊತ್ತಿದೆ. ಇದೇ ನಮ್ಮೆಲ್ಲರನ್ನು ರಕ್ಷಿಸುವ ಅರಿವು.

- ದಯಾನ ರೆಬೆಲ್ಲೊ, ಕೋಟೇಶ್ವರ

ಗದಗ: ಪಾಪಿಗಳ ಅಡ್ಡೆಯಲ್ಲಿ ಹೆಣ್ಣಿನ ಕಗ್ಗೊಲೆ



ಗದಗವೆಂಬ ಸೌಹಾರ್ದ ನಾಡಿನಲ್ಲಿ ರಕ್ತದ ಕಲೆಗಳು ಗೋಲಿ ಬಡಿಸುತ್ತಿವೆ. ಒಂದೇ ತಿಂಗಳ ಅಂತರದಲ್ಲಿ ಎರಡು ಹೆಣ್ಣು ಜೀವಗಳು ಬಲಿಯಾಗಿವೆ. ನಾಗರತ್ನ ನಾಗಲಾಪೂರ್ ಎಂಬ ಸಭ್ಯ ಗೃಹಿಣಿಯನ್ನು ಆಕೆಯ ಪತಿಯೇ ಬರ್ಬರವಾಗಿ ಕೊಲೆಗೈದಿದ್ದ ಎಂಬ ಗುಸುಗುಸು ಸುದ್ದಿ ಹಬ್ಬಿರುವಾಗಲೇ, ಈಗ ವಿಶ್ವ ರೆಸ್ಟೋರೆಂಟ್ ಎಂಬ ಹೈಟೆಕ್ ವೇಶ್ಯಾವಾಟಿಕೆಯ ಅಡ್ಡೆಯಲ್ಲಿ ಮತ್ತೊಬ್ಬ ಹೆಣ್ಣುಮಗಳು ಹೆಣವಾಗಿರುವುದು ಗದುಗಿನ ಜನರನ್ನು ತಲ್ಲಣಗೊಳಿಸಿದೆ.



ಹೋಟೆಲ್ ವಿಶ್ವ

ಗದುಗಿಗೆ ಪಾತಕತೆಯ ಪರಿಚಯ ಹೊಸದೇನಲ್ಲ. ಬಹಳ ಹಿಂದೆಯೇ ಇಲ್ಲಿನ ಶಾನಭಾಗ ಹೋಟೆಲ್ ಎದುರಿಗೆ ವಕೀಲನೊಬ್ಬನನ್ನು ಗುಂಡಿಟ್ಟು ಕೊಲ್ಲಲಾಗಿತ್ತು. ಅದರ ಹಿಂದೆ ಕುರ್ತಕೋಟಿ ನೆಲದ ನಟೋರಿಯಸ್ ರಾಜಕಾರಣಿಯ ನೆರಳೇ ಇತ್ತೆಂಬುದು ಇಡೀ ಗದುಗಿಗೆ ಗೊತ್ತಿರುವ ರಹಸ್ಯ. ಹಾಗೆನೇ, ಸೆಟ್ಲಮೆಂಟಿನ ಅಶೋಕ್ ನಿಯಾಸ್ ಕಾಡಿ ಆಶ್ಯಾನ ಕೊಲೆ ಕೂಡ ಪ್ರತೀಕಾರಕ್ಕೆ



ಸಿಪಿಐ ಪ್ರಕಾಶ್



ರೂಪ



ರಮಾಕಾಂತ್

ನಡೆದಿತ್ತು, ಅವಾಗಲೇ ಗದುಗಿನ ಜನರಿಗೆ ಪಾತಕ ಜಗತ್ತಿನ ಮುಖಗಳು ಅರ್ಥವಾಗತೊಡಗಿದ್ದವು. ಆದರೆ, ಈಗ ಈ ಪಾತಕಿಗಳಿಗೆ ಹೆಣ್ಣುಮಕ್ಕಳು ಬಲಿಯಾಗುತ್ತಿರುವುದು ಗದುಗಿನ ಜನರ ನಿದ್ದೆಗೆಡಿಸಿರುವುದಂತೂ ಸತ್ಯ.

ಕಳೆದ ತಿಂಗಳು ಚೇತನಾ ಕಾನ್ವೆಂಟಿನ ಕೂಗಳತೆಯ ದೂರದಲ್ಲಿರುವ ಮನೆಯೊಂದರಲ್ಲಿ ಮನೆಯೊಡತಿಯಾದ ನಾಗರತ್ನ ನಾಗಲಾಪೂರ್ ತನ್ನ ಗಂಡನಿಂದಲೇ ಕೊಲೆಯಾದಳು ಎಂದು ಕೇಳಿದ ಗದುಗಿನ ಜನ ಅದನ್ನೊಂದು ಅಪವಾದವೆಂಬಂತೆ ನೋಡಿದ್ದರು. ಈಗ ತಿಂಗಳು ತುಂಬುವುದರೊಳಗಾಗಿ ಮತ್ತೊಂದು ಹೆಣ್ಣು ಪಾತಕಿಗಳಿಗೆ ಬಲಿಯಾಗಿರುವುದು ಗದುಗಿನ ಜನರನ್ನು ಭಯಭೀತರನ್ನಾಗಿಸಿದೆ.

ಆವತ್ತು ನಡೆದದ್ದೇನು?

ಆವತ್ತು ಸೆಪ್ಟೆಂಬರ್ 27ರ ಶನಿವಾರ. ಗದುಗಿನ ವಿಶ್ವ ರೆಸ್ಟೋರೆಂಟ್ ಎಂಬ ಹೈಟೆಕ್ ವೇಶ್ಯಾವಾಟಿಕೆ ಅಡ್ಡೆಗೆ ಇಬ್ಬರು ಗಂಡ-ಹೆಂಡತಿ ಎಂದು ಹೇಳಿಕೊಂಡು ಬಂದು ರೂಮೊಂದನ್ನು ಬಾಡಿಗೆಗೆ ಪಡೆಯುತ್ತಾರೆ. ಟೈಮು ಟೈಮಿಗೆ ಸರಿಯಾಗಿ ಊಟ, ತಿಂಡಿ ತರಿಸಿಕೊಂಡು ತಿನ್ನುತ್ತಾರೆ. ರಾತ್ರಿಯೆಲ್ಲಾ ಕಳೆದ ಮೇಲೆ ಬೆಳಗ್ಗೆ ಗಂಡ ಎಂದು ಹೇಳಿಕೊಂಡು ಬಂದವನು ರೂಂ ಖಾಲಿ ಮಾಡುತ್ತಿದ್ದೇವೆ ಎಂದು ಹೇಳಿ ಬೀಗದ ಕೀ ರಿಸಪ್ಷನ್‌ನಲ್ಲಿ ಕೊಟ್ಟು ಹೋಗುತ್ತಾನೆ. ರೂಮ್ ಪಡೆಯುವಾಗ ಇಬ್ಬರಿದ್ದವರು, ರೂಮ್ ಖಾಲಿ ಮಾಡುವಾಗ ಒಬ್ಬನೇ ಇರುವುದನ್ನಿಲ್ಲಿ ಗಮನಿಸಬೇಕು.

ಆಮೇಲೆ, ಅವರು ಪಡೆದಿದ್ದ ರೂಂ ನಂಬರ್ 112ನ್ನು ಕ್ಲೀನ್ ಮಾಡುವುದಕ್ಕಾಗಿ ಹೋಟೆಲ್ಲಿನ ಹುಡುಗರು ಹೋದಾಗಲೇ ಅಲ್ಲಿ ಹೆಂಡತಿಯೆಂದು ಹೇಳಿಕೊಂಡು ಬಂದ ಮಹಿಳೆ ಅರೆ ಬೆತ್ತಲೆಯಲ್ಲಿ ಹೆಣವಾಗಿ ಬಿದ್ದಿರುವುದು ಗೊತ್ತಾಗುತ್ತದೆ. ಈ ಕೊಲೆ ಶನಿವಾರ ರಾತ್ರಿಯೇ ಊಟೋಪಚಾರ ಮುಗಿದ ಮೇಲೆ ನಡೆದಿರುವುದನ್ನು, ಕುತ್ತಿಗೆಗೆ ವೈರ್ ಬಿಗಿದು ಕೊಲೆ ಮಾಡಿರುವುದನ್ನು ಪೊಲೀಸರು ಪ್ರಾಥಮಿಕ ವರದಿಯಲ್ಲಿ ದಾಖಲಿಸುತ್ತಾರೆ.

ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ಬಂದವರು ನಿಜಕ್ಕೂ ಗಂಡಹೆಂಡತಿಯೇ ಆಗಿದ್ದರೆ ವಿಶ್ವ ರೆಸ್ಟೋರೆಂಟ್ ಎಂಬ ವೇಶ್ಯಾವಾಟಿಕೆಯ ಅಡ್ಡೆಗೇಕೆ ಬರುತ್ತಿದ್ದರು ಎಂಬುದು. ಏಕೆಂದರೆ, ಇಲ್ಲಿ ಹೈಟೆಕ್ ವೇಶ್ಯಾವಾಟಿಕೆ ನಡೆಯುತ್ತಿರುವುದು ಇಡೀ ಗದುಗಿಗೇಕೆ, ಅಕ್ಕಪಕ್ಕದ ಊರುಗಳಿಗೂ ಗೊತ್ತಿರುವ ವಿಚಾರ. ಅಸಲಿಯತ್ತೇನೆಂದರೆ, ಇದು ವೇಶ್ಯಾವಾಟಿಕೆಯ ಅಡ್ಡೆಯಾಗಿರುವುದರಿಂದಲೇ ಕೊಲೆ ಮಾಡುವುದಕ್ಕೆ ಸೂಕ್ತ ಸ್ಥಳ ಎಂದುಕೊಂಡೇ ಆ ಮಹಿಳೆಯನ್ನು ಅಲ್ಲಿಗೆ ಉಪಾಯ ಮಾಡಿ ಕರೆತರಲಾಗಿದೆ ಎಂಬುದು ಮೇಲ್ನೋಟಕ್ಕೆ ಕಾಣುವ ವಿಚಾರ. ಅದೂಅಲ್ಲದೇ, ತಾವು ಯಾರು, ಎಲ್ಲಿಂದ ಬಂದಿದ್ದೀರಾ, ಏನು ಕೆಲಸದ ಮೇಲೆ ಬಂದಿದ್ದೀರಾ – ಇಂಥ ಯಾವೊಂದು ವಿಚಾರವನ್ನೂ ಕೇಳದೆ ವಿಶ್ವ ರೆಸ್ಟೋರೆಂಟ್‌ನವರು ಇವರಿಗೆ ರೂಮು ಕೊಟ್ಟಿದ್ದಾರೆಂದರೆ ಇವರಿಬ್ಬರೂ ಈ ಹೋಟೆಲ್‌ನ ಕಾಯಂ ಗಿರಾಕಿಗಳಾಗಿರುವ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ.

ಗದುಗಿನ ಕಪ್ಪುಚುಕ್ಕೆಗಳು

ಗದುಗಿನ ಮಾನಮರ್ಯಾದೆ ಹರಾಜು ಹಾಕುವುದಕ್ಕೆಂದೇ ತಲೆಯೆತ್ತಿರುವ ವೇಶ್ಯಾವಾಟಿಕೆಯ ಅಡ್ಡೆಗಳಿಗೇನೂ ಕೊರತೆಯಿಲ್ಲ. ಇವುಗಳಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುವ ಅಡ್ಡೆಗಳೆಂದರೆ ಈಗ ಕೊಲೆ ನಡೆದಿರುವ ವಿಶ್ವ ರೆಸ್ಟೋರೆಂಟ್ ಮತ್ತು ಶಿವಾನಿ ಇನ್.



ಕಳಕಪ್ಪ ಬಂಡಿ

ಇವತ್ತು ವಿಶ್ವರೆಸ್ಟೋರೆಂಟಿನಲ್ಲಿ ಹೆಣ್ಣು ಮಗಳೊಬ್ಬಳು ಹೆಣವಾಗಿದ್ದಾಳೆ ಎಂದರೆ ಅದಕ್ಕೆ ರೆಸ್ಟೋರೆಂಟಿನ ಮಾಲಿಕ ವಿಶ್ವನಾಥ ಶೆಟ್ಟಿಯೇ ಪ್ರಮುಖ ಕಾರಣನಾಗುತ್ತಾನೆ. ತನ್ನ ಈ ಅಡ್ಡೆಯಲ್ಲಿ ಹೆಣ್ಣುಗಳನ್ನು ಮಲಗಿಸಿ ಕಾಸು ಮಾಡಿಕೊಳ್ಳುವ ಕೆಟ್ಟ ಕಸುಬನ್ನು ಮಾಡುತ್ತಿರುವ ಈತ ಹೆಂಗಳೆಯರ ಕಣ್ಣೀರಿನಿಂದಲೇ ಕೋಟಿ ಕೋಟಿ ದುಡ್ಡು ಮಾಡಿಕೊಂಡಿದ್ದಾನೆ. ನಿಜವಾದ ಕೊಲೆಗಾರನನ್ನು ಹಿಡಿದು ಜೈಲಿಗಟ್ಟುವುದು ಎಷ್ಟು ಮುಖ್ಯವೋ ವಿಶ್ವನಾಥ ಶೆಟ್ಟಿಯನ್ನು ಜೈಲಿಗಟ್ಟಬೇಕಿರುವುದೂ ಸಮಾಜದ ಸ್ವಾಸ್ಥ್ಯದ ದೃಷ್ಟಿಯಿಂದ ಅಷ್ಟೇ ಮುಖ್ಯ. ಗದುಗಿನ ಪೊಲೀಸರು ಅವನ ಎಂಜಲಿಗೆ ನಾಲಿಗೆ ಚಾಚದೇ ಅಂತಹದ್ದೊಂದು ಉತ್ತಮ ಕೆಲಸಕ್ಕೆ ಕೈಹಾಕಬೇಕಿದೆ.

ಇನ್ನು 'ಶಿವಾನಿ ಇನ್' ಚರಿತ್ರೆ ಕೂಡ ವಿಶ್ವ ರೆಸ್ಟೋರೆಂಟಿನ ಚರಿತ್ರೆಗಿಂತ ತೀರಾ ಭಿನ್ನವಾಗೇನೂ ಇಲ್ಲ. ನೋಡುವುದಕ್ಕೆ [illegible] ಹೋಟೆಲ್ [illegible] ಒಳಗೆ ನಡೆಯುವುದೇ [illegible] [illegible] ರಾಜೇಶ್ ಶೆಟ್ಟಿ [illegible] ಮೈಮುರಿದು [illegible] ಈತ ತನ್ನ ಇಡೀ [illegible] ನೋಡಿದರೆ ಅತನ ಮಗ ಸುನಿರಾಜ್ ಶೆಟ್ಟಿ [illegible] ಒಂದು ಹಲ್ಕಟ್ ಕೆಲಸವೇ ಸಾಕ್ಷಿ ಹೇಳುತ್ತದೆ. ಕಾಮರ್ಸ್ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಸುನಿರಾಜ್ ಶೆಟ್ಟಿ ತನ್ನ ಗೆಳೆಯನಾಗಿದ್ದ ಸುಜಿತ್ ಬೂಸದ್ ಮತ್ತಾತನ ಪ್ರೇಯಸಿಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ, ಅವರಿಬ್ಬರೂ ಮೈಮರೆತಿರುವ ಸಂದರ್ಭದಲ್ಲಿನ ದೃಶ್ಯಾವಳಿಗಳನ್ನು ತನ್ನ ಮೊಬೈಲ್ ಫೋನ್‌ನಲ್ಲಿ ವಿಡಿಯೋ ರೆಕಾರ್ಡಿಂಗ್ ಮಾಡಿ, ಆಮೇಲೆ ಅದನ್ನು ಸಿಡಿ ಮಾಡಿ ಇಡೀ ಗದುಗಿನಾದ್ಯಂತ ಹಂಚಿದ್ದ. ಅಪ್ಪನ ದಾರಿಯಲ್ಲೇ ಮಗ ಹೇಗೆ ನಡೆಯುತ್ತಿದ್ದಾನೆ ನೋಡಿ.

ಹಡಬ ದುಡ್ಡಿನಿಂದಲೇ ಕೋಟ್ಯಾಧಿಪತಿಗಳಾಗಿರುವ ಇಲ್ಲಿನ ಮಾರನ್ ಹೆಗಡೆ ಎಂಬ ಚಪಲ ಚೆನ್ನಿಗರಾಯರು ಈ ಎರಡೂ ಅಡ್ಡೆಗಳ ಕಾಯಂ ಗಿರಾಕಿಗಳು ಮಾತ್ರವಲ್ಲ, ಅವುಗಳ ಬೆನ್ನೆಲುಬು ಕೂಡ. ಇವರಿಬ್ಬರೂ ನೀಡುವ ಪ್ರತೀವಾರದ ಪಾರ್ಟಿಗೆ ಗೋವಾದಿಂದ ವೈನು, ಮಂಗಳೂರಿನಿಂದ ಹೆಣ್ಣು ಸರಬರಾಜಾಗುತ್ತದೆ.

ಗದುಗಿನ ಪೊಲೀಸರಿಗೆ ಅದ್ಯಾವ ರೋಗ ಅಂಟಿಕೊಂಡಿದೆಯೋ ಗೊತ್ತಿಲ್ಲ. ರೂಪಸಿ ಡಿ.ರೂಪ ಎಸ್ಪಿಯಾಗಿದ್ದಾಗ ಇಡೀ ಜಿಲ್ಲೆಯ ಪೊಲೀಸ್ ಇಲಾಖೆ ಅವಳ ಕ್ಯಾಟ್ ವಾಕ್ ನೋಡುತ್ತಲೇ ಕಾಲ ಕಳೆಯುತ್ತಿತ್ತು. ಆಯಮ್ಮ ಕಂಬಿ ಕಿತ್ತ ಮೇಲೆ ಆ ಜಾಗಕ್ಕೆ ಬಂದಿರುವ ಎಸ್ಪಿ ಪ್ರಕಾಶ್ ಇಡೀ ಪೊಲೀಸ್ ಇಲಾಖೆಯನ್ನೇ ನರ್ವಸ್ ಮಾಡಿಬಿಟ್ಟಿದ್ದಾನೆ. ಈತನಿಗೆ ಜನರೆಂದರೇನೆ ಅಲರ್ಜಿ. ತಿಂಗಳ ಅಂತರದಲ್ಲಿ ಎರಡು ಕೊಲೆಗಳು ನಡೆದು ಇಡೀ ಗದುಗಿನ ಜನ ಆತಂಕದಲ್ಲಿ ಬದುಕುತ್ತಿದ್ದರೆ ಈ ಕೊಲೆಗಳಿಗೂ ತನಗೂ ಏನೂ ಸಂಬಂಧವಿಲ್ಲ ಎಂಬಂತೆ ವರ್ತಿಸುತ್ತಿದ್ದಾನೆ.

ಇಂಥ ಹಲ್ಕಟ್ ಕೆಲಸ ಮಾಡುತ್ತಿರುವ ಈ ಎರಡೂ ಅಡ್ಡೆಗಳನ್ನು, ಪಾರ್ಶ್ವವಾಯು ಬಂದಂತೆ ಕುಳಿತಿರುವ ಪೊಲೀಸ್ ಇಲಾಖೆಯನ್ನು ಗದುಗಿನ ಜನ ಈತನಕ ಸಹಿಸಿಕೊಂಡಿದ್ದಾರಲ್ಲ, ಅದೇ ಆಶ್ಚರ್ಯ.

■ ಹುರುಳಿಕುಪ್ಪಿ ವಿನಯ್

ಎಲ್ಲರ ಚಿತ್ತ ಪ್ರಕಾಶ್‌ರತ್ತ




ಮೊನ್ನೆ ವಿಶ್ವ ರೆಸ್ಟೋರೆಂಟಿನಲ್ಲಿ ನಡೆದ ಮಹಿಳೆಯ ಕೊಲೆಯು ಟೌನ್ ಪೊಲೀಸ್ ಸ್ಟೇಶನ್ ವ್ಯಾಪ್ತಿಗೆ ಬರುತ್ತದೆ. ಅಲ್ಲಿಗೀಗ ಕೆ.ಸಿ.ಪ್ರಕಾಶ್ ಎಂಬ ಇದ್ದುದರಲ್ಲಿಯೇ ದಕ್ಷ ಮತ್ತು ಉತ್ತಮ ಎನ್ನಬಹುದಾದ ವ್ಯಕ್ತಿ ಸಿಪಿಐ ಆಗಿ ಬಂದಿದ್ದಾರೆ. ಇವರು ಎಲ್ಲರಂತಲ್ಲ ಎಂಬ ಭಾವನೆ ಜನರಲ್ಲಿದೆ. ಅದಕ್ಕೂ ಕಾರಣ ಇಲ್ಲದಿಲ್ಲ.


ಇವರು ಈ ಹಿಂದೆ ಗಜೇಂದ್ರಗಡದಲ್ಲಿ ಪಿಎಸ್‌ಐ ಆಗಿದ್ದರು. ಅಲ್ಲಿನ ಕಳಕಪ್ಪ ಬಂಡಿ ಎಂಬ ಚಡ್ಡಿ ಶಾಸಕ 'ಜಮಾಲ್ ಶಾವಲಿ' ಎಂಬ ಸೂಫಿ ಸಂತನ ದರ್ಗಾ ಕೆಡವಿ, ಆ ಜಾಗದಲ್ಲಿ ಯಾರಿಗೂ ಬೇಡವಾಗಿದ್ದ ಪಾರ್ಕ್ ನಿರ್ಮಿಸಲು ಹೋಗಿದ್ದ. ಆಗ ಇದೇ ಕೆ.ಸಿ.ಪ್ರಕಾಶ್ ಎಲ್ಲಾ ಒತ್ತಡಗಳನ್ನು ಮೀರಿ ಎಮ್ಮೆಲ್ಲೆ ಕಳಕಪ್ಪ ಬಂಡಿಯ ಚಡ್ಡಿ ಕಳಚಿದ್ದರು. ಸೂಫಿ ಸಂತರ ಗೋರಿಗಳಿರುವ ಆ ದರ್ಗಾದ ರಕ್ಷಣೆಗೆ ನಿಂತು ಕೋಮುವಾದಿಗಳನ್ನು ನಿಗ್ರಹಿಸಿದ್ದರು. ಒಂದು ಹಂತದಲ್ಲಿ ಕೋಮುಗಲಭೆಯಾಗುವ ಸಂದರ್ಭ ಎದುರಾದಾಗ ಖುದ್ದು ಒಂದಿಷ್ಟು ಪೊಲೀಸರನ್ನು ಕಟ್ಟಿಕೊಂಡು ದರ್ಗಾದ ಕಾವಲಿಗೆ ನಿಂತುಬಿಟ್ಟಿದ್ದರು.

ಇಂಥ ಆದರ್ಶ ಮತ್ತು ದಕ್ಷ ಪೊಲೀಸ್ ಅಧಿಕಾರಿಯ ಟೇಬಲ್ಲಿಗೆ ಪ್ರಸ್ತುತ ವಿಶ್ವ ರೆಸ್ಟೋರೆಂಟ್ ಕೊಲೆಯ ಫೈಲು ಬಂದಿದೆ. ಗಜೇಂದ್ರಗಡದಲ್ಲಿಯಂತೆಯೇ ಇಲ್ಲಿಯೂ ಕೂಡ ಅವರು ದಕ್ಷತೆ ಮತ್ತು ನಿಷ್ಪಕ್ಷಪಾತತೆಯನ್ನು ಮೆರೆದರೆ ಅಪರಾಧಿಗಳನ್ನು ಹಿಡಿಯುವುದು ಕಷ್ಟವೇನಲ್ಲ. ಈ ವೇಶ್ಯಾವಾಟಿಕೆ ಅಡ್ಡೆಗಳ ಮಾಲಿಕರಾಗಿರುವ ಶೆಟ್ಟಿಗಳನ್ನು ಲಾಕಪ್ಪಿನಲ್ಲಿ ಹಾಕಿ ತದುಕಿದರೆ ಎಲ್ಲಾ ಸರಿಹೋಗುತ್ತೆ.

ಪ್ರಕಾಶ್ ಗದುಗಿನ ಜನರ ನಿರೀಕ್ಷೆಯನ್ನು ನಿರಾಶೆಗೊಳಿಸುವುದಿಲ್ಲ ಎಂದುಕೊಳ್ಳೋಣ. ■







ಸಂತೋಷದ ಸುದ್ದಿ

ನಿಮ್ಮೆಲ್ಲರೊಂದಿಗೆ ಒಂದು ಪುಟ್ಟ ಮತ್ತು ಸಂತೋಷದ ಸುದ್ದಿ ಹಂಚಿಕೊಳ್ಳಬೇಕೆನಿಸುತ್ತಿದೆ. ಇವತ್ತಿನ (ಭಾನುವಾರ, ಅಕ್ಟೋಬರ್ 5) ಕನ್ನಡಪ್ರಭ ಪುರವಣಿಯಲ್ಲಿ ಸಪ್ನ ಬುಕ್ ಹೌಸ್‌ನವರು ಅತಿಹೆಚ್ಚು ಬೇಡಿಕೆ ಇರುವ 'ಟಾಪ್ 10' ಪುಸ್ತಕಗಳ ಪಟ್ಟಿ ಮಾಡಿದ್ದಾರೆ. ಆ ಪಟ್ಟಿಯಲ್ಲಿ ನಮ್ಮ ಗ್ರೇಟ್ ಪ್ರಕಾಶನದ, ಎ.ಎನ್. ಆಂಜನಪ್ಪ ಬರೆದಿರುವ 'ಮೆಂಟಲ್ ಎಬಿಲಿಟಿ' ಪುಸ್ತಕ ಮೊದಲನೆ ಸ್ಥಾನದಲ್ಲಿದ್ದು ಅದರ ನಂತರ ನಮ್ಮ ಲಂಕೇಶ್ ಪ್ರಕಾಶನದ ಡಾ.ಎಂ.ಬಿ. ರಾಮಮೂರ್ತಿ ಅನುವಾದಿಸಿರುವ ಖುಶವಂತ್ ಸಿಂಗ್‌ರವರ ಕಾದಂಬರಿ 'ಟ್ರೈನ್ ಟು ಪಾಕಿಸ್ತಾನ್' ಇದೆ. ಅದೇ ಪಟ್ಟಿಯಲ್ಲಿ ಅಪ್ಪನ 'ಕಲ್ಲು ಕರಗುವ ಸಮಯ' ಕೂಡ ಇದೆ.

ನಮ್ಮ ಲಂಕೇಶ್ ಪ್ರಕಾಶನ ಪ್ರಾರಂಭವಾಗಿ ಕೇವಲ ಎರಡು ವರ್ಷಗಳಾಗಿವೆ. ಗ್ರೇಟ್ ಪ್ರಕಾಶನ ಶುರುವಾಗಿ ನಾಲ್ಕು ತಿಂಗಳೂ ಆಗಿಲ್ಲ. ಆದರೆ ಟಾಪ್ 10 ಪಟ್ಟಿಯಲ್ಲಿ ನಮ್ಮ ಮೂರು ಪುಸ್ತಕಗಳಿವೆ ಎಂದರೆ ಸಂತೋಷ ಆಗದೆ ಇರುತ್ತದೆಯೇ. ನಿಮ್ಮೆಲ್ಲರ ಬೆಂಬಲ ಮತ್ತು ಪ್ರೋತ್ಸಾಹದಿಂದಲೇ ನಾವಿಷ್ಟು ದೂರ ಬಂದಿದ್ದೇವೆ. ನಿಮಗೆಲ್ಲ ಧನ್ಯವಾದಗಳು.

■ ಗೌರಿ

ವಿಧಾನಸೌಧ ನೋಡಿದ್ರೆ ಯಾಕೊ ಭಯ ಕಣೊ ನಂಗೆ

ಕಾಳಮಾವನ ಆತಂಕ ನಿಜವಾಗಿ ಹೋಯ್ತು. ರಾಗಿಪೈರು ಗರ್ಭ ಕಟ್ಟುವ ಸಮಯಕ್ಕೆ ಸರಿಯಾಗಿ ಮಳೆ ಕೈ ಕೊಟ್ಟಿತು. ಇನ್ನು ಬೆಳೆದ ಹೊಲದ ಬಗ್ಗೆ ಯಾವ ಭರವಸೆಯನ್ನು ಇಡುವಂತಿರಲಿಲ್ಲ. ಆದ್ದರಿಂದ ಅವನಿಗೆ ಯಾವ ವಿಷಯ ಕುರಿತು ಮಾತನಾಡಲೂ ಉತ್ಸಾಹವಿರಲಿಲ್ಲ. ಆದರೆ ಸೀರ ಯಾವುದಕ್ಕೂ ಕೇರ್ ಮಾಡದವನು. ಆದ್ದರಿಂದ ಮಾತನಾಡುತ್ತಲೇಯಿದ್ದ.

ಕಟ್ಟೆಪುರಾಣ
ಬಿ. ಚಂದ್ರೇಗೌಡ

"ಹಬ್ಬಕ್ಕೆ ನಂಟ್ರ್ಯಾರು ಬಂದಿದ್ರುಲೆ ಜುಮ್ಮಿ?" ಎಂದ.

"ನಂಟ್ರೆಲ್ಲಿ ಬಂದರೊ ಮಾವ ಈಗ? ನಂಟ್ರು ಕಾಲ ಮುಗಿತು. ಈಗೇನಿದ್ರು ಸೇಯಿಂತ್ರು, ಅವುರು ಇವುರು ಅಂತ ಬತ್ತರೆ."

"ನಿಜ ಕಂಡ್ಯೆ ಜುಮ್ಮಿ. ಆಗ ನನ್ನಮನಿಗೆ ಏಸೂರಿಂದ ನಂಟ್ರು ಬರೋರು ಅಂತೀ? ಮ್ಯಳಳ್ಳಿಂದ ಬರೋರು, ಈ ಕಡೆ ಮಂಗರವಳ್ಳಿಯಿಂದ, ತುರುಬನಳ್ಳಿಯಿಂದ ಹಿಂಡು ಗಟ್ಟಿಗಂಡು ಬರೋರು. ನಮ್ಮನಿಯೋಳಂತು ಅವುರು ಹೋಯ್ತಿನಿ ಅಂದ್ರು ಕಳುಸ್ತಿರಲಿಲ್ಲ. ನಾನು ಮನಿಗೆ ಬಂದ ನಂಟ್ರು ಕೈಲೆ ಸೊಸಿರಾಗಿ ನಾಟ ಮಾಡ್ಸಿ ಕಳುಸ್ತಿದ್ದೆ" ಎಂದು ಸೀರ ನಕ್ಕ.

"ನಿಜ ಕಣ ಮಾವ. ಇದ್ದಕ್ಕಿದ್ದಂಗೆ ನಂಟ್ರು ಮ್ಯಾಗಲ ಅಕ್ಕರೆನೆ ವಂಟೋಯ್ತು. ಅದ್ಯಾಕ್ ನನಿಗಂಗಾಯ್ತೊ ಏನೊ?" ಎಂದಳು ಜುಮ್ಮಿ.

"ನಿನಿಗೊಬ್ಬಳಿಗೆ ಅಂಗಲ್ಲ ಕಣೆ, ಇಡೀ ದೇಸಕೆ ಅಂಗಾಗ್ಯದೆ. ಸಮಂದಗಳು ವಂಟೋಯ್ತಾ ಅವೆ" ಎಂದ ಉಗ್ರಿ.

"ಅಂಗರ್‍ಯಲ್ಲಾರಿಗೂ ಬಂದಿದ್ದತೆ ಮಲ್ಲಾಗ್ರು?"

"ಊ ಕಣೆ, ಈಗ ನಮ್ಮನೆನೆ ತಗೊ. ವಂಬತ್ತು ಮೈಲಿ ದೂರ ಯಿರೊ ಮೂಡ್ಳುಕೊಪ್ಪಲಿಗೋಗಿ ಪಕ್ಷಕ್ಕೆ ಕರುದು ಬತ್ತಿದ್ವೊ. ನಮ್ಮ ರಾಮ್ಮಾವ ಅವುನಮಕ್ಕಳು ಕಟ್ಟಿಗಂಡು ಅಂಗೆ ಹುಲಿಮರಿಕರಕಂಡು ಬಂದಂಗೆ ಬರೋನು. ಸುಮಾರು ಐದಾರು ಮನೆ ಉಣ್ಕೊನು. ಹೋಗುವಾಗ ಅವುನೂ ಹಬ್ಬಕ್ಕೆ ಕರಿಯನು. ನಾವು ಹೋಗಿ ಬತ್ತಿದ್ವೊ. ಈಗ ಅವನ ಮನೆಮುಂದೆ ಬಸ್ಸೊದ್ರು, ನಾವು ಹೋಯ್ತಾಯಿಲ್ಲ, ಅವುನು ಬರಕುಲ್ಲ, ಸಮಂದಗಳೇ ಸಡ್ಯಾಗ್ಯವೆ."

"ಹೋಗ್ಲಿ ಬುಡ್ಡ, ನಂಟ್ರೊಂದ ಯಾವನಾರ ಉದ್ದಾರಾಗಿದ್ದನೆ? ಎಂದ ಸೀರ.

"ಇದೇನೊ ಮಾವ ಹಿಂಗಂತೀ? ನಮ್ಮ ಕಾಳಮಾವ ಗೋರಿಕೊಪ್ಪಲಿಂದ ಹೆಣ್ಣುತಂದು ಮ್ಯಾಲೆ ಅವುರಮನೆ ಎತ್ತು ಬಂದು ಇವುರ ವಲ ಹುತ್ತು ಹೋಗವು. ಇವುರೆತ್ತು ಹೋಗಿ ಅವುರ ವಲಹುತ್ತು ಬರವು. ಅಷ್ಟುಮಟ್ಟಿಗೆ ನಂಟುಸ್ತನ ನ್ಯಡಿಯದು. ಹಸಕರ ಈದ್ರೆ ಗಿಣ್ಣಾಲು ಕಳುಸೋರು, ವಡೆಕಜ್ಜಾಯ ಕಳುಸೋರು. ಅದ್ಯಲ್ಲ ಹೋಗೇ ಬುಡ್ತಪ್ಪ"


"ಹೋಯ್ತು ಅಂದ್ರೆ, ಕಾಲವೆ ಕೆಟ್ಟೊಗ್ಯದಲ್ಲಾ ಏಮಾಡಿ?" ಎಂದ ಕಾಳಮಾವ.

"ಕಾಲಂಗೇ ಅದೆ, ಜನಕಟ್ಟವುರೆ ಕಣಮಾವ."

"ಕಾಲಕ್ಕೆ ತಕ್ಕಂಗೆ ಅವುರು ಬದ್ಲಾಗ್ಯವುರೆ ಕಂಢ. ಆದ್ರು ಜನ ಆಡೊ ಅವುತಾರ ನೋಡಿದ್ರೆ ಇವು ಉದ್ದಾರಾಗದಿಲ್ಲ ಬುಡು."

"ಜನ ಬದ್ಲಾಗಿರದ್ರಿಂದ್ಲೆ ನಡವಳಿಕೆ ವಂಟೋಗ್ಯವೆ ಕಣಮಾವ. ಈಗ ಬಾವುಣಕೆನೆ ಇಲ್ಲದ ಜಾಗಕ್ಕೆ ಯಾರು ಬತ್ತರೆ?"

"ನಿಜ. ಆಗ ಮೈಸೂರಿಂದ ಬಸವಯ್ಯ ಬರೋನು. ಅದು ನಾಗಮಂಗಲದಲ್ಲಿ ಇಳುದು ಹನ್ನರಡು ಮೈಲಿ ನ್ಯಡಕಂಡು ಬರೋನು. ಬೇಕಾದೋಟು ಬಾಡು ತಿಂದು ಹೋಗನು. ಅವುನು ಹೋಯ್ತಿನಿ ಅಂದ್ರು ಸಾಕು



ನಾಳಿಕ್ಕೋಗಿವೆ ಅಂತ ತಡದು ಬುಡತಿದ್ವೊ. ದಸರಾ ನೋಡಕ್ಕೋದ್ರೆ, ಅವುನ ಮನೆಲೆ ಇದ್ದು ಜಂಬೂ ಸವಾರಿ, ಕಾಸುಬಂಗ್ಲಿ, ತಮಾಸ್‌ಬಂಗ್ಲಿ, ಚಾಮುಂಡಿ ಬೆಟ್ಟನ್ಯಲ್ಲ ನೋಡಿಕಂಡು ಬರವು. ಅದೇ ಇವತ್ತಂಗೆ ಹೋಗಕ್ಯಾದತೆ?" ಎಂದ ಕಾಳಮಾವ.

"ನಾನಂತು ಯಾವತ್ತು ಮಾರಾಜನ್ನ ಅಂಬಾರಿಯಿಂದ ಇಳಿಸಿದ್ರೊ ಅದೇ ಕಡೆ, ಇನ್ನ ದಸರ ನೋಡಕ್ಕೆ ಅಂತ ಹೋಗಲಿಲ್ಲ" ಎಂದ ಸೀರ.

"ಆಗಿನ ಕಳೇವು ಎಲ್ಲಿ ಬಂದತ್ಲ ಈಗ? ಅರಮನಿಗೂ ಆ ಕಳೇವಿಲ್ಲ ಈಗ" ಎಂದ ಕಾಳಮಾವ.

"ಅದೇನೊ ಕಲರ್ ಲೈಟಾಕಿದ್ದರಂತೆ ಕಣಮಾವ ಈಗ."

"ಯಂತಾ ಲೈಟಾಕಿದ್ರು ವಳಗೆ ಮಾರಾಜ ಇಲ್ಲ ಅಂದ್ರೆ, ಯಂತಾ ಅರಮನಿಯು ಸತ್ತೋರಮನೆಯಂಗೆ ಕಾಣ್ತದೆ ಕಂಢ."

"ಈಗ್ಲು ವಳಗೆ ಶ್ರೀಕಂಠದತ್ತ ಅವುನೆ ಕಣಮಾವ."

"ಅವುನ ತಗಂಡೇನು ಮಾಡೀ? ಅವುನವುನೆ ಅಂತ ಅರಮನೆ ನೋಡಕ್ಯಾದತೆ?"

"ಏನೇ ಆಗ್ಲಿ ದ್ವಡಪ್ಪ ಇವತ್ತಿಗೂ ವಿಧಾನಸೌಧಕ್ಕಿಂತ ಅರಮನೆ ಚೆನ್ನಾಗಿ ಕಾಣ್ತದೆ" ಎಂದುಕೊಂಡು ವಾಟಿಸ್ಸೆ ಬಂದ.

"ವಿಧಾನಸೌಧ ಕಟ್ಟದೋರು ರಾಜಕಾರಣಿಗಳು. ಅರಮನೆ ಕಟ್ಟದೋರು ಮಾರಾಜರು. ಅದಕೆ ಅರಮನೆ ಇವತ್ತಿಗೂ ಚನಾಗ್ಯದೆ ಕಣೊ" ಎಂದ ಉಗ್ರಿ.

"ಚನಾಗಿರೊ ಮಾತಲ್ಲ ಕಣೊ ಹೇಳ್ತಾಯಿರದು ನಾನೂ. ವಿಧಾನಸೌಧ ನೋಡಿದ್ರೆ ಏನೊ ಒಂಥರಾ ಮನಸಿಗೆ ಸಮಾಧಾನ ಆಗಬೇಕಾಗಿತ್ತು. ಆದ್ರುಬದ್ಲು ಅಲ್ಲಿ ಇರೋ ಜನ ನ್ಯನಿಸಿಗಂಡ್ರೆ ಸಿಟ್ಟು, ಭಯಯೆಲ್ಲ ಒಂದೇ ಸತಿ ಉಕ್ಕಿ ಬತ್ತದಲ್ಲ, ಇದ್ಯೇನು ಮಾಡನ? ಟೋಟಲ್ಲಿ ವಿಧಾನಸೌಧ ನೋಡಿದ್ರೆ ಭಯ."

"ಇಧಾನಸೌಧ ನೋಡಿದ್ರೆ ನಿನಿಗ್ಯಾಕ್ಲ ಹೆದ್ರಿಕೆ?"

"ನೋಡಕ್ಯ ಅದರೊಳಗೆ ನಮ್ಮ ಸುತ್ತಮುತ್ತಯಿರೊ ಭೂಮಿ ನುಂಗೊ ಜನ ಅವುರೆ. ಗಣಿನ್ಯಲ್ಲ ಗೋರಿ

ದೇವರ ಕೆಲಸವೇ ಸರ್ಕಾರದ ಕೆಲಸ

ಇತ್ತೀಚೆಗೆ ಕಾರ್ಯನಿಮಿತ್ತ ವಿಧಾನಸೌಧಕ್ಕೆ ಹೋಗಿದ್ದೆ. ಯಾಕೋ ಅಪರಿಚಿತ ಸ್ಥಳಕ್ಕೆ ಬಂದ ಅನುಭವ ಆಯಿತು. ಮಹಿಳೆಯರು ಹಣೆಗೆ ಕುಂಕುಮ ಇಡುವುದು ಸಂಪ್ರದಾಯ. ಕೆಲವು ಪುರುಷರು, ಅಂಥ ಸುಷ್ಮಾ ಸ್ವರಾಜ್‌ಗೇ ನಾಚಿಕೆಯಾಗಬೇಕು ಆ ರೀತಿ, ಢಾಳಾಗಿ ಕಾಣುವಂತೆ ಕುಂಕುಮಧಾರಿಗಳಾಗಿದ್ದರು. ಇನ್ನು ಕೆಲವರ ಮುಖಾರವಿಂದ ಅಡ್ಡಡ್ಡ ಬಳಿದಿದ್ದ ವಿಭೂತಿಯಿಂದ ರಾರಾಜಿಸುತ್ತಿತ್ತು. ಸಿನಿಮಾಗಳಲ್ಲಿ ತೋರಿಸುತ್ತಾರಲ್ಲ ರೌಡಿಗಳು ಆ ಚಹರೆ ಹೊತ್ತ ಕೆಲವರು ಹಣೆ ಮೇಲೆ ಉದ್ದುದ್ದ ನಾಮ ಬಳಿದುಕೊಂಡು ಢಿಕಾವಾಗಿ ಓಡಾಡುತ್ತಿದ್ದರು. ಚಳಿಗಾಲವಾಗಿದ್ದರೂ ಕೆಲವರು ಸೀಥ್ರೂ ಅಂತಾರಲ್ಲ ಅಂತ ಉಡುಪಿನಲ್ಲಿ ಮೆರೆಯುತ್ತಿದ್ದರು. ಇದೇನು ವೆದರ್ ಪ್ರೂಫ್ ಬಟ್ಟೇನ, ನಡುಗಿಸುವ ಚಳಿಯಲ್ಲೂ ಇದನ್ನು ತೊಟ್ಟಿದ್ದಾರಲ್ಲ ಅಂತ ಕೇಳಿದ್ದಕ್ಕೆ ಯಾರೋ ಹಂಗಲ್ಲಾ ರೀ ತಮ್ಮ ಜಾತಿಯ ಲಾಂಛನ ಎದ್ದು ಕಾಣಲಿ ಅಂತಾವ ಎಂದು ಹೇಳಿ ನನ್ನ ಅಜ್ಞಾನಕ್ಕೆ ಅಚ್ಚರಿಗೊಂಡರು.

ಹಿಂದೆಲ್ಲ ವಿಧಾನಸೌಧಕ್ಕೆ ಹೋಗುವವರು ಜೇಬಿನಲ್ಲಿ ಚಿಲ್ಲರೆ ಇದೆಯ ಅಂತ ಖಾತರಿ ಮಾಡಿಕೊಳ್ಳುತ್ತಿದ್ದರಂತೆ. ಅದು ಇದ್ದರೆ ಕಾವಲುಗಾರನನ್ನು ಪ್ರಸನ್ನಗೊಳಿಸುವುದು ಸಲೀಸು. ಅಂದಮೇಲೆ ಆಗಬೇಕಾದ ಕೆಲಸ ಆಗುತ್ತೆ ಅಂತ ಅನುಭವಸ್ಥರು ಹೇಳುತ್ತಿದ್ದರು. ಈಗ ಕಾಲ ಬದಲಾಗಿದೆ. ಹಣದುಬ್ಬರ ನೋಡಿ, ಪ್ರಸನ್ನಗೊಳಿಸುವ ರೇಟೂ ಏರಿದೆ. ಏನಿದ್ದರೂ ಹತ್ತರ ಮೇಲಿನ ಗರಿಗರಿ ನೋಟು ಕೈ ತಟಾಯಿಸಿದರೆ ದ್ವಾರಪಾಲಕರ ಕೃಪಾಕಟಾಕ್ಷ ನಮ್ಮತ್ತ ಹರಿಯುವುದು ಅಂತ ಯಾರೋ ಬುದ್ಧಿ ಮಾತು ಹೇಳಿದ್ದರು. ಬಾಗಿಲಿನಲ್ಲೇ ಈ ಪಾಟ ಸುರಿದ ಮೇಲೆ ಇನ್ನು ಗರ್ಭಗುಡಿಯಲ್ಲಿ ಇನ್ನೇನು ಕಾದಿದೆಯೋ ಅಂತ ದಿಗಿಲೇ ಆಯಿತು. ಆದರೂ ಕಾರ್ಯವಾಸಿ ಕಾಲುಕಟ್ಟಲೇಬೇಕಲ್ಲ, ಜೇಬು ಭದ್ರವಾಗೇ ಇರಬೇಕಲ್ಲ ಅಂತ ಯಥಾಯೋಗ್ಯತೆ ದಕ್ಷಿಣೆಯನ್ನು ಇಟ್ಟುಕೊಂಡೇ ಇದ್ದೆ ಅನ್ನಿ.

ಇಷ್ಟೆಲ್ಲ ಪೂರ್ವ ತಯಾರಿ ಮಾಡಿಕೊಂಡು ಹೋಗಿದ್ದರೂ ಸಂಬಂಧಿಸಿದ ಯಾರೂ ನನ್ನ ಕಡೆ ಗಮನ ಹರಿಸಿದಂತೆ ಕಾಣಲಿಲ್ಲ. ಮಲ್‌ಬಟ್ಟೆ ಹಾಕ್ಕೊಂಡು ಒಳಗಿನ ದಾರ, ಅದಕ್ಕಿರುವ ತೂಕ ಎದ್ದು ಕಾಣುವಂತೆ ಬಂದಿದ್ದರೆ ಪಸಂದ್ ಇತ್ತಲ್ಲ ಅನ್ನಿಸಿತು. ಇದು ಹೇಗಾದರೂ ಇರಲಿ. ಅಲ್ಲೇ ಠಳಾಯಿಸುತ್ತಿದ್ದ ದುಂಡು, ಉದ್ದ, ಅಡ್ಡ ನಾಮಧಾರಿಗಳನ್ನು ಕಂಡಾಗ ಇದೇನು ಸರ್ಕಾರಿ ಕಚೇರಿ ಬಿಟ್ಟು ಯಾವುದಾದರೂ ದೇವಸ್ಥಾನಕ್ಕೆ ಬಂದೆನಾ ಅನ್ನೊ ಅನುಮಾನ ಬಂದದ್ದಂತೂ ದಿಟ.

ಈ ಹೊಸ ಅವತಾರದಲ್ಲಿ ವಿಧಾನಸೌಧ ನೋಡಿದಾಗ 'ಸರ್ಕಾರದ ಕೆಲಸವೇ ದೇವರ ಕೆಲಸ' ಅಂತ ಕೆಂಗಲ್ ಹನುಮಂತಯ್ಯನವರು ಕೆತ್ತಿಸಿದ್ದನ್ನು 'ದೇವರ ಕೆಲಸವೇ ಸರ್ಕಾರದ ಕೆಲಸ' ಅಂತ ಬದಲಾಯಿಸಬಹುದಾ ಅನ್ನೊ ಅನುಮಾನ ಬಂತು. ಯಾಕೆಂದರೆ ಇತ್ತೀಚಿನ ದಿನಗಳಲ್ಲಿ



work is workship ಅನ್ನೋದು ವರ್ಷಿಪ್ ಮಾಡುವುದೇ ವರ್ಕಾಗಿದೆಯಲ್ಲ ನಮ್ಮ ರಾಜಕಾರಣಿಗಳಿಗೆ ಅದಕ್ಕೆ.

ಮುಖ್ಯಮಂತ್ರಿಯವರು ಮೈಸೂರಿನಲ್ಲಿರುವುದು ತಿಳಿಯಿತು. ಪ್ರಭಾವಿ ಜಿಲ್ಲಾ ಉಸ್ತುವಾರಿ ಮಂತ್ರಿಯ ಹೃದಯ ತುಂಬಿದ ಆಹ್ವಾನ. ಕಳೆದ ಸಾಲಿನಲ್ಲಿ ದಿಢೀರನೆ ಕಾಣಿಸಿಕೊಂಡ ಅನಾರೋಗ್ಯ ಯಾರ ಪುಣ್ಯ ವಿಶೇಷದಿಂದಲೋ ಈ ವರ್ಷ ಕಾಣಿಸಿಕೊಳ್ಳಲಿಲ್ಲವಾಗಿ ದಸರಾ ಉತ್ಸವದ ಉದ್ಘಾಟನೆಗೆ ದಯ ಮಾಡಿಸಿರುವ ಶತಾಯುಷಿ ಡಾ. ಶಿವಕುಮಾರಸ್ವಾಮಿಗಳ ದಿವ್ಯ ಸಾನ್ನಿಧ್ಯ, ಜೊತೆಗೆ ತಾಯಿ ಚಾಮುಂಡೇಶ್ವರಿಯ ಪೂಜೆ ಮಾಡುವ ಸದವಕಾಶ. ಇಂತಹ ಧಾರ್ಮಿಕ ಸಂದರ್ಭಗಳನ್ನು ಕಳೆದುಕೊಂಡವರುಂಟೆ! ದೇವರ ಕೆಲಸವೇ ಸರ್ಕಾರದ ಕೆಲಸ ಅಲ್ಲವೆ. ಮುಖ್ಯಮಂತ್ರಿಯವರ ಉಪಸ್ಥಿತಿ ಸಹಜವಾಗೇ ಇತ್ತು. ಈ ಹಿಂದೆ ಯಾವ ಮುಖ್ಯಮಂತ್ರಿಯೂ ಉದ್ಘಾಟನಾ ಸಮಾರಂಭಕ್ಕೆ ಹಾಜರಿರಲಿಲ್ಲವಂತೆ. ಇಂತಹ ಒತ್ತಾಸೆ, ಆಕರ್ಷಣೆ ಅವರಿಗೆ ಇಲ್ಲದಿರಬಹುದು!

ಇನ್ನೇನು ಬಂದದ್ದು ಆಗಿದೆ. ಬಂದ ಕೆಲಸವಂತೂ ಆಗುವ ಲಕ್ಷಣ ಕಾಣಲಿಲ್ಲ, ಹೋಗಿ ಬರುವವರ ನೋಡುತ್ತಾ ಮಜಾ ತಗೊಳ್ಳೋಣ ಅಂತ ಅಲ್ಲೇ ಠಳಾಯಿಸುತ್ತಿದ್ದೆ. ಅಲ್ಲಲ್ಲಿ ಕೆಲವರು ಗುಸುಗುಸು, ಪಿಸುಪಿಸು ಅಂತಾವ ಗುಂಪು ಸೇರಿದ್ದರು. ನಾನು ಎಲ್ಲೋ ನೋಡುವಂತೆ ನಟಿಸುತ್ತಾ ಅವರ ಪಿಸುಪಿಸುಮಾತಿಗೆ ಮೈಯೆಲ್ಲ ಕಿವಿಯಾದೆ.

ಅವರ ಮಾತಿನ ಸಾರಾಂಶ ಇದು:

ಅತ್ತೇದ ಅಳಿಯದಾನ ಮಾಡಿದಂಗೆ ಯಡ್ಯೂರಪ್ಪ ಮೇವರಿಕ್ ಸಂಸ್ಥೆಗೆ ಹದಿನೇಳು ಎಕರೆ ಭೂಮಿಯನ್ನು ದಾನ ಮಾಡಿದ್ದರಂತೆ. ಆ ಜಾಗ ಪಡೆಯಲು ಸಂಸ್ಥೆಯ ಅಧ್ಯಕ್ಷ ಉದಯ್ ಗರುಡಾಚಾರ್ ಶ್ಯಾನೆ ಶ್ರಮಪಟ್ಟಿದ್ದನಂತೆ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗಲೇ ಅದನ್ನು ಲಪಟಾಯಿಸಲು ಮುವ್ವತ್ತು ಕೋಟಿ ಕೊಡಲು ಮುಂದೆ ಬಂದಿದ್ದನಂತೆ. ವ್ಯವಹಾರ ಕುದುರಲಿಲ್ಲ, ಹಣದ ಉಬ್ಬರ ನೋಡಿ. ಈಗ ಮುವ್ವತ್ತೇ ಐವತ್ತು ಆಗಿದೆ. ಕೊಡೋನು ಕೊಟ್ಟ, ಮುಗುಮ್ಮಾಗಿರೋದು ಬೇಡವಾ. 'ದೇವರ ವರ ಪಡೀಬೇಕಾದರೆ ಪೂಜಾರಿಗೆ ದಕ್ಷಿಣೆ ಕೊಡಲೇಬೇಕು' ಅಂತ ಅಂದುಬಿಡೋದ. ಇದೂ ಹಾಳಾಗಲಿ ಅಂದರೆ ಆ ಕುಮಾರಸ್ವಾಮಿ ಅನ್ನೋನು ಈ ಭ್ರಷ್ಟಾಚಾರನ ಬಯಲು ಮಾಡೋದ! ಇದೇ ಮನಸ್ಸಿನಲ್ಲಿ ಕೊರೆಯುತ್ತಿತ್ತೇನೋ. ಸನ್ಮಾನ್ಯ ಮುಖ್ಯಮಂತ್ರಿಗಳು ಇದು ಧಾರ್ಮಿಕ ಕಾರ್ಯಕ್ರಮ ಅನ್ನುವುದನ್ನು ಮರೆತು 'ನಾನು ಯಾವ ತನಿಖೆಗೂ ಸಿದ್ಧ, ನನ್ನ ವಿರುದ್ಧ ಮಾತನಾಡುತ್ತಿರುವವರೆಲ್ಲ ಮೃಗಗಳು. ಅವರ ಬೊಗಳಿಕೆಗೆ ನಾನು ಬೆದರುವುದಿಲ್ಲ' ಅಂತೇನೇನೋ ಹುಚ್ಚುಚ್ಚಾಗಿ ಅರಚಿಕೊಂಡರಂತೆ. ಹಿಂಗೆಲ್ಲ ಹೇಳಿ ವಿರೋಧ ಪಕ್ಷದವರಿಂದ 'ಅದೊಂದು ಕಾಡು ಮನುಷ್ಯ', 'ನಾಲಿಗೆ ಕುಲ ಹೇಳಿತು' ಅಂತೆಲ್ಲ ಝಾಡಿಸಿಕೊಂಡರಂತೆ. ಇಷ್ಟು ಮಾತ್ರ ಅಲ್ಲದೆ ಪತ್ರಿಕಾಗೋಷ್ಠಿ ನಡೆಸಲು ಕೆಲವು ಸಚಿವರಿಗೆ ಆಜ್ಞೆನೂ ಮಾಡಿದರಂತೆ.

ನನಗೂ ಕೇಮಿರಲಿಲ್ಲವಲ್ಲ, ಬೆಂಗಳೂರಿನ ಪತ್ರಿಕಾಗೋಷ್ಠಿ ಅಂದರೆ ಸಾಮಾನ್ಯವಾಗಿ ಎಂತೆಂತಹದ್ದೋ ಮೇಧಾವಿಗಳು ಬಂದಿರ್ತಾರೆ. ಅವರನ್ನ ಹೆಂಗೆ ನಿಭಾಯಿಸುತ್ತಾರೆ ಅನ್ನೊ ಕುತೂಹಲ. ನಾನೂ ವರದಿಗಾರರ ಗುಂಪಿನಲ್ಲಿ ಗೋವಿಂದ ಆದೆ.

ಐವರು ಮಂತ್ರಿಗಳು ಬಂದರು. ಎಲ್ಲಾ ಭಾರಿ ಭಾರಿ ಕುಳಗಳೇ. ಜಾತಿ ಪ್ರಾತಿನಿಧ್ಯದ ಮೇಲೆ ಇವರನ್ನು ಆಯ್ಕೆ ಮಾಡಿದ್ದಾರಾ ಅನ್ನೊ ಅನುಮಾನ ಬಂತು. ಯಾಕೆಂದರೆ ಮಂತ್ರಿಗಳಲ್ಲಿ ವೀರಶೈವ, ಒಕ್ಕಲಿಗ, ಕುರುಬ, ನಾಯ್ಡು, ದಲಿತ ಜನಾಂಗದವರಿಗೆ ಸೇರಿದ್ದವರಿದ್ದರು. 'ಇವರನ್ನೇ ಯಾಕೆ ಆಯ್ಕೆ ಮಾಡಿದಾರೆ' ಅಂತ ಪಕ್ಕದಲ್ಲಿದ್ದವರನ್ನು ಕೇಳಿದೆ. 'ಇವರೆಲ್ಲ ಯಡ್ಯೂರಪ್ಪ ವಿರೋಧಿಗಳು ಅದ್ಕೆ' ಅಂದ ಅವ. 'ಮತ್ತೆ ನಾಗಾಲೋಟದಲ್ಲಿ ಅಭಿವೃದ್ಧಿ ಆಗ್ತಿದೆ. ಅದನ್ನು ಸಹಿಸಲಾರದೆ ಭ್ರಷ್ಟಾಚಾರದ ಆರೋಪ ಮಾಡ್ತಿದಾರೆ ಅಂತೆಲ್ಲ ಹೇಳಿ ಸಮರ್ಥಿಸಿಕೊಳ್ಳಬೇಕಲ್ಲಾ'

ಅನಾಕ
ಎಚ್.ಎಲ್. ಕೇಶವಮೂರ್ತಿ

ಕೇಳಿದೆ. 'ಪತ್ರಿಕಾ ಹೇಳಿಕೆ ಸಿದ್ಧ ಆಗಿದೆ. ಅದನ್ನು ಓದುವುದಷ್ಟೇ ಇವರ ಕೆಲಸ' ಅಂದ ಅವ. ಇರಬಹುದು. ಘಟಾನುಘಟಿ ಮಂತ್ರಿಗಳಾದರೂ ಯಾರ ಮುಖದಲ್ಲೂ ಯುದ್ಧಕ್ಕೆ ಹೊರಟ ಸೈನಿಕರ ವೀರೋದಾತ್ತ ಕಳೆ ಇರಲಿಲ್ಲ. ಯುದ್ಧ ಮುಗಿದ ನಂತರ ರಣರಂಗದಲ್ಲಿ ಬಿದ್ದಿರ್ತವಲ್ಲ ಹೆಣಗಳು ಅವುಗಳ ಮುಖದ ಮೇಲಿನ ಕಳೆ ರಾರಾಜಿಸುತ್ತಿತ್ತು. ಅದು ಹೇಗಾದರೂ ಇರಲಿ. ಶಾಲೆಗಳಲ್ಲಿ ಮೇಷ್ಟ್ರು ಬರೆಸಿದ್ದನ್ನ ವಿಧೇಯತೆಯಿಂದ ಒಪ್ಪಿಸುತ್ತಾವಲ್ಲ ಹುಡುಗರು ಹಾಗೆ ತಮ್ಮ ಕರ್ತವ್ಯ ನಿಭಾಯಿಸಿದರು ಅನ್ನಿ.

ಐವತ್ತು ಕೋಟಿ ಲಂಚದ ಆರೋಪ ಮಾಡಿರುವ ಕುಮಾರಸ್ವಾಮಿ ಮೇಲೆ ಮಾನನಷ್ಟ ಮೊಕದ್ದಮೆ ಹೂಡ್ತೀವಿ ಅಂದರು. ಇಷ್ಟು ಕೋಟಿಗೆ ಅಂತವನೂ ಹೇಳಲಿಲ್ಲ, ಯಡ್ಯೂರಪ್ಪನವರ ಮಾನದ ಬೆಲೆ ಅಳೆದು ಸುರಿದು ನಿರ್ಧರಿಸಬಹುದು! ನನಗೊಂದು ಅನುಮಾನ ಬಂತು. ಎಂತಹದ್ದೋ ಕೇಸುಗಳನ್ನೇ ಕೋರ್ಟಿಗೆ ಹೋಗದಂತೆ

...ಮಾಡೊ ಜನ ಅವುರೆ. ಗ್ಸಬ್ಬರ ಕೇಳಿದ್ರೆ ಗೋಲಿಬಾರ್ ಮಾಡೋ ... ಅವುರೆ. ಏಕವಂ ಇಪ್ಪತ್ತು ರೂಪಾಯಿ ಬಸ್ ಚಾರ್ಜ್ ಏರಸೊ ಜನ ...ರೆ. ಕ್ವಲೆ ಮಾಡಸೊ ಜನವುರೆ. ಪೊಲೀಸನೋರ ಕೊಂಡಕಳೊ ...ವುರೆ. ಇವ್ನಲ್ಲ ಸೇರಿಕಂಡು ನನಿಗೆ ವಿಧಾನಸೌಧ ನೋಡಿದ್ರೆ ತಲೆಮ್ಯಾಲೆ ... ಕಲ್ಲುರಾಶಿ ನೋಡಿದಷ್ಟು ಭಯ ಆಯ್ತದೆ ಕಣಕ್ಕ. ಅದೇ ಅರಮನೆ ...ಡಿದ್ರೆ ಏನೊ ಒಂಥರ ಖುಷಿ, ಅಭಿಮಾನ ಯಲ್ಲ ಆಯ್ತದೆ."

"ನಾನಂತೂ ಇಧಾನಸೌಧನೆ ನೋಡಿಲ್ಲ ಕಂಡ್ರ" ಎಂದ ಕಾಳಮಾವ.

"ಗ್ರೇಟ್. ಒಳ್ಳೆದು ದೊಡಪ್ಪ, ನೀನೊಂಥರ ನಮ್ಮ ಹಳೆಕಾಲದ ...ಯಿತಿಗಳಿದ್ದಂಗೆ. ಅವುರ್‍ಯಾರು ವಿಧಾನಸೌಧದ ವಳಿಕೆ ಹೋಗಲಿಲ್ಲ, ... ಈಗಿನ ಸಾಯಿತಿಗಳು ಅಲ್ಲೇ ಬಿದ್ದು ಸಾಯ್ತರೆ."

"ಸಾಯಿತಿಗಳು ಇಧಾನಸೌದಕೆ ಹೋಗಬಾರ್ದೇನ್ನ?"

"ಅಲ್ಲೇನಕ್ಕ ಕ್ಯಲಸ ಅವುರಿಗೆ? ಅವುರ ಮನೆತಕ್ಕೆ ರಾಜಕಾರಣಿಗಳು ...ಂಗೆ ಬದಕಬೇಕೆ ವರತೂ ಇವುರೆ ವಿಧಾನಸೌಧಕೋದ್ರೆ ವ್ಯಾಲ್ಯುವೇಶನ್ ... ಕಣಕ್ಕ."

"ಅದೇನೊ ನಮಿಗೇನು ಗೊತ್ತಾದವುಲ? ಮದ್ಲೆ ನೀನು ತಲಿ ಕೆಟ್ಟೊನು, ಮಾತು ಯಾವು ನ್ಯಟ್ಟಗಿದ್ದವ್ಲೂ."

"ಅಲ್ಲಾ ಕಣೊ, ಸಾಯಿತಿಗಳು ವಿಧಾನಸೌದಕೆ ಹೋಗಬಾರ್ದು ...ತಿಯಲ್ಲಾ, ಮತ್ತೆ ಅನಂತಮೂರ್ತಿ ಹೋಗಿದ್ರಲ್ಲೊ?"

"ಅವುರು ಸೋಷಲಿಸ್ಟ್ ರಾಜಕಾರಣಿ ಕಂ ಸಾಯಿತಿ ಕಣೊ. ...ರದೊಂತರ ರಾಜಕಾರಣಿ ಅಲ್ಲದ ಸಾಯಿತಿ. ಸಾಯಿತಿಗಳು ವಿಧಾನಸೌಧಕೆ ...ಗಬಾರ್ದು."

"ಹೋಗಬಾರ್ದು ಅಂತ ಹೇಳಕ್ಕೆ ನೀನ್ಯಾರ್ಲ?"

"ನಾನು ಸಾಯಿತ್ಯಾಭಿಮಾನಿ ಕಣಕ್ಕ. ಸಾಯಿತಿಗಳ ಬಗ್ಗೆ ಇನ್ನು ಗೌರವ ...ಗಂಡಿರೋನು."

"ಅವುರಿಗೆ ಇಲ್ಲುದ್ದು ನಿನಿಗ್ಯಾಕೆ?"

"ಅದೇ ವಿಶೇಷ, ಅವುರಿಗಿಲ್ದೆಯಿರದು ಇರಬೇಕು ಅಂತ ನಾನು ...ಯ ಮಾಡ್ತಿನಿ."

"ಸಾಯಿತಿಗಳು ಜೆಡಿಎಸ್ ಪಾರ್ಟಿ ತರ ವಡದೋದರಂತಲ್ಲೊ?"

"ನಿಜ ಕಣೊ, ನಲ್ಲೂರ್ ಪ್ರಸಾದ್ ಜೆಡಿಎಸ್ ಬಣ, ವೀರಣ್ಣ ಜೆಡಿಯು ...ದಂಗಾಗ್ಯವುರೆ. ಯಾಕೊ ಜೆಡಿಯು ಬಣಕೆ ಬರ್ಕತ್ತಿಲ್ಲ ಅನ್ನಂಗೆ ಕಾಣ್ತದೆ. ...ಸ್ ದೆರೀಸ್ ನೋ ಮನಿ."

"!?" ■

...ಯಿಸಿದ್ದ ಯಡ್ಯೂರಪ್ಪನವರು ಈಗ ಕಟಕಟೇಲಿ ನಿಲ್ಲೋ ಹಾಗೆ ಆಯಿತಲ್ಲ ...ತ. ಪಕ್ಕದಲ್ಲಿದ್ದ ಅನುಭವಿ ವರದಿಗಾರ 'ಅವರು ಹೋಗಲ್ಲರಿ ಸರ್ಕಾರವೇ ...ಗುತ್ತೆ' ಅಂತ ಸಮಾಧಾನ ಹೇಳಿದ. ಅಂದರೆ ಸರ್ಕಾರದ ಭೂಮಿಯನ್ನು ...ಸಗಿಯವರಿಗೆ ಕೊಟ್ಟರು. ಅದೊಂದು ನಷ್ಟ. ಈಗಿನ್ನೂ ಸರ್ಕಾರದ ...ಕ್ಕಸದಿಂದಲೇ ಮಾನನಷ್ಟ ಮೊಕದ್ದಮೆ ಹೂಡಿದರೆ ಅದೂ ನಷ್ಟ. ...ರ್ವಜನಿಕರಿಗೆ ಗಂಟೂಪೋಯ ನಂಟೂಪೋಯ ಅಲ್ಲವಾ ಅಂತ ಅನುಭವಿ ...ಂದೆ ತೋಡಿಕೊಂಡೆ. ಅಯ್ಯೋ ಪೆದ್ದೆ ಅನ್ನುವ ರೀತೀಲಿ ನೋಡಿದ, ...ಜಕಾರಣಿಗಳ ಮಾತಂತೆ ಇದು. ಹಾಕ್ತೀವಿ ಅಂತಾರೆ, ಹಾಕಲ್ಲ ಎಂದು ...ರಣೆ ನೀಡಿದ. 'ಮತ್ತೆ ಈಗ ಹೇಳ್ತಿದ್ರಲ್ಲಾ' ಅಂದದ್ಕೆ 'ಅವೆಲ್ಲ public ...nsumption'ಗೆ ಅಂದ!

... ಇದೇನೇ ಇರಲಿ. ಆ ಮಂತ್ರಿಗಳೆಲ್ಲ ಸತ್ಯಹರಿಶ್ಚಂದ್ರನ ವಂಶದವರು ಅಂತ ...ಲೇಬೇಕು. ಯಾಕೆ ಅಂತೀರಾ ಮೈಸೂರಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ...ನು ಬಹಳ ತಾಳ್ಮೆಯಿಂದ ಇದ್ದೇನೆ. ಇಪ್ಪತ್ತು ತಿಂಗಳ ಅವಧಿಯಲ್ಲಿ ...ಮುದನ್ನೆಲ್ಲಾ ಬಿಡಿಸಿಟ್ಟು ಬೀದಿಗಿಳಿದರೆ ನಾವು 'ಒಂದು ಕಾಲದಲ್ಲಿ ಜೊತೆಯಾಗಿ ...ಕಾರ ನಡೆಸಿದ್ದೆವು ಎಂದು ಹೇಳಿಕೊಂಡು ತಿರುಗಾಡಲು ಆಗದಂಥ ...ಸ್ಥಿತಿ ನಿರ್ಮಾಣವಾಗುತ್ತದೆ' ಎಂದಿದ್ದರು. ಸುದ್ದಿಗೋಷ್ಠಿಯಲ್ಲಿ ಪಂಚ ...ಾಸಚಿವರು 'ಹಿಂದಿನಿಂದಲೂ ಏನು ನಡೆದುಕೊಂಡು ಬಂದಿದೆಯೋ ...ನ್ನೇ ನಮ್ಮ ಸರ್ಕಾರವೂ ಮುಂದುವರೆಸಲಿದೆ' ಎಂದರು! ಎಂದರೆ ...ದಿಗಿಳಿದು ನಾವು ಹೀಗೆ ಆಡಳಿತ ನಡೆಸಿದೆವು ಎಂದು ಹೇಳಿಕೊಳ್ಳಲಾಗದ ...!

...ಒಟ್ಟಿನಲ್ಲಿ ದೇವಸ್ಥಾನಗಳಲ್ಲಿ ನಡೆಯುವ ಹರಿಕಥೆಗಳಲ್ಲಿನ ಉಪಕತೆಗಳಂತೆ ...ಪತ್ರಿಕಾಗೋಷ್ಠಿಯೂ ರಂಜನೀಯ ಆಗಿತ್ತು!

...ಸತ್ಯ ಹೇಳಿದ್ದಕ್ಕೆ!

...ಮಹೇಂದ್ರ ಕುಮಾರ್ ಗೊತ್ತಲ್ವ?

...ಏನೂ ಗೊತ್ತಿಲ್ಲ! ಅದೇರೀ ಮಹಾಭಜರಂಗಿ. ಅವನು ಈಗ ಮಾಜಿ ...ಕ್ಷ ಅಂತೆ. ರಾಜ್ಯಾಧ್ಯಕ್ಷ ಸ್ಥಾನದಿಂದ ಕಿತ್ತೆಸೆಯಲಾಗಿದೆಯಂತೆ.


...ಏನು ಕಾರಣ?

...ಮಂಗಳೂರು, ಚಿಕ್ಕಮಗಳೂರುಗಳಲ್ಲಿನ ಚರ್ಚುಗಳ ಮೇಲೆ ದಾಳಿ ...ದ್ದು ನಾವೆ ಎಂದು ಹೇಳಿದ್ದಕ್ಕೆ,

...ಅವರೇ ಮಾಡಿದ್ದು, ಅದನ್ನೇ ಹೇಳಿದ. ಅದರಲ್ಲೇನು ಅಪರಾಧ?

...ವಿಶ್ವಹಿಂದೂ ಪರಿಷತ್ತು, ಭಜರಂಗದಳ ಇವುಗಳನ್ನ ನಿಷೇಧಿಸಬೇಕು ...ದು ಬಲವಾದ ಒತ್ತಡ ಕೇಂದ್ರದ ಮೇಲೆ ಬರುತ್ತಿದೆಯಂತೆ. ಚರ್ಚ್ ...ಲಿನ ದಾಳಿ ಸಂಘ ಪರಿವಾರದ ಕೈವಾಡ ಇಲ್ಲ ಅಂತ ಸಾಧಿಸೋಕೆ ...ಬಂಧಿಸಿದವರು ಪರದಾಡುತ್ತಿರುವಾಗ ಹೀಗೆ ಸತ್ಯ ಹೇಳಿದರೆ ಅವು ...ಯಮುತ್ತಾ, ಈ ಸಮಯದಲ್ಲಿ ಇಂತಹ ಸತ್ಯವನ್ನು ನುಡಿಯಬಾರದು ... ಪರಿಜ್ಞಾನ ಬ್ಯಾಡವಾ. ಅದಕ್ಕಾಗಿ! ■

ಬಿ.ಸಿ.ದೇಸಾಯಿ



ನನಗೆ ಈ ಬಿ.ಸಿ. ದೇಸಾಯಿ ಗೊತ್ತಿರಲಿಲ್ಲ; ಈತನ ಕತೆ ಓದಿದವರು, ಕಂಡವರು ನನಗೆ ಹೇಳಲಿಲ್ಲ, ಹೀಗಾಗಿ ಈ ಕತೆಗಳನ್ನು ನಾನು ಓದಿದ್ದು ಈಚೆಗೆ. ಓದಿದೊಡನೆ ಅಚ್ಚರಿ ಹುಟ್ಟಿಸಿದ್ದು ಇವರ ಕಥೆಗಳಲ್ಲಿನ 'ಸತ್ಯ'. ಬೇಕೆಂತಲೇ ಈ ಮಾತು ಬಳಸುತ್ತಿದ್ದೇನೆ. ಸಾಹಿತ್ಯ ವಿಮರ್ಶಕರು 'ಸತ್ಯ' ಪದ ಬಳಸುವುದಿಲ್ಲ, ಗಾಂಧೀಜಿ ಸತ್ಯ ಪ್ರೇಮ ಮತ್ತು ಅಹಿಂಸೆಯನ್ನು ಒಂದೇ ಎನ್ನುತ್ತಿದ್ದರು; ಸಮಯ ಬಂದಾಗ 'ಸತ್ಯ' ಮತ್ತು 'ದೇವರು' ಒಂದೇ ಎನ್ನುತ್ತಿದ್ದರು. ಪ್ರಶ್ನೆಗಳನ್ನು ಎದುರಿಸುವುದರಿಂದ ತಪ್ಪಿಸಿಕೊಳ್ಳಲು ಕೂಡಾ ಅವರು ಹೀಗೆ ಮಾಡುತ್ತಿದ್ದರು. ಆದರೆ ಗಾಂಧೀಜಿಯ ಅರ್ಥ ಮಾತ್ರ ಎಲ್ಲರಿಗೂ ಗೊತ್ತಾಗುತ್ತಿತ್ತು.


ಬಿ.ಸಿ. ದೇಸಾಯಿಯವರ ಕತೆಗಳ 'ಸತ್ಯ'-ಒಂದು ಸಂಬಂಧದಲ್ಲಿ ಅನಿವಾರ್ಯವಾಗಿ ಇರುವ ವಿಷಮತೆಯನ್ನು ತೋರಿಸುವಂಥದು- 'ಬಲಾತ್ಕಾರ' ಕತೆಯ ಎರಡು ಪಾತ್ರ ಗಮನಿಸಿ. ಒಬ್ಬಳು ಕಥನಾಯಕನ 'ಬಾಸ್'; ಈ ಬಾಸ್ ಗಂಡಸರ ಸಂಬಂಧವೇ ಬೇಡವೆಂದು ವಿಕೃತಳಾಗಿದ್ದರೂ ಸ್ವತಂತ್ರವಾಗಿರುವವಳು. ಇನ್ನೊಬ್ಬಳು ಸಂಬಂಧದ ವ್ಯತ್ಯಾಸ ಕಂಡುಕೊಂಡು ಕಾಮದ ಬೆಂಕಿ ಹತ್ತಿಸಿಕೊಂಡು ಗಂಡ ಬಣವೆಗೆ ಬೆಂಕಿ ಹತ್ತಿದಾಗ ಬೊಗಸೆಯಲ್ಲಿ ನೀರು ತರುವವನು ಎಂಬ ನಿಜ ಹೇಳುವವಳು. ಹೇಳಿಕೆಯನ್ನು ಮೀರಿದ ವಿಷಣ್ಣತೆ ಮತ್ತು ಅದನ್ನು ಹಿಡಿದಿರುವ ಮಾತುಗಳು ಈ ಕತೆಗಾರ ಕಂಡ 'ಸತ್ಯ' ಹೇಳುತ್ತವೆ.

ಈ ಅದ್ಭುತ ಕತೆಗಾರ ಚೂರುಪಾರು ಕತೆ ಬರೆದು ಕುಡಿದು, ನಿರಾಶನಾಗಿ, ದಿಕ್ಕೆಟ್ಟವನಾಗಿ... ಶ್ರೀಮಂತನಾಗಿದ್ದರೂ ದಾರಿದ್ರ್ಯದ ನೋವು ಅನುಭವಿಸಿ ಚಿಕ್ಕ ವಯಸ್ಸಿನಲ್ಲಿ ತಿಂಗಳ ಹಿಂದೆ ತೀರಿಕೊಂಡಿದ್ದು ವ್ಯಸನಕರ. ನನಗೆ ಪರಿಚಯವಿದ್ದಿದ್ದರೆ ಈತನನ್ನು ಉಳಿಸಿಕೊಳ್ಳುತ್ತಿದ್ದೆ ಎಂದು ಒಮ್ಮೊಮ್ಮೆ ಅನ್ನಿಸುತ್ತದೆ.

ಸಿಟ್ಟು, ಸೇಡನ್ನು ಕುರಿತು ಬಹಳ ಯೋಚಿಸಿದ್ದೇನೆ. ಅದಕ್ಕಿಂತ ಮುಂಚೆ ಇದಕ್ಕೆ ಸಂಬಂಧಿಸಿದ ವಿಷಯ ಕುರಿತು ಹೇಳುತ್ತೇನೆ. ನನ್ನ ಮಿತ್ರನೊಬ್ಬ ಹೇಳಿದ, "ಎಲ್ಲರನ್ನೂ ಒಂದಾಗಿಸಬೇಕು, ಎಲ್ಲರ ಹತ್ತಿರವೂ ಸ್ನೇಹದಿಂದ ಇರಬೇಕು. ನೀವು ಗಾಂಧಿ ತರಹ ಆಗಬೇಕು ಸಾರ್!"

ನಾನು ಹೇಳಿದೆ, "ಗಾಂಧಿ ತರಹ ಆಗಬೇಕು ಅಂತ ಸಾವಿರಾರು ಜನ ಆಸೆ ಪಡ್ತಾರೆ. ಆದರೆ ಆಗೋಲ್ಲ, ನಾನು ಗಾಂಧಿ ತರಹ ಆಡುತ್ತ ಹೋದರೆ ಹಾಸ್ಯಾಸ್ಪದ ವ್ಯಕ್ತಿ ಆಗ್ತೇನೆ. ಗಾಂಧಿಗಿದ್ದ ಹಿನ್ನೆಲೆ, ಸಿದ್ಧತೆ, ಉದ್ದೇಶ, ಸಂದರ್ಭ ಎಲ್ಲಾ ಬೇರೆ; ನಾನು ಅವರ ತರಹದ ನೋವಿಗೂ ಸಿದ್ಧನಿಲ್ಲ, ಬೇರೆಯವರ ತರಹದ ಸ್ವಾರ್ಥಕ್ಕೂ ಸಿದ್ಧನಿಲ್ಲ, ನೀನು ನಿನ್ನ ಸ್ನೇಹಿತನನ್ನು ನೋಡಿ ನಾನೂ ಸ್ನೇಹಿತನಾಗಬೇಕು ಅನ್ನುತ್ತೀ. ಆದರೆ ಆತನ ಗೆಳೆಯರು, ಆ ಗೆಳೆಯರ ನೀಚತನದಿಂದ ಹಿಡಿದು ಆತ ನನ್ನ ವ್ಯಕ್ತಿತ್ವಕ್ಕೆ ತರಬಹುದಾದ ಕೊಳಕು ನನ್ನಲ್ಲಿ ದಿಗಿಲು ಹುಟ್ಟಿಸುತ್ತದೆ. ಇದೆಲ್ಲ ಗೊತ್ತಿದ್ದೂ ನಾನು ಗಾಂಧಿಯಂತೆ ವರ್ತಿಸಿ ಮಂಗನಾಗುವುದು ತಪ್ಪು" ಅಂದೆ.

ಸೇಡು ಕೆಟ್ಟದು ಎಂಬುದನ್ನು ಎಲ್ಲರೂ ಬಲ್ಲರು. ಆದರೆ ಸೇಡು, ಸೆಡವನ್ನು ಪೂರ್ತಿ ಕಳೆದುಕೊಂಡವನು ಗಾಂಧಿಯಾಗುವ ಬದಲು ವಿನೋಭಾ ಆಗುವ ಅಪಾಯವೇ ಹೆಚ್ಚಾಗಿದೆ; ಗಾಂಧೀಜಿಯಲ್ಲಿ ಸಿಟ್ಟಿತ್ತು, ದ್ವೇಷವಿರಲಿಲ್ಲ, ಹಠ ಇತ್ತು, ಸೇಡು ಇರಲಿಲ್ಲ. ಅವರು ಸುಲಭವಾಗಿ ಒಂದನ್ನು ಇನ್ನೊಂದಕ್ಕೆ ತಿರುಗಿಸಬಲ್ಲವರಾಗಿದ್ದರು. ನಮ್ಮಂಥ ಸಾಮಾನ್ಯರಲ್ಲಿ ಸೇಡು ನಮ್ಮನ್ನು ಕಾಪಾಡಿಕೊಳ್ಳುವುದಕ್ಕೆ ಕೂಡಾ ನೆರವಾಗಬಲ್ಲದು. ಮೊನ್ನೆ ಅನೇಕ ತಿಂಗಳಿಂದ ನನ್ನ ವಿರುದ್ಧ ವಿಷಕಾರುತ್ತಿದ್ದವರನ್ನು ಸಹಿಸಿದೆ-ಔದಾರ್ಯದಿಂದ ಅಲ್ಲ, ಅನಿವಾರ್ಯವಾಗಿ. ಇದರಿಂದೆಲ್ಲ ನೋವನ್ನು ಅನುಭವಿಸುವುದು ಮಾತ್ರ ಸಾಧ್ಯವಿತ್ತು. ನನ್ನ ಸ್ಥಿತಪ್ರಜ್ಞ, ಸಹನೆಯ ನಿಲುವನ್ನು ಕಂಡೇ ಆ ದುಷ್ಟರಿಗೆ ತಳಮಳವಾಯಿತು, ನಾನು ತಪ್ಪು ಮಾಡುವುದನ್ನು ಅವರು ನಿರೀಕ್ಷಿಸಿದ್ದರು. ತಪ್ಪು ಮಾಡಿದೊಡನೆ ನನ್ನನ್ನು, ಪತ್ರಿಕೆಯನ್ನು ನಾಶ ಮಾಡುವ ಹುನ್ನಾರ ಅವರದು. ನಾನು ನಿರ್ಲಿಪ್ತನಾಗಿದ್ದೆ. ಅವರು ಸೋಲುತ್ತಿದ್ದಂತೆ ತಾವು ಸಭ್ಯರೆಂದು, ನನ್ನ ಒಳಿತನ್ನು ಇಷ್ಟಪಡುವವರೆಂದು ಅಭಿನಯಿಸತೊಡಗಿದರು. ತಮ್ಮ ನಿಷ್ಠೆಯ ಬಗ್ಗೆ ಬೊಗಳೆ ಬಿಡತೊಡಗಿದರು. ಹೇಗಾದರೂ ಮಾಡಿ ಲಾಭದಾಯಕವಾಗಿ ರಾಜೀನಾಮೆ ಕೊಡುವುದು ಅವರ ಉದ್ದೇಶವಾಗುತ್ತಾ ಹೋಯಿತು. ಇದನ್ನೆಲ್ಲ ಅರಿತು ನನ್ನ ಸಿಟ್ಟು, ಸೆಡವು ಬಿಡದೆ ಸುಮ್ಮನಿದ್ದೆ. ಅವರಿಗೆ ಸಲ್ಲಬೇಕಾದಷ್ಟು ಹಣ ಮಾತ್ರ ನೀಡಿ ಅವರ ನೀಚತನಕ್ಕೆ ತಕ್ಕಷ್ಟೇ ಸಿಟ್ಟು ತೀರಿಸಿಕೊಂಡೆ. ಬೇರೆ ಎಲ್ಲ ರೀತಿಯ ವರ್ತನೆಯೂ ಹಾಸ್ಯಾಸ್ಪದದ ಅಂಚಿನಲ್ಲಿ ಇರುತ್ತಿದ್ದವು. ■



ಮುಂಡಿಯೂರಿದ್ದಾಳೆ ಕಿಸಾಗೋತಮಿ ಬೆತ್ತಲ್ಲೆ!

1.
ಅಮಾಯಕ ಬೆಳಗು
ತಾಯಿಯಾಗುತ್ತಾಳೆ
ಕತ್ತಲು ಹೂಡಿದ ಸಂಚಿಗೆ!

ಗುಲಾಬಿ ಮಡಿಲಿನ ಆಕೆ
ಪಕಳೆಗಳು ಉದುರದಂತೆ
ಇಬ್ಬನಿಯಗೆಡವಿ; ಉಡಿ ತುಂಬಿ
ಮುಂದೆ ನಡೆದಾಗ
ಆತ ಇನ್ನೂ ನಿದ್ದೆಯಲ್ಲಿದ್ದ!


2.
ಹೂವು ಆಯ್ದ ಕೈ,
ಚದುರಿದ ಚೊಚ್ಚಲ ಕಂದಮ್ಮನ
ಕಣ್ಣು; ಗಲ್ಲ ಮತ್ತು ತುಟಿಯ
ಮೇಲಿನ ನಗುವನು; ರಕ್ತ, ಧೂಳು
ಮೆತ್ತಿದವುಗಳ ಒರಸಿ
ಎದೆಗೊತ್ತಿಕೊಳ್ಳುತ್ತಾಳೆ! ಮತ್ತು;
ಕಿಸಾಗೋತಮಿಯಾಗಿ
ಮಂಡಿಯೂರಿ ಪ್ರಾರ್ಥಿಸುತ್ತಾಳೆ
ಮಗುವಿನ ದೊರೆತ ಅಂಗಾಂಗಕೆ
ಜೀವ ಕೊಡೆಂದಲ್ಲ!
ಈ ವಿಶಾಲ ಗುಲಾಬಿ ತೋಟದಲಿ
ಒಂದಿಷ್ಟು; ಸಾಸಿವೆ ಗಿಡದಷ್ಟು
ಜಾಗವಿದ್ದರೆ ದಯಪಾಲಿಸೆಂದು!

ಸಮಾಧಿಯಾಗದ ನೆಲ ಹುಡುಕಿ
ಹೊರಟಾತ ಅಲೆಯುತ್ತಿದ್ದಾನೆ
ಅನಾಮಿಕನಂತೆ; ಗೋರಿಕಟ್ಟದ ಊರ ಕೇಳಿ!



■ ಅರೋಲಿ ರಮೇಶ, ಅಸ್ಕಿಹಾಳ

ಸೆರೆಮನೆಯ ಬೆಂಕಿಕೆಂಡ, ಅರಮನೆಯ ಮಂಜುಗಡ್ಡೆ



ಒಬ್ಬ ಮನುಷ್ಯನಲ್ಲಿ ಹುಟ್ಟಿಕೊಳ್ಳುವ ಬಂಡುಕೋರ ಗುಣ ಎಷ್ಟು ಕಾಲ ಜೀವಂತವಾಗಿರಲು ಸಾಧ್ಯ?

ಕೆಲ ಬಂಡಾಯಗಾರರಲ್ಲಿ ಆ ಸ್ವಭಾವ ಹಾಗೆ ದಿನಕ್ರಮೇಣ ಇಂಗುತ್ತಾ ಕಮರಿ ಹೋಗಿದ್ದನ್ನು ನಾನೇ ನೋಡಿದ್ದೇನೆ. ಅದಕ್ಕೆ ತದ್ವಿರುದ್ಧವಾಗಿ ಬೇರೆ ಕೆಲವರಲ್ಲಿ ಆ ಬಂಡಾಯದ ಬೆಂಕಿ ಒಂದೋ ಉರಿಯುತ್ತಲೇ ಹೋಗುವುದನ್ನು ಅಥವಾ ಕೆಂಡದಂತೆ ಅದೇ ಕಾವನ್ನು ಉಳಿಸಿಕೊಂಡಿರುವುದನ್ನು ಬಹುಶಃ ನೀವೂ ಗಮನಿಸಿರುತ್ತೀರಿ.

ಸೆಪ್ಟೆಂಬರ್ ಮೊದಲನೆ ವಾರದ 'ಲಂಕೇಶ್'ನಲ್ಲಿ 'ಮಿಸ್ಸಿಂಗ್ ಕೇಸ್' ಎಂಬ ಒಂದು ಕತೆ ಪ್ರಕಟವಾಯಿತು. ತೆಲುಗಿನ ಯಾಳ್ಳ ಅಚ್ಯುತರಾಮಯ್ಯ ಎಂಬುವವರು ಬರೆದಿದ್ದ ಆ ಕತೆಯ ದ್ರವ್ಯ ಬದಲಾಗುವ ಮನುಷ್ಯ ಸ್ವಭಾವ ಕುರಿತದ್ದು. ಕಥಾನಾಯಕ ಸಂಜೀವರಾವ್ ಒಬ್ಬ ಹೋರಾಟಗಾರನಾಗಿದ್ದವನು. ಬಂಡಾಯ ಘೋಷಿಸಿ ನಿರ್ಮಲಾ ಎಂಬ ಹೆಣ್ಣಿನ ಮನಸ್ಸು ಗೆದ್ದಿರುತ್ತಾನೆ. ಆದರೆ ಮನುಷ್ಯ ಮನುಷ್ಯನನ್ನು ದೋಚುವ ವ್ಯವಸ್ಥೆಯ ವಿರುದ್ಧ ಬಂಡಾಯ ಘೋಷಿಸಿ ನಿರ್ಮಲಾ ಎಂಬ ಹೆಣ್ಣಿನ ಮನಸ್ಸು ಗೆದ್ದಿರುತ್ತಾನೆ. ಆದರೆ ಕಾಲಕ್ರಮೇಣ ಸಂಜೀವರಾವ್‌ನ ಮಾತಿನ ಓಘ ಬದಲಾಗುತ್ತದೆ. ವ್ಯಕ್ತಿತ್ವದೊಳಗಿನ ಬಂಡಾಯದ ದ್ರವ್ಯ ಇಂಗಿಹೋಗಿ ಸದಾ ದುಡ್ಡಿನ ಬಗ್ಗೆ ಮಾತನಾಡಲು ಶುರುಮಾಡುತ್ತಾನೆ. ರಿಯಲ್ ಎಸ್ಟೇಟ್ ವ್ಯವಹಾರಕ್ಕಿಳಿಯುತ್ತಾನೆ. ಇದನ್ನೂ ಒಪ್ಪದ ನಿರ್ಮಲ ದಿನಪತ್ರಿಕೆಯೊಂದರಲ್ಲಿ 'ಕಾಣೆಯಾಗಿದ್ದಾರೆ' ಅಂತಾ ಒಂದು ಜಾಹೀರಾತು ಪ್ರಕಟಿಸಿ 'ಹೀಗೀಗೆ ಈ ತರ ಇದ್ದ ನನ್ನ ಗಂಡ ಸಂಜೀವರಾವ್ ಕಾಣೆಯಾಗಿದ್ದಾನೆ. ನನಗೆ ಹಿಂದಿನ ಸಂಜೀವರಾವ್ ಬೇಕು. ಹುಡುಕಿಕೊಡುತ್ತೀರಾ ಪ್ಲೀಸ್'ಎಂಬಂತೆ ಮನವಿ ಮಾಡಿಕೊಂಡಿರುತ್ತಾಳೆ.

ತೆಲುಗಿನ ಈ ಕತೆಯನ್ನು 'ನಿರಂಜನ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದು ಒಬ್ಬ ಕೈದಿ!

ಕಳೆದ ನಾಲ್ಕು ವರ್ಷಗಳಿಂದ ವಿಚಾರಣಾಧೀನ ರಾಜಕೀಯ ಕೈದಿಯಾಗಿ ಬಂಧನದಲ್ಲಿರುವ ಈ ಹೋರಾಟಗಾರ ಹಾಗೂ ಬರಹಗಾರನ ಚೈತನ್ಯ ಮತ್ತು ಇಚ್ಛಾಶಕ್ತಿ ಅಸಾಮಾನ್ಯ.

ಈಗ್ಗೆ ಮೂರು ವರ್ಷಗಳ ಹಿಂದೆ ನಮ್ಮ ಪತ್ರಿಕೆಯಲ್ಲೇ 'ಜೈಲೆಂಬ ಲೋಕದಲ್ಲಿ' ಎಂಬ ಸರಣಿ ಬರಹ ಪ್ರಕಟವಾಗಿತ್ತು. ಅದನ್ನು ಬರೆದ ಆಕ್ಟಿವಿಸ್ಟ್ ಗೆಳೆಯ ಕುಮಾರ್ ಸಮತಳ ಕೂಡ ನಾಲ್ಕು ವರ್ಷ ಜೈಲಿನಲ್ಲಿದ್ದು ಕೊನೆಗೆ ಕೋರ್ಟ್‌ನಲ್ಲಿ ನಿರಪರಾಧಿ ಎಂದು ತೀರ್ಪು ಪಡೆದು ಬಿಡುಗಡೆಯಾಗಿ ಹೊರಬಂದಿದ್ದ.

ಬಿಡಿ ಚಿತ್ರಗಳು

• ಈಶ

ಜೈಲಿನ ಜೀವನದ ಕಷ್ಟ, ಏಕಾಂಗಿತನ, ಯಾತನೆಗಳು ಆತನನ್ನು ಬಳಲಿಸಿದ್ದಿರಬಹುದಾಗಲೀ ಆತನ ಚೈತನ್ಯವನ್ನು ಮಾತ್ರ ದಮನಿಸಲಾಗಿರಲಿಲ್ಲ. ಕುಮಾರ್ ಈಗ ಮತ್ತೆ ಆಕ್ಟಿವಿಸ್ಟ್ ಬದುಕಿಗೆ ಹಿಂತಿರುಗಿದ್ದಾನೆ.

ಇವರೊಂದು ರೀತಿ ಮೇಲ್ನೋಟಕ್ಕೆ ತಣ್ಣಗೆ ಕಂಡರೂ ಒಳಗೆ ಜ್ವಲಿಸುವ ಕೆಂಡದುಂಡೆಗಳಂತೆ ನನಗೆ ಕಂಡಿದ್ದಾರೆ.

ಇನ್ನೊಬ್ಬ ರಮೇಶ್ ಎಂಬ ನಕ್ಸಲ್ ಕೈದಿಯ ವಿಚಾರ ನಿಮಗೆ ಗೊತ್ತಿರಬಹುದು. ರಾಯಚೂರಿನ ನಕ್ಸಲ್ ಹೋರಾಟದ ನಾಯಕನಾಗಿದ್ದ ರಮೇಶ್ ಒಮ್ಮೆ ಪೊಲೀಸರಿಗೆ ಸಿಕ್ಕಿಬಿದ್ದು ನಾಲ್ಕಾರು ವರ್ಷ ಜೈಲಲ್ಲಿದ್ದು ಕೊನೆಗೆ ರಿಲೀಸ್ ಆಗಿ ಹೊರ ಬಂದಾಗ ನಾನೊಂದು ಇಂಟರ್‌ವ್ಯೂ ಮಾಡಿದ್ದೆ. ಅಷ್ಟರಲ್ಲಿ ರಮೇಶ್ ಪತ್ನಿ ಪಾರ್ವತಿ ಈದು ಎನ್‌ಕೌಂಟರ್‌ನಲ್ಲಿ ಹತ್ಯೆಗೀಡಾಗಿದ್ದಳು. ಮುಂದೆ 'ಎಲ್ಲಿಗೆ ಪಯಣ' ಎಂದು ನಾನು ಕೇಳಿದ ಪ್ರಶ್ನೆಗೆ ಅವತ್ತು ಖಚಿತವಾಗಿ ಏನೂ ಹೇಳಿರದಿದ್ದ ರಮೇಶ್ ಆಮೇಲೆ ದಿಢೀರನೆ ನಾಪತ್ತೆಯಾದರು. ಈಗ ಮಲೆನಾಡಿನ ಕಾಡಿನಲ್ಲಿರುವ ಬಂಡುಕೋರರ ತಂಡ ಸೇರಿದ್ದಾರೆಂಬ ಸುದ್ದಿ ಕೇಳಿಬರುತ್ತಿವೆ.

ಅದೇ ತಂಡದಲ್ಲಿ ಪದ್ಮನಾಭನೆಂಬ ಇನ್ನೊಬ್ಬ ಹೋರಾಟಗಾರನೂ ಇದ್ದಾನೆ. ಮಲೆನಾಡಿನ ಜನರಿಗೆ ಚಿರಪರಿಚಿತನಾಗಿದ್ದ ಈ ಯುವಕ ಪೊಲೀಸರ ಗುಂಡೇಟು ತಿಂದು ಈಗ ಒಂದು ಕಾಲು ಕಳೆದುಕೊಂಡಿದ್ದಾನೆಂದು ಹೇಳಲಾಗುತ್ತಿದೆ.

ಆದರೇನು

ಪದ್ಮನಾಭನೊಳಗಿನ ಬಂಡುಕೋರ ಮನೋಭಾವವನ್ನೂ ಹತ್ತಿಕ್ಕಲು ಯಾರಿಂದಲೂ ಸಾಧ್ಯವಾಗಿಲ್ಲ.

ಇದನ್ನು ನೆನೆಯಲು ಒಂದು ಕಾರಣವಿದೆ: ಮೊನ್ನೆ ನಮ್ಮ ಕಚೇರಿಗೆ ನಾಟಕ ಕುರಿತ ಎರಡು ಆಹ್ವಾನ ಪತ್ರಿಕೆಗಳು ಬಂದವು.

ಗಾಂಧಿ ಪತ್ನಿ ಕಸ್ತೂರ ಬಾ ಕುರಿತ ಒಂದು ನಾಟಕ, ಬಸವಣ್ಣನ ಸಾಮಾಜಿಕ ಆಂದೋಲನದ 'ತಲೆದಂಡ' ಮತ್ತು ಭೀಷ್ಮ ಸಹಾನಿಯವರ 'ಮಾಧವಿ' ನಾಟಕಗಳನ್ನೂ ಒಂದು ತಂಡ ಆಡಲಿತ್ತು.


ಮೈಸೂರು ಜೈಲಿನಲ್ಲಿರುವ ಕೈದಿಗಳೇ ಈ ನಾಟಕಗಳ ಪಾತ್ರಧಾರಿಗಳು!

ಇನ್ನೊಂದು ಆಹ್ವಾನ ಪತ್ರಿಕೆಯಲ್ಲಿ ಪ್ರಖ್ಯಾತ ರಂಗಕರ್ಮಿ ಬಿ.ವಿ. ಕಾರಂತರ ನೆನಪಿನ 'ನವರಾತ್ರಿ ರಂಗೋತ್ಸವ' ಆಚರಣೆ ಬಗ್ಗೆ ಹೇಳಲಾಗಿತ್ತು. ಮೈಸೂರಿನ ರಂಗಾಯಣ ತಂಡವೂ ಸಹಭಾಗಿಯಾಗಿರುವ ಈ ತಂಡದ ನಾಟಕಗಳ ಪೈಕಿ ಜಟಾಯು ಮೋಕ್ಷ, ಸಾಂಬಶಿವ ಪ್ರಹಸನ, ವಿದೂಷಕ ದ್ಯುತ ಭಾರತ ಮುಂತಾದ ನಾಟಕದ ಹೆಸರುಗಳು ಕಾಣುತ್ತಿದ್ದವು. ಒಡೆಯರ್‌ನ ದಸರಾ ನಾಟಕಗಳಿವು.

ಈ **contrast** ಗಮನಿಸಿ ನಮ್ಮ ಸಮಾಜದ ಮುಖ್ಯವಾಹಿನಿಯಲ್ಲಿರಲು ಅನರ್ಹರೆಂದು ನಾವು ಯಾರನ್ನು ನಿರ್ಬಂಧಿಸಿ ಜೈಲುಗಳಲ್ಲಿ ಇರಿಸಿದ್ದೇವೆಯೋ ಅದೇ ಜನ ಸಾಮಾಜಿಕ ಕಾಳಜಿ, ಸಮಾನತೆ, ಸಹಬಾಳ್ವೆಯ ಆಶಯಗಳ ನಾಟಕ ಪ್ರದರ್ಶಿಸಿದರೆ, ಸ್ವಾತಂತ್ರ್ಯವೆಂಬ ಅರಮನೆಯಲ್ಲಿ ಬದುಕುತ್ತಿರುವ ಮುಖ್ಯ ವಾಹಿನಿಯಲ್ಲಿರುವ ಜನ ಆರಿಸಿಕೊಂಡಿರುವ ನಾಟಕದ ವಸ್ತುಗಳು ಹೇಗಿವೆ ನೋಡಿ..?

ತಲೆದಂಡ ಮತ್ತಿತರ ನಾಟಕ ಪ್ರದರ್ಶಿಸಿದ ಕೈದಿಗಳ ತಂಡದಲ್ಲಿ ಕೆಲ ಬಂಡಾಯ ಮನೋಭಾವದ ರಾಜಕೀಯ ಕೈದಿಗಳೂ ಇದ್ದರು. ಮಿಸ್ಸಿಂಗ್ ಕೇಸ್ ಕತೆ ಅನುವಾದಿಸಿದ ಕೈದಿಯೂ ಆ ತಂಡದಲ್ಲಿದ್ದ.

ಸೆರೆಮನೆಗೆ ದೂಡಿದರೂ ಒಬ್ಬ ಬಂಡುಕೋರನೊಳಗಿನ ಬೆಂಕಿಕೆಂಡ ಆರುವುದಿಲ್ಲ. ಅದೇ ರೀತಿ ಅರಮನೆ ಹುಡುಕಿಕೊಂಡು ಹೋಗುವ ಜನರಲ್ಲಿ 'ಬಂಡಾಯ' ಉಳಿದಿರುವುದಿಲ್ಲ ಎನ್ನಲು ಈ ಮಾತು ಹೇಳಬೇಕಾಯಿತು.



"ಸ್ಟೆಪ್ನಿ ರೆಡೀನಾ... ವೈಕುಂಠಕ್ಕೆ ಕಳಿಸಿ"

ರಾಜ್ಯ ಪೊಲೀಸ್ ಮಹಾನಿರ್ದೇಶಕರಾಗಿದ್ದ ಕೆ.ಆರ್. ಶ್ರೀನಿವಾಸನ್‌ರ ಜೀವನ ಮುಗಿದಿದೆ. ಎಲ್ಲಾ ದೊಡ್ಡ ಮನುಷ್ಯರು ತೀರಿಕೊಂಡಾಗ ಬಣ್ಣಿಸುವ ಮಾಮೂಲಿ ಮಾತುಗಳನ್ನೇ ಈಗ ಶ್ರೀನಿವಾಸನ್ ಬಗ್ಗೆಯೂ ಹೇಳಲಾಗುತ್ತಿದೆ.

ಅತ್ಯಂತ ದಕ್ಷ, ಪ್ರಾಮಾಣಿಕ, ಪ್ರಶಸ್ತಿ ವಿಜೇತ... ಇತ್ಯಾದಿ. ಇಂತಾ ಗದ್ದಲದಲ್ಲಿ ವ್ಯಕ್ತಿಯೊಬ್ಬನ ಬದುಕು, ಸಾಧನೆ-ವೈಫಲ್ಯಗಳ ಬಗ್ಗೆ ನಿಷ್ಠುರವಾಗಿ ಸತ್ಯಕ್ಕೆ ಹತ್ತಿರವಾಗಿ ಮಾತನಾಡುವವರು ಕಡಿಮೆ. ಇರಲಿ.

ಈ ಶ್ರೀನಿವಾಸನ್‌ರ ವೃತ್ತಿ ಬದುಕಿನಲ್ಲಿ ಹೇಳಿಕೊಳ್ಳುವಂತಹ ವಿಶೇಷ ಸಾಧನೆಗಳೇನೂ ಇರಲಿಲ್ಲ. ಅದರ ಬದಲಾಗಿ ಪೊಲೀಸ್ ಇಲಾಖೆಯ ಕೆಲವು ಟಾಪ್ ಆಫೀಸರ್‌ಗಳ ನೆನಪಿನಲ್ಲಿರುವುದು ಈತನ ಭ್ರಷ್ಟಾಚಾರ ಹಾಗೂ ಸ್ತ್ರೀಲೋಲುಪ ದುರ್ಗುಣಗಳು ಮಾತ್ರ.

ವೀರಪ್ಪನ ವಿರುದ್ಧದ ಕಾರ್ಯಾಚರಣೆಯಲ್ಲಿ ಹರಿಕೃಷ್ಣ ಮತ್ತು ಶಕೀಲ್ ಅಹಮದ್ ಜೀವ ತೆತ್ತರಲ್ಲ, ಆ ದುರಂತ ಘಟನೆಯ ಹಿಂದೆ ಇದೇ ಶ್ರೀನಿವಾಸನ್‌ರ ಅಧ್ಯಕ್ಷತೆ, ಉಡಾಫೆ ಮನೋಭಾವ ಹಾಗೂ ವೃತ್ತಿದ್ರೋಹಗಳೂ ಅಡಗಿದ್ದವೆಂಬ ಅನುಮಾನ ಈಗಲೂ ಕೆಲ ಅಧಿಕಾರಿಗಳಿಗಿದೆ.

ಈ ಶ್ರೀನಿವಾಸನ್ ಅಧಿಕಾರದಲ್ಲಿದ್ದಾಗ ಎಲ್ಲಿಗೆ ಹೋಗಿ ಉಳಿದುಕೊಂಡರೂ ಈತನಿಗಾಗಿ 'ಸ್ತ್ರೀಸಾಂಗತ್ಯ ಸೇವೆ' ಏರ್ಪಾಡು ಮಾಡುವ ಕರ್ಮ ಕೆಳಗಿನ ಆಫೀಸರ್‌ಗಳ ಮೇಲಿರುತ್ತಿತ್ತು. ಈತನ ಈ ಚಾಳಿ ಇಲಾಖೆಯಲ್ಲಿ ಎಷ್ಟು ಜನಜನಿತವಾಗಿತ್ತೆನ್ನಲು ಈ 'ಸ್ಟೆಪ್ನಿ ರೆಡಿ' ಘಟನೆಯೇ ಉದಾಹರಣೆ.

ಒಮ್ಮೆ ಹೊಸಪೇಟೆಗೆ ಸರ್ಕೀಟು ಹೊರಟ ಶ್ರೀನಿವಾಸನ್ ಸಾಹೇಬರ ಕಾರು ಬಳ್ಳಾರಿ ಹತ್ತಿರ ದಾರಿಯಲ್ಲೇ ಪಂಕ್ಚರ್ ಆಯಿತು. ಹತ್ತಿರದಲ್ಲೇ ಇದ್ದ ಪಂಕ್ಚರ್ ಶಾಪಿನಲ್ಲಿ ಬೇರೊಂದು ವ್ಹೀಲ್ ಅರೆಂಜ್ ಮಾಡಿಕೊಂಡು ಪಂಕ್ಚರ್ ಆಗಿದ್ದ ಗಾಲಿಯನ್ನು ರಿಪೇರಿ ಮಾಡಿ ಕಳುಹಿಸುವಂತೆ ಆದೇಶಿಸಿ ಸಾಹೇಬರು ನೇರಾ ಹೊಸಕೋಟೆಯ ಪ್ರವಾಸಿಬಂಗಲೆ 'ವೈಕುಂಠ'ಕ್ಕೆ ಬಂದಿಳಿದರು.

ಇತ್ತ ಪಂಕ್ಚರ್ ಶಾಪಿನವನು ವ್ಹೀಲ್ ರೆಡಿಮಾಡಿ ಹತ್ತಿರದ ಪೊಲೀಸ್ ಸ್ಟೇಷನ್‌ಗೆ ಹೋಗಿ 'ಸಾಹೇಬರ ಗಾಡಿ ಸ್ಟೆಪ್ನಿ ರೆಡಿಯಾಗಿದೆ ಸಾರ್ ತಗೊಂಡೋಗಿ' ಎಂತ ಕೇಳಿಕೊಂಡ. ಸ್ಥಳೀಯ ಪೊಲೀಸರು ಕೂಡಲೇ ಆ ಚಕ್ರಕ್ಕೇ ಒಂದು ಗಾಡಿ ಅರೆಂಜ್ ಮಾಡಿ ವೈರ್‌ಲೆಸ್ ಮೂಲಕ ಸಾಹೇಬರ ನೆಲೆ ಪತ್ತೆಹಚ್ಚಲು ಶುರುಮಾಡಿದರು. ಬಳ್ಳಾರಿ ಪೊಲೀಸರಿಗೂ 'ಸಾಹೇಬರ ಸ್ಟೆಪ್ನಿ ರೆಡಿಯಿದೆ, ಎಲ್ಲಿಗೆ ಕಳಿಸಬೇಕು' ಅಂತಾ ಮೆಸೇಜು ಬಂತು.

ಪಂಕ್ಚರ್ ವಿಚಾರ ಗೊತ್ತಿರದಿದ್ದ ಆದರೆ ತಮ್ಮ ಸಾಹೇಬರ ಚಂಗಲು ಬುದ್ಧಿ ತಿಳಿದಿದ್ದ ಬಳ್ಳಾರಿ ಪೊಲೀಸ್ ಆಫೀಸರ್ ಒಬ್ಬರು...'ಓ ಸ್ಟೆಪ್ನಿ ರೆಡಿನಾ ಹಾಗಾದ್ರೆ ರಾತ್ರಿ ವೈಕುಂಠಕ್ಕೆ (ಹೊಸಪೇಟೆ ಐ.ಬಿ.)ಕಳಿಸಿಬಿಡಿ' ಅಂತ ಮರುಮೆಸೇಜು ಕಳಿಸಿದರಂತೆ.

'ಬಾಂಬ್' ಮಟ್ಟಣ್ಣನಿಗೆ ಗುಂಡು ಶಿಕ್ಷೆ?

ಈ ವಾರದ ಸಂಚಿಕೆಯಲ್ಲಿ 'ಪುಂಡ ಮುಖ್ಯಮಂತ್ರಿ' ಎಂಬ ಮುಖಪುಟದ ವರದಿ ಓದಿದೆ. ಅದರಲ್ಲಿ ಮುಖ್ಯಮಂತ್ರಿಯವರ ಬಣ್ಣ ಬಯಲು ಮಾಡಿದ್ದೀರಿ. 'ಕ್ರೈಸ್ತರು ಅಪರಾಧಿಗಳು' ಎಂಬ ಲೇಖನದ ಮೂಲಕ ನಮ್ಮ ಸರ್ಕಾರ ಯಾವ ರೀತಿ ಅಲ್ಪಸಂಖ್ಯಾತರ ಮೇಲೆ ಹೇಗೆ ದೌರ್ಜನ್ಯ ನಡೆಸುತ್ತಿದೆ ಎಂಬುದನ್ನು ಬಯಲಿಗೆಳೆದಿದ್ದೀರಿ. ಮುಖ್ಯವಾಗಿ ದಲಿತರಿಗೆ ದೇವಸ್ಥಾನಗಳಲ್ಲಿ ಈಗಲೂ ಪ್ರವೇಶವಿಲ್ಲ ಮತ್ತು ದಲಿತರ ಮೇಲೆ ಆಗಾಗ ದೌರ್ಜನ್ಯಗಳು ನಡೆಯುತ್ತಲೇ ಇರುತ್ತವೆ. ಆದ್ದರಿಂದ ಎಷ್ಟು ಮಂದಿ ಸ್ವಇಚ್ಛೆಯಿಂದ ಬೇರೆ ಧರ್ಮಕ್ಕೆ ಮತಾಂತರಗೊಂಡಿದ್ದಾರೆ. ಬಲಾತ್ಕಾರದಿಂದ ಮತಾಂತರಗೊಳ್ಳುವುದಕ್ಕೂ, ಸ್ವಇಚ್ಛೆಯಿಂದ ಮತಾಂತರಗೊಳ್ಳುವುದಕ್ಕೂ ವ್ಯತ್ಯಾಸವಿದೆ. ಮತಾಂತರಗೊಳ್ಳುವುದು ಅವರ ಹಕ್ಕು, ಯಾವ ಧರ್ಮಕ್ಕೆ ಬೇಕಾದರೂ ಮತಾಂತರಗೊಳ್ಳುವುದು ಅವರ ಸ್ವಾತಂತ್ರ್ಯ ಎಂಬ ವಿಚಾರಗಳನ್ನು ಈ ಸಂಚಿಕೆಯಲ್ಲಿ ಉತ್ತಮವಾಗಿ ತೋರಿಸಿಕೊಟ್ಟಿದ್ದೀರಿ. ನಿಮಗೆ ಕೋಟಿ ಕೋಟಿ ವಂದನೆಗಳು.


-ರೆಜೀನಾ ಜೋಸೆಫ್, ಹಾಸನ

ಚರ್ಚ್‌ಗಳ ಮೇಲೆ ಭಜರಂಗಿಗಳನ್ನು ಛೂಬಿಟ್ಟ ಪ್ರಕರಣ ನೋಡಿದರೆ-ಬಡಗಿಗಳು ಅರ್ಧ ಸೀಳಿ ಬಿಟ್ಟುಹೋದ ಮರದ ತುಂಡಿನ ಕೀಲುಕಿತ್ತು ಅದೇನೋ ಮಾಡಿಕೊಂಡ ಕೋತಿಯ ನೆನಪಾಗುತ್ತದೆ.

ತೆಗಳಿಕೆ ಹೊಗಳಿಕೆ

ಮನುಷ್ಯನ ಸಹನೆಗೂ ಮಿತಿಗಳಿವೆ. ದುರ್ಬಲ ಪ್ರಾಣಿಯೂ ಕೂಡ ಎಲ್ಲಾ ಕಡೆಯಿಂದ ಆಕ್ರಮಣಕ್ಕೊಳಗಾದಾಗ ಅನಿವಾರ್ಯವಾಗಿ ಪ್ರತಿದಾಳಿಗೆ ಸಿದ್ಧವಾಗುವುದುಂಟು. ಹಿಂದುತ್ವವಾದಿಗಳ ನಿರಂತರ ಉಪಟಳ, ಟೀಕೆಗಳಿದ್ದರೂ ಕೂಡ ಸಹನೆಯಿಂದಲೇ ಇದ್ದ ಕ್ರಿಶ್ಚಿಯನ್ನರು ಮೊನ್ನೆ ಮಂಗಳೂರಿನ ಇತಿಹಾಸದಲ್ಲೇ ಮೊದಲ ಬಾರಿಗೆ ತಾಳ್ಮೆಗೆಟ್ಟು ಬೀದಿಗಿಳಿದು ಪ್ರತಿಭಟಿಸಿದ್ದರು. ಇಂತಹ ಸಂದರ್ಭದಲ್ಲಿ ತನ್ನ ಜವಾಬ್ದಾರಿ ಸ್ಥಾನವನ್ನು ತೋರಿಸಿಕೊಳ್ಳುವುದಕ್ಕಿಂತ ಭಜರಂಗಿಗಳನ್ನು ಉತ್ತೇಜಿಸುವಂತಹ ಮಾತುಗಳನ್ನ ಆಡಿದ ಅಥವಾ ಮಾಧ್ಯಮದ ಮುಂದೆ "ಯಾರೂ ಸಾಯಲಿಲ್ಲವಲ್ಲ?" (ಸತ್ತಿದ್ದರೆ ಖುಷಿ ಇರ್ತಿತ್ತೇನೋ?) ಎಂಬ ಬೇಜವಾಬ್ದಾರಿಯ ಮಾತುಗಳನ್ನು ಉದುರಿಸಿದ ಗೃಹ ಸಚಿವರನ್ನು ನೋಡಿದರೆ ಅವರಿಗೆ ಕುಮಾರಸ್ವಾಮಿ ನೀಡಿದ ಬಿರುದು ಬಾವಲಿ ಸರಿಯಾಗೇ ಇದೆ ಅಂತನ್ನಿಸದೇ ಇರದು.

ಎಲ್ಲಾ ಆದಮೇಲೆ ಕೋಟೆ ಬಾಗಿಲು ಹಾಕಿದರು ಎಂಬಂತೆ ಇದೀಗ ಸಿಎಂ ಸಾಹೇಬರು ಭಾವೈಕ್ಯತಾ ಸಮಿತಿಯ ರಚನೆಗೆ ಹೊರಡಿದ್ದಾರಂತೆ. ಅವತ್ತು **TV** ಸಂದರ್ಶನದಲ್ಲಿ ಪಾಲ್ಗೊಂಡಿದ್ದ **outdated** ರಾಜಕಾರಣಿ ಧನಂಜಯ ಕುಮಾರ್ ಸ್ವತಃ ಸೀಯೆಮ್ಮೇ ಘಟನೆಯ ದಿನ ಮಂಗಳೂರಿಗೆ ಬಂದಿದ್ದರು ಎಂದು ಸಿಎಂನ್ನು ಹೊಗಳಿದ್ದರು. ಹೌದು ಸಿಎಂ, ಗೃಹಸಚಿವರಾದಿಯಾಗಿ ಎಲ್ಲರೂ ಕೂಡ ಅವತ್ತು ಚರ್ಚ್ ದಾಳಿಯಲ್ಲ, ಚರ್ಚ್ ಬಾಗಿಲು ತೆರೆಯುವ ಮುಂಚೆಯೇ ಕರಾವಳಿಯೆಡೆಗೆ ಮುಖ ಮಾಡಿದ್ದರು. ಸ್ವಯಂ ಬಿಜೆಪಿಯ ರಾಜ್ಯಾಧ್ಯಕ್ಷ ಸದಾನಂದಗೌಡರ ಪುತ್ರ ಕಾರ್ತಿಕ್‌ಗೌಡ ಎಂಬ 26ರ ಹರೆಯದ ಸಕಲಕಲಾಪಾರಂಗತನಿಗೆ ಅದ್ಯಾವ ದರ್ದಿತ್ತೋ ಏನೋ ವಾಹನ ಸಂಚಾರವಿಲ್ಲದ ಮೂರು ಗಂಟೆಯ ರಾತ್ರಿ ಸಮಯದಲ್ಲಿ ಪಾರ್ಟಿಯೊಂದನ್ನು ಮುಗಿಸಿಕೊಂಡು ಬರುತ್ತಿದ್ದ ವೇಳೆ ನಿಂತಿದ್ದ ಮೈನ್ಸ್ ಲಾರಿಗೆ ಡಿಕ್ಕಿ ಹೊಡೆದು ಗೆಳೆಯನೊಬ್ಬನ ಸಾವಿನ ಜೊತೆಗೆ ತಾನು ಗಂಭೀರ ಸ್ಥಿತಿಯಲ್ಲಿ ಮಣಿಪಾಲದಲ್ಲಿ ಅಡ್ಮಿಟ್ ಆಗಿದ್ದ. ಆತನನ್ನು ನೋಡಲು ಬಿಜೆಪಿ ನಾಯಕರ ದಂಡೇ ಬೆಂಗಳೂರಿನಿಂದ ಬಂದಿತ್ತು. ಗೊಬ್ಬರ ಗಲಾಟೆಯಲ್ಲಿ ಸತ್ತ ರೈತನನ್ನು ನೋಡಲು ಅವತ್ತು ಈ ನಾಯಕರುಗಳಿಗೆ ಪುರುಸೊತ್ತಿರಲಿಲ್ಲವಂತೆ ಪಾಪ.



ಅದೇರೀತಿ ಮೊನ್ನೆ ಸುವರ್ಣ ವಾಹಿನಿಯ 'ಫೋಕಸ್' ಕಾರ್ಯಕ್ರಮದಲ್ಲಿ ಪೊಲೀಸ್ ಅಧಿಕಾರಿ ಯಾಗಿ ರಕ್ಷಣೆಯಂತಹ ಜವಾಬ್ದಾರಿಯ ಕರ್ತವ್ಯವನ್ನೇ ಮರೆತು ಶಾಸಕರ ಭವನಕ್ಕೇ ಬಾಂಬ್ ಇಟ್ಟಂತಹ ಕ್ರಿಮಿನಲ್ ಮೈಂಡ್ ಮಟ್ಟಣ್ಣನವರ್ (ಈತ ತನಗೆ ವಹಿಸಲಾದ ಕರ್ತವ್ಯವನ್ನೂ ನೆಟ್ಟಗೆ ನಿರ್ವಹಿಸಲಿಲ್ಲ. ಅದೇರೀತಿ ಬಾಂಬ್ ತಯಾರಿಯಲ್ಲೂ ತನ್ನ ಅಪರಿಪಕ್ವತೆಯನ್ನು ತೋರಿದುದು ಕರ್ನಾಟಕದ ಭಾಗ್ಯವೇ ಎನ್ನಬೇಕು) "ಭಯೋತ್ಪಾದಕರು ಯಾರೇ ಇರಲಿ ಅವರನ್ನ ತಕ್ಷಣ ಹಿಡಿದು ಗುಂಡಿಕ್ಕಿ ಸಾಯಿಸಬೇಕು ಇಲ್ಲಾ ಗಲ್ಲಿಗೇರಿಸಬೇಕು" ಎಂದು ಕರೆ ಕೊಟ್ಟಿದ್ದಾನೆ. ಅಂದರೆ ಇವನನ್ನ ಅವತ್ತು ಗುಂಡಿಕ್ಕದೇ ಬದುಕಬಿಟ್ಟಿದ್ದು ದೊಡ್ಡ ತಪ್ಪಾಯಿತು ಎಂದಾಯ್ತು.

-ರವಿ ಪುತ್ತೂರ್, ದಕ್ಷಿಣ ಕನ್ನಡ

ಈ ವಾರದ ಸಂಚಿಕೆಯಲ್ಲಿ ಅಥಣಿಯ ಮೊಟಗಿ ಮಠದ ಪ್ರಭುಚನ್ನ ಬಸವಸ್ವಾಮಿಯ ಹೀನ ವೃತ್ತಾಂತ ಓದಿದೆ. ಬಸವ ಹುಟ್ಟಿದ ನಾಡಿನಲ್ಲಿ ಖಾವಿ ಧರಿಸಿ ಲುಚ್ಚಾ ಕೆಲಸ ಮಾಡುತ್ತಾ ಮೊಟಗಿ ಮಠಕ್ಕೆ ಮುಳ್ಳಾಗಿರುವ ಪ್ರಭುಬಸವನೆಂಬ ಹಲಾಲುಕೋರ ಸ್ವಾಮಿಯ ಬಂಡವಾಳ ಬಯಲಿಗೆಳೆದ ಪತ್ರಿಕೆಗೆ ಧನ್ಯವಾದಗಳು.

-ರಮಜಾನ. ಕೆ. ಕೊರ್ತಿ. ಬಾದಾಮಿ

ತಾವು ಕನ್ನಡ ನಾಡಿನ ಕೋಮು ಸೌಹಾರ್ದಕ್ಕಾಗಿ ಮಾಡುತ್ತಿರುವ ಪ್ರಯತ್ನ ಶ್ಲಾಘನೀಯವಾದುದು. ನಮ್ಮೆಲ್ಲರ ಪ್ರೀತಿ ಪಾತ್ರ ಬರಹಗಾರರಾದ ಲಂಕೇಶರ ಹಾದಿಯಲ್ಲಿ ನಡೆಯುತ್ತಾ ಪತ್ರಿಕೆಯ ಬರಹಗಳ ಮೂಲಕ ನೈತಿಕತೆಯ ದನಿ ಎತ್ತುತ್ತಾ ಮುಂದೆ ಸಾಗುತ್ತಿರುವುದು ಸಂತೋಷದ ವಿಚಾರ. ನಮಗೆ ಬೇಕಿರುವುದು ಕುರಾನ್ ಅಲ್ಲ ಬೈಬಲ್ ಅಲ್ಲ, ಭಗವದ್ಗೀತೆಯ ತಾತ್ಪರ್ಯವೂ ಅಲ್ಲ; ಸೌಹಾರ್ದ ಸಹಬಾಳ್ವೆಗಳೆಂಬ ಬೀಜಮಂತ್ರ, ಗಾಂಧಿ ಬಿತ್ತಿದ 'ಅಹಿಂಸೆ' ಮತ್ತು 'ಶಾಂತಿ' ಎಂಬ ದಿವ್ಯ ಅಸ್ತ್ರ.

-ಗುಂದೀಗೆರೆ ವಿಶ್ವನಾಥ, ಚೋಳೂರುಪಾಳ್ಯ



ಬೆಂಗಳೂರಿನಲ್ಲೊಂದು ಚಿತ್ರನಗರಿ ಸದ್ದುಗದ್ದಲವಿಲ್ಲದೆ ತಲೆಯೆತ್ತಿದೆ. ಇದರ ಹೆಸರು ಇನೋವೇಟಿವ್ ಫಿಲ್ಮ್ ಸಿಟಿ. ಬೆಂಗಳೂರಿನಿಂದ 35 ಕಿ.ಮೀ ದೂರದ ಬಿಡದಿಯಲ್ಲಿರುವ ಈ ಸಿಟಿ ಈಗಾಗಲೇ ಪ್ರವಾಸಿಗರ ಆಕರ್ಷಣೆಯ ಕೇಂದ್ರವೂ ಆಗಿದೆ.

ಗಣೇಶ್ ಅಭಿನಯದ 'ಬೊಂಬಾಟ್' ಮತ್ತು ಎಸ್. ನಾರಾಯಣ್ ನಿರ್ದೇಶನದ 'ಚೈತ್ರದ ಚಂದ್ರಮ' ಚಿತ್ರಗಳೂ ಈಗಾಗಲೇ ಇಲ್ಲಿ ಚಿತ್ರೀಕರಣಗೊಂಡಿವೆ. ಸದ್ಯಕ್ಕೆ ರಮೇಶ್ ನಿರ್ದೇಶನದ 'ವೆಂಕಟ್ ಇನ್ ಸಂಕಟ್'ದ ಚಿತ್ರೀಕರಣ ಇದೇ ಇನೋವೇಟಿವ್ ಫಿಲ್ಮ್ ಸಿಟಿಯಲ್ಲಿ ನಡೆಯುತ್ತಿದೆ. ಸುಮಾರು 50 ಎಕರೆ ಗುಡ್ಡಬೆಟ್ಟ ಪ್ರದೇಶವನ್ನು ವಿಸ್ತರಿಸಿರುವ ಇಲ್ಲಿ ಸಿನಿಮಾಕ್ಕೆ ಬೇಕಾದ ಎಲ್ಲಾ ರೀತಿಯ ಸೆಟ್‌ಗಳಿವೆ. ಮುಖ್ಯವಾಗಿ ಮಿನಿ ಗಾಲ್ಫ್ ಮೈದಾನ, ಕ್ರಿಕೆಟ್ ಸ್ಟೇಡಿಯಂ, ಐದು ಸಾವಿರ ಜನರಿಗೆ ಆಸನವ್ಯವಸ್ಥೆಯಿರುವ ಮತ್ತೊಂದು ಕ್ರೀಡಾಂಗಣ, ಆಧುನಿಕ 4-ಡಿ ಸಿನಿಮಾ ಥಿಯೇಟರ್, ಸಿನಿಮಾ ಟೆಂಟ್‌ಗಳು, ದೇವಸ್ಥಾನ, ರಸ್ತೆಗಳು, ಜಲಪಾತಗಳು, ಕಾರಂಜಿಗಳು, ಪಾರ್ಕ್, ದೊಡ್ಡದೊಡ್ಡ ಬಿಲ್ಡಿಂಗ್‌ಗಳು, ಕಾಫಿಡೇ ಶಾಪ್‌ಗಳು, ಹೋಟೆಲ್‌ಗಳು, ಮಾಲ್‌ಗಳು... ಇವೆಲ್ಲವೂ ಇಲ್ಲಿವೆ.

ಈ ಸಿಟಿಯ ಇನ್ನೊಂದು ವಿಶೇಷತೆ ಸುಮಾರು ಇಪ್ಪತ್ತು Signature Mansion ಗಳ ಕೆಲಸ ಆರಂಭವಾಗಿರುವುದು. ಭಾರತದ ಸುಮಾರು ಇಪ್ಪತ್ತು ಜನಪ್ರಿಯ ನಾಯಕ-ನಾಯಕಿಯರ ಮನೆಯ ಪ್ರತಿಕೃತಿಯನ್ನು ಅಲ್ಲಿ ನಿರ್ಮಿಸುತ್ತಿದ್ದಾರೆ. ಅದರಲ್ಲಿ ವರನಟ ರಾಜ್‌ಕುಮಾರ್, ಅಮಿತಾಬ್ ಬಚ್ಚನ್, ಶಾರೂಕ್ ಖಾನ್... ಮೊದಲಾದವರ ಮನೆ ಸೇರಿಕೊಂಡಿವೆ. ಇಂತಹ ಮನೆಗಳನ್ನು ನಿರ್ಮಿಸಿದ ನಂತರ ಅವುಗಳಲ್ಲಿ ಉಳಿದುಕೊಳ್ಳಲು ಬಾಡಿಗೆ ಮೇಲೆ ಜನರಿಗೆ ನೀಡುತ್ತಾರೆ. ನೀವು ಅಮಿತಾಬ್ ಬಚ್ಚನ್ ಮನೆಯನ್ನು ನೋಡಿರದಿದ್ದರೂ ಇಲ್ಲಿ ನೀವು 'ಬಚ್ಚನ್'ಮನೆ'ಯಲ್ಲಿ'ತಂಗಬಹುದು. ಇದು ಭಾರತದಲ್ಲೇ ಮೊದಲ ಪ್ರಯೋಗವಂತೆ.

ಇಲ್ಲಿನ 4-ಡಿ ಥಿಯೇಟರ್‌ನ ಅನುಭವವೇ ರೋಮಾಂಚನ ನೀಡುತ್ತದೆ. ಸಿನಿಮಾ ನೋಡುತ್ತಿದ್ದಾಗ ನಾವು ಕುಳಿತುಕೊಂಡ ಕುರ್ಚಿಗಳೆಲ್ಲವೂ ಅಲ್ಲಾಡುತ್ತವೆ; ಸಿನಿಮಾದಲ್ಲಿ ನೀರು ಸಿಂಪಡಿಸುವ ದೃಶ್ಯವಿದ್ದರೆ, ನಮ್ಮ ಮೇಲೂ ನೀರ ಹನಿಬೀಳುತ್ತದೆ. ಹಾಗೆಯೇ ನಾವು ಕುಳಿತ ಕುರ್ಚಿ ಆಳಕ್ಕೆ ಜಾರಿಹೋದ ಅನುಭವವಂತೂ ಮೈನವಿರೇಳಿಸುತ್ತದೆ. ಸೌಂಡ್‌ಸಿಸ್ಟಮ್ ಅಂತೂ ಅದ್ಭುತ. 3-ಡಿ ಸಿನಿಮಾ ನೋಡಿದಕ್ಕಿಂತಲೂ ವಿಭಿನ್ನವಾದ ಅನುಭವ ನೀಡುವ 4-ಡಿ ಥಿಯೇಟರ್ ನಿಜಕ್ಕೂ ಒಮ್ಮೆ ನೋಡಬೇಕಾದದ್ದೇ. ಅದರ ಪಕ್ಕದಲ್ಲೇ ನಮ್ಮ ಹಳ್ಳಿಗಳಲ್ಲಿರುವಂತಹ ಟೆಂಟ್ ಥಿಯೇಟರ್ ಕೂಡಾ ಆಕರ್ಷಕವಾಗಿದ್ದು ಗಮನ ಸೆಳೆಯುತ್ತದೆ.

ಮಕ್ಕಳಲ್ಲಿ ಆಸಕ್ತಿ ಮೂಡಿಸುವ ಸಮುದ್ರ ತೀರವನ್ನು ಕೃತಕವಾಗಿ ನಿರ್ಮಿಸಿದ್ದಾರೆ. ಅದರ ಜೊತೆಗೆ 'ಕಾರ್ಟೂನ್‌ಸಿಟಿ' ಮಕ್ಕಳ ಪಾಲಿಗೆ ಅಚ್ಚುಮೆಚ್ಚು. ಹಾಗೆಯೇ Ripley's Believe it or not ಮ್ಯೂಸಿಯಂ ನಿಮ್ಮನ್ನು ವಿಸ್ಮಯ ಲೋಕಕ್ಕೆ ಕರೆದೊಯ್ಯುತ್ತದೆ. Go Carting ಕೂಡ ಮಕ್ಕಳನ್ನು ಆಕರ್ಷಿಸುತ್ತದೆ. ಈ ಎಲ್ಲ ಸ್ಥಳಗಳಲ್ಲೂ ಸಿನಿಮಾ ಚಿತ್ರೀಕರಣ ಮಾಡಲು ಅವಕಾಶವಿದೆ ಎನ್ನುತ್ತಾರೆ ಇನೋವೇಟಿವ್ ಫಿಲ್ಮ್‌ಸಿಟಿಯ ರೂವಾರಿ ಶರವಣ ಪ್ರಸಾದ್.

"ನಮ್ಮ ಕನಸಿನ ಕೂಸು ಇನ್ನೂ ಸಂಪೂರ್ಣವಾಗಿ ತಯಾರಾಗಿಲ್ಲ. ಈಗಾಗಿರುವುದು ಶೇಕಡಾ 60ರಷ್ಟು ಮಾತ್ರ. ಮುಂದಿನ ಅಕ್ಟೋಬರ್ ವೇಳೆಗೆ ಫಿಲ್ಮ್ ಸಿಟಿ ಸಂಪೂರ್ಣಗೊಂಡಿರುತ್ತದೆ" ಎಂಬ ಭರವಸೆಯನ್ನು ಶರವಣ ಪ್ರಸಾದ್ ನೀಡುತ್ತಾರೆ. ಈತನಕ ಈ ಯೋಜನೆಗೆ ಸುಮಾರು 160 ಕೋಟಿ ರೂ.ಗಳನ್ನು ವೆಚ್ಚಮಾಡಲಾಗಿದೆ ಎಂದು ಫೈನಾನ್ಸ್ ಡೈರೆಕ್ಟರ್ ಲಕ್ಷ್ಮೀನಾರಾಯಣಪ್ಪ ಅಂಕಿಅಂಶಗಳನ್ನು ಬಿಚ್ಚಿಡುತ್ತಾರೆ.

ಫಿಲ್ಮ್‌ಸಿಟಿಯ ಜೊತೆಗೆ ಇದು ಪ್ರವಾಸಿಕೇಂದ್ರವಾಗಿಯೂ ಬೆಳೆಯುತ್ತಿದೆ. ಅಲ್ಲಿಗೆ ಪ್ರವಾಸಿಗರೂ ಮತ್ತು ಸಿನಿಮಾ ಉದ್ಯಮದವರೂ ಹೀಗೆ ಎರಡೂ ವರ್ಗದ ಜನರ ಆಶೋತ್ತರಗಳಿಗೆ ಈ ಫಿಲ್ಮ್‌ಸಿಟಿ ಸ್ಪಂದಿಸಿದಂತಾಗಿದೆ. ಕನ್ನಡ ಚಿತ್ರರಂಗಕ್ಕೊಂದು ಫಿಲ್ಮ್‌ಸಿಟಿ ಬೇಕು ಎಂಬ ಕೊರಗನ್ನು ಶರವಣ ಪ್ರಸಾದ್ ಮತ್ತು ಅವರ ತಂಡ ಸದ್ದಿಲ್ಲದೆ ನಿವಾರಿಸಿದೆ. ಅದರೊಳಗೊಮ್ಮೆ ಕಾಲಿಟ್ಟರೆ ನಿಮಗೆ ರೋಮಾಂಚನ, ವಿಸ್ಮಯವಾಗುವುದರ ಜೊತೆಗೆ ಅದೊಂದು ಕನಸಿನ ಲೋಕ ಮತ್ತು ಜ್ಞಾನಲೋಕವೂ ಹೌದು ಎಂಬುದು ಮನದಟ್ಟಾಗುತ್ತದೆ.

■ ಶೆಣೈ



ಹೊಗಳುಭಟ್ಟರ 'ಸಂಗಮ'

ಈತನಕ ಪರಭಾಷಾ ನಾಯಕಿಯರ ಬಗ್ಗೆ ವ್ಯಾಮೋಹ ಬೆಳೆಸಿಕೊಂಡಿದ್ದ ಕನ್ನಡ ಚಿತ್ರರಂಗದವರು ಈಗ ಪರಭಾಷೆಯ ತಂತ್ರಜ್ಞರ ಬಗ್ಗೆಯೂ ಪುಳಕಿತರಾಗಿದ್ದಾರೆ. ಅದಕ್ಕೊಂದು ನಿದರ್ಶನ ಮೊನ್ನೆ ನಡೆದ 'ಸಂಗಮ' ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭ. ಆ ಸಮಾರಂಭದಲ್ಲಿ ಎಲ್ಲರೂ ಚಿತ್ರದ ಸಂಗೀತ ನಿರ್ದೇಶಕ ದೇವಿಶ್ರೀ ಪ್ರಸಾದ್‌ರನ್ನು ಹಾಡಿಹೊಗಳಿದ್ದೇ ಹೊಗಳಿದ್ದು. ಚಿತ್ರದ ನಿರ್ಮಾಪಕ ಎಸ್.ವಿ. ಬಾಬು ಅವರಂತೂ ದೇವಿಯನ್ನು ಹೊಗಳುವ ಹಾಡೊಂದನ್ನು ವೇದಿಕೆಯಿಂದಲೇ ಹಾಡಿದರು. ಗೀತರಚನಕಾರ ಕವಿರಾಜ್ ದೇವಿಯೊಂದಿಗೆ ಕೆಲಸ ಮಾಡಿದ್ದು ತನ್ನ ಪೂರ್ವಜನ್ಮದ ಫಲವೋ ಎಂಬಂತೆ ಭಾವುಕರಾಗಿ ಮಾತನಾಡಿದರು. ಕನ್ನಡದ ಜನಪ್ರಿಯ ನಾಯಕನಟ ಗಣೇಶ್ ಅದೇ ವೇದಿಕೆಯಲ್ಲಿದ್ದರೂ ಆತನನ್ನು ಲೆಕ್ಕಿಸದೇ ಪರಭಾಷೆಯ ಸಂಗೀತ ನಿರ್ದೇಶಕನನ್ನು ಇಷ್ಟೊಂದು ಕೊಂಡಾಡುವ ಅಗತ್ಯವಾದರೂ ಏನಿತ್ತು?

ಇಲ್ಲಿ ಈ ಸಿನಿಮಾವನ್ನು ಪ್ರೇಕ್ಷಕ ಗಣೇಶ್‌ಗಾಗಿ ನೋಡಲು ಬರುತ್ತಾರೆಯೇ ವಿನಹ ದೇವಿಯ ಸಂಗೀತಕ್ಕಾಗಿ ಖಂಡಿತ ಅಲ್ಲ. ನಮ್ಮ ಕನ್ನಡ ಮಣ್ಣಿನ ಮಗ ಹಂಸಲೇಖ ಅವರ ಅಪ್ಪಟ ಪ್ರತಿಭೆಯ ಮುಂದೆ ಈ ದೇವಿಶ್ರೀಯ ಸಂಗೀತ ಅಷ್ಟು ಸ್ತುತವಲ್ಲದಿದ್ದರೂ ಇಷ್ಟೆಲ್ಲ ಕೊಂಡಾಡಿದರು. ಇಂಥವರ ಬುದ್ಧಿಗೆ ಏನೆನ್ನಬೇಕು?

ಮಸಾಲೆಗಳ ಪ್ಯಾಕೇಜ್ 'ವಂಶಿ'



ಪುನೀತ್ ರಾಜ್‌ಕುಮಾರ್ ಮತ್ತು ನಿರ್ದೇಶಕ ಪ್ರಕಾಶ್ ಜೋಡಿಯ 'ವಂಶಿ' ತೆರೆಕಂಡಿದೆ. 'ಮಿಲನ'ದಲ್ಲಿ ಇದೇ ಜೋಡಿ ಅದ್ಭುತ ಯಶಸ್ಸು ಕಂಡಿದ್ದರಿಂದ 'ವಂಶಿ' ಬಗ್ಗೆ ಅಪಾರ ಕುತೂಹಲವಿತ್ತು.

ಮೇಲ್ನೋಟಕ್ಕೆ 'ವಂಶಿ' ತಾಯಿ ಮಗನ ಮಮತೆಯ ಕತೆ ಎಂದೆನಿಸಿದರೂ, ಚಿತ್ರದಲ್ಲಿ ರೌಡಿಸಂ ಕಥೆಯೂ ಸೇರಿಕೊಂಡಿದೆ. ಇವೆರಡರ ಮಧ್ಯೆ ನಾಯಕಿ ಜೊತೆಗೆ ಒಂದು ಪ್ರೇಮ ಕಥೆಯ ಟ್ರ್ಯಾಕೂ ಇದೆ. ಹೀಗಾಗಿ ಸೆಂಟಿಮೆಂಟ್, ಮತ್ತು ಫೈಟಿಂಗ್ ಎಂಬ ಮಸಾಲೆಗಳ ಪ್ಯಾಕೇಜ್ ಈ ಚಿತ್ರ ಎನ್ನಬಹುದು.

ಆರ್.ಪಿ.ಪಟ್ನಾಯಕರ ಸಂಗೀತ ಸ್ವಲ್ಪ ಸಪ್ಪೆಯೆನಿಸಿದೆ. 'ಮಿಲನ'ದ ತರಹ ಮ್ಯಾಜಿಕ್ ಇಲ್ಲಿ ಕಾಣಿಸುವುದಿಲ್ಲ. ರೌಡಿಸಂ ಮತ್ತು ಫೈಟಿಂಗ್ ದೃಶ್ಯಗಳು ಸ್ವಲ್ಪ ಅತಿಯೆನಿಸಿದರೂ ಅಭಿಮಾನಿಗಳಿಗೆ ಇಷ್ಟವಾಗಬಹುದು. ಲಕ್ಷ್ಮೀಯ ಮನೋಜ್ಞ ನಟನೆ ಕಣ್ಣೀರು ಬರಿಸುತ್ತದೆ. ನಾಯಕ ಪುನೀತ್ ಆ್ಯಂಗ್ರಿಮ್ಯಾನ್ ಆಗಿ ಚೆನ್ನಾಗಿ ನಟಿಸಿದ್ದಾರೆ.

'ಮಿಲನ'ದ ತರಹ ಸಾಫ್ಟ್ ಕತೆಯನ್ನು ನಿರೀಕ್ಷಿಸಿ ಹೋದವರಿಗೆ ಪ್ರಕಾಶ್ ಇಲ್ಲಿ ಶಾಕ್ ನೀಡುತ್ತಾರೆ. ತಮಿಳಿನ 'ನಂದ' ಚಿತ್ರದ ನೆರಳು ಈ ಚಿತ್ರ ಮೇಲೆ ಕಾಣಿಸಿದೆ. ಆದರೂ ಕ್ಲೈಮ್ಯಾಕ್ಸ್ ಅನ್ನು ನಿರ್ದೇಶಕ ಪ್ರಕಾಶ್ ಜಾಣ್ಮೆಯಿಂದ ಹೊಸರೀತಿಯಲ್ಲಿ ನಿಭಾಯಿಸಿದ್ದಾರೆ. ■

ವಾರದ ಚಿತ್ರಗಳು


'ತಾಜ್‌ಮಹಲ್' ತೆಗೆದಿದ್ದೇಕೆ?

ಸಿನಿ Bits

■ ಅರುಣ್.ಬಿ

'ತಾಜ್ ಮಹಲ್' ಚಿತ್ರ ಯಶಸ್ವಿಯಾಗಿ ಪ್ರದರ್ಶನಗೊಂಡು ಈಗಾಗಲೇ ಎಳೆಂಟು ಕೇಂದ್ರಗಳಲ್ಲಿ ನೂರುದಿನದತ್ತ ದಾಪು ಗಾಲಿಡುತ್ತಿದೆ. ಆದರೂ ಈ ಚಿತ್ರವನ್ನು ಮುಖ್ಯ ಚಿತ್ರಮಂದಿರವಾದ ಸಂತೋಷ್‌ನಿಂದ ಎತ್ತಂಗಡಿ ಮಾಡಲಾಗಿದೆ.

ಚಿತ್ರವೊಂದರ ಕಲೆಕ್ಷನ್ನು ಚೆನ್ನಾಗಿಲ್ಲದಿದ್ದರೆ ಅದನ್ನು ಯಾವ ಮುಲಾಜೂ ಇಲ್ಲದೆ ಥಿಯೇಟರಿನಿಂದ ಕಿತ್ತುಹಾಕುವುದು ಸಹಜ. ಆದರೆ ಎಂಭತ್ತೊಂದು ದಿನ ಓಡಿರುವ, ಕಲೆಕ್ಷನ್ ಕೂಡ ಚೆನ್ನಾಗಿರುವ ಚಿತ್ರವನ್ನು ಹೀಗೆ ಕಿತ್ತೆಸೆಯುವುದು ಎಷ್ಟು ಸರಿ? ಎಂಬ ಪ್ರಶ್ನೆಗೆ ಕೆಲವರು 'ವಂಶಿ'ಯತ್ತ ಬೆರಳು ಮಾಡುತ್ತಿದ್ದಾರೆ.




ಅನಂತನ 'ಮಲ್ಲಿಗೆ'


ಸಾಮಾನ್ಯವಾಗಿ ಹೊಸ ನಿರ್ದೇಶಕನೊಬ್ಬನ ಸಿನಿಮಾ ಬಿಡುಗಡೆಯಾಗಿ ಅದರ ಫಲಿತಾಂಶ ಬಂದ ನಂತರವೇ ಆತ ಗಾಂಧಿನಗರದಲ್ಲಿ ಇರುತ್ತಾನೋ ಇಲ್ಲವೋ ಎಂಬುದು ನಿರ್ಧಾರವಾಗುತ್ತದೆ. ಆದರೆ ಅನಂತರಾಜು ಎಂಬ ನಿರ್ದೇಶಕನ ಮೊದಲ ಸಿನಿಮಾವೇ ಇನ್ನೂ ಬಿಡುಗಡೆಗೊಂಡಿಲ್ಲದಿದ್ದರೂ ಆತನ ಮೂರನೇ ಚಿತ್ರ ಸದ್ಯದಲ್ಲೇ ಸೆಟ್ಟೇರುತ್ತಿದೆ!

ಶಿವರಾಜ್‌ಕುಮಾರ್ ಅಭಿನಯದ 'ನಂದ' ಹಾಗೂ ಕೋಮಲ್, ಸುದೀಪ್, ವಿಜಯ ರಾಘವೇಂದ್ರ ಮುಂತಾದ ಬಹುತಾರಾಗಣವಿರುವ 'ಮಸ್ತ್ ಮಜಾ ಮಾಡಿ' ಚಿತ್ರವನ್ನು ಈಗಷ್ಟೇ ಮುಗಿಸಿರುವ ಅನಂತ್‌ರಾಜು ಈಗ ಅಜಯ್ ನಾಯಕನಾಗಿರುವ 'ಜಾಜಿ ಮಲ್ಲಿಗೆ'ಯನ್ನು ಕೈಗೆತ್ತಿಕೊಂಡಿದ್ದಾರೆ. ಅಂದಹಾಗೆ ಈ ಚಿತ್ರ ತಮಿಳಿನಲ್ಲಿ ಧನುಷ್ ಅಭಿನಯಿಸಿದ್ದ ಯಶಸ್ವಿ ಚಿತ್ರವೊಂದರ ರಿಮೇಕ್.

ಒಟ್ಟಿನಲ್ಲಿ ಅನಂತರಾಜು ಈ ಪರಿಯ ಸ್ಪೀಡಿನಲ್ಲಿ ಮುನ್ನುಗ್ಗುತ್ತಿರುವುದನ್ನು ನೋಡಿ ಅವಕಾಶಕ್ಕಾಗಿ ಕಾದುಕುಳಿತಿರುವ ಹಿರಿತಲೆಗಳ ಕಣ್ಣೆಲ್ಲಾ ಕೆಂಪಾಗಿವೆಯಂತೆ.

ಬಳಂಜರ 'ಜೋಗುಳ'






'ಪ್ರೀತಿ ಇಲ್ಲದ ಮೇಲೆ' ಎಂಬ ಧಾರಾವಾಹಿಯ ಮೂಲಕ ಗೃಹಿಣಿಯರ ಮನಸೂರೆ ಮಾಡಿದ್ದ ನಿರ್ದೇಶಕ ವಿನು ಬಳಂಜ ಈಗ ಝೀ ಟೀವಿಗಾಗಿ 'ಜೋಗುಳ' ಹಾಡಲು ಶುರುಮಾಡಿದ್ದಾರೆ. 'ಪ್ರೀತಿ ಇಲ್ಲದ ಮೇಲೆ' ಧಾರಾವಾಹಿಯಲ್ಲಿ ಪತ್ರಕರ್ತ ಜೋಗಿ ಅವರ ಸಂಭಾಷಣೆ ನೋಡುಗರನ್ನು ಮೋಡಿ ಮಾಡಿತ್ತು, ಈ ಬಾರಿ ಮತ್ತೊಬ್ಬ ಹಿರಿಯ ಪತ್ರಕರ್ತ ಸತ್ಯಮೂರ್ತಿ ಆನಂದೂರು ಅವರು ಈ 'ಜೋಗುಳ' ಮೆಘಾಧಾರಾವಾಹಿಗಾಗಿ ಸಂಭಾಷಣೆ ಪೋಣಿಸುತ್ತಿದ್ದಾರೆ.

ಬಳಂಜರ ಈ 'ಜೋಗುಳ' ಆರಂಭವಾಗಿದ್ದೇ ತಡ ಹೆಂಗೆಳೆಯರು ನಿದ್ರೆಗೆ ಜಾರುವಂತೆ ಮಾಡದಿದ್ದರೆ ಒಳ್ಳೆಯದು.


ಪ್ರಶಾಂತ 'ಒಬ್ಬನೇ'!



'ಒರಟ ಐ ಲವ್ ಯೂ' ಚಿತ್ರದ ಮೂಲಕ ಚಿತ್ರರಂಗಕ್ಕೆ ಎಂಟ್ರಿ ಪಡೆದ ನಟ ಪ್ರಶಾಂತ್ ಆನಂತರ 'ಮಹರ್ಷಿ', 'ಹೃದಯಗಳಾ ವಿಷಯ', 'ವೆಂಕಿ' ಮುಂತಾದ ಚಿತ್ರಗಳಲ್ಲಿ ನಾಯಕನಟನಾಗಿ ನಟಿಸಿದ್ದಾನೆ. ಆದರೆ ಈ ಯಾವ ಚಿತ್ರಗಳೂ ಇನ್ನೂ ಬಿಡುಗಡೆಗೊಂಡಿಲ್ಲ. ಆದರೂ ಈತ ನಾಯಕನಾಗಿರುವ 'ಒಬ್ಬನೇ' ಎಂಬ ಮತ್ತೊಂದು ಚಿತ್ರವೂ ಮೊನ್ನೆ ಸೆಟ್ಟೇರಿದೆ.

ಇಲ್ಲಿಯತನಕ ಈತನ ಒಂದೇ ಒಂದು ಚಿತ್ರ ಬಿಡುಗಡೆಯಾಗಿದ್ದರೂ ಇಷ್ಟೊಂದು ಚಿತ್ರಗಳಲ್ಲಿ ನಟಿಸುತ್ತಿರುವ 'ಒಬ್ಬನೇ' ನಾಯಕನೆಂದರೆ ಅದು ಪ್ರಶಾಂತ್ ಮಾತ್ರ ಇರಬಹುದು!

'ಪ್ರೇಮ್ ಕಹಾನಿ'ಯಲ್ಲಿ ಇಳಯರಾಜಾ ಆಲಾಪನೆ!



ದಕ್ಷಿಣ ಭಾರತದ ಮ್ಯೂಸಿಕ್ ಮಾಂತ್ರಿಕ ಇಳಯರಾಜಾ ಮತ್ತೊಮ್ಮೆ ಕನ್ನಡಕ್ಕೆ ಬಂದಿದ್ದಾರೆ. ಶಂಕರ್‌ನಾಗ್‌ರ 'ಗೀತಾ', ದೇಸಾಯಿಯವರ 'ನಮ್ಮೂರ ಮಂದಾರ ಹೂವೆ' ಮತ್ತು ಇತ್ತೀಚೆಗೆ 'ಆ ದಿನಗಳು' ಮುಂತಾದ ಹಲವಾರು ಕನ್ನಡ ಚಿತ್ರಗಳಿಗೆ ಸಂಗೀತ ನೀಡಿದ್ದ ಇಳಯರಾಜಾ ಈಗ ಚಂದ್ರು ನಿರ್ದೇಶನದ ಎರಡನೇ ಚಿತ್ರ 'ಪ್ರೇಮ್ ಕಹಾನಿ'ಗಾಗಿ ಮರಳಿ ಬಂದಿದ್ದಾರೆ.

'ಪಿಯುಸಿ' ಪಾಸ್‌ಕ್ಲಾಸ್!



'ಪಿಯುಸಿ' ಎಂಬ ಚಿತ್ರದ ಹೆಸರು ಕೇಳಿದಾಕ್ಷಣ ಇದೊಂದು ಕಾಲೇಜಿಗೆ ಕಾಲಿಡುವ ತರುಣ-ತರುಣಿಯರ ಪ್ರೇಮಕಥೆ ಎಂದು ಸುಲಭವಾಗಿ ಊಹಿಸಬಹುದು. ಇದರ ನಿರ್ದೇಶಕ ಎಸ್.ಆರ್. ಬ್ರದರ್ಸ್ ಜೋಡಿ. ಈ ಹಿಂದೆ ಈ ಜೋಡಿ ಶಿವರಾಜ್‌ಕುಮಾರ್ ಅಭಿನಯದ 'ನಂಜುಂಡಿ' ಎಂಬ ಹಳ್ಳಿ ಕಥಾವಸ್ತುವಿನ ಚಿತ್ರವನ್ನು ನಿರ್ದೇಶಿಸಿದ್ದರು. ಹಳ್ಳಿಯಿಂದ ಕಾಲೇಜ್ ಕ್ಯಾಂಪಸ್‌ಗೆ ಈ ಚಿತ್ರದ ಮೂಲಕ ಶಿಫ್ಟ್ ಆಗಿರುವ ಈ ಅಣ್ಣ ತಮ್ಮ ಜೋಡಿ ನಿರ್ದೇಶಕರು ನವಿರಾದ ನಿರೂಪಣೆಯಿಂದ ಚಿತ್ರವನ್ನು ಕುತೂಹಲಕಾರಿ ಯಾಗಿಸಿದ್ದಾರೆ. ಚಿತ್ರದ ಕಥಾವಸ್ತು ಮತ್ತು ಚಿತ್ರಕಥೆಯನ್ನು ಬಹಳ ಜಾಣ್ಮೆಯಿಂದ ಹೆಣೆದಿದ್ದಾರೆ. ಪಿಯುಸಿ ಓದುತ್ತಿರುವ ಸಂದರ್ಭದಲ್ಲಿ ಪ್ರೀತಿಯ ಆಕರ್ಷಣೆಗೆ ಒಳಗಾಗಿ ಬಲಿಯಾಗುವ ವಿದ್ಯಾರ್ಥಿಗಳ ಮನಸ್ಸನ್ನು ಈ ಚಿತ್ರದಲ್ಲಿ ಸೆರೆಹಿಡಿದಿದ್ದಾರೆ.

ಈ ಚಿತ್ರ ಬರೀ ವಿದ್ಯಾರ್ಥಿಗಳಿಗೆ ಮಾತ್ರವಲ್ಲ; ಹೆತ್ತವರೂ ನೋಡುವಂತೆ ನಿರೂಪಿಸಿರುವುದರಿಂದ ಇದನ್ನು ಮನೆಮಂದಿಯೆಲ್ಲ ಒಟ್ಟಿಗೆ ನೋಡಬಹುದು. ಹೊಸಬರು ನಟಿಸಿದ್ದಾರೆಂಬ ಕಾರಣಕ್ಕಾಗಿ ಇದು ಕಳಪೆಯೆಂದು ಭಾವಿಸಬೇಕಾಗಿಲ್ಲ. ಯಾಕೆಂದರೆ ಹೊಸಬರಾದ ಚೇತನ್‌ಚಂದ್ರ, ಹರ್ಷಿಕ ಪೂಣಚ್ಚ, ಚರಿಷ್ಮಾ ಬಾರಧ್ವಾಜ್ ನಿರೀಕ್ಷೆಗೆ ಮೀರಿ ಚೆನ್ನಾಗಿ ನಟಿಸಿದ್ದಾರೆ. ■

R B P LANKESH, Kannada Weekly Price Rs. 12/- 15-10-2008 RNI No. KARKAN2005/14648 Regd.No.KA/RNP/BGS/2030/2008-10



ಸೈಡ್‌ಲೈನ್ ಆದ ಸಲ್ಮಾನ್

ಅಭಿಷೇಕ್ ಬಚ್ಚನ್ ನಟಿಸಿರುವ, ಮೊನ್ನೆ ಬಿಡುಗಡೆಗೊಂಡ 'ದ್ರೋಣ' ಚಿತ್ರದ ಪ್ರೀಮಿಯರ್ ಶೋನಲ್ಲಿ ಶಾರುಖ್ ಖಾನ್ ಪಾಲ್ಗೊಳ್ಳುವುದರೊಂದಿಗೆ ಕೆಲ ವರ್ಷಗಳಿಂದ ಆತನ ಮತ್ತು ಬಚ್ಚನ್ ಫ್ಯಾಮಿಲಿಯ ನಡುವೆ ಇದ್ದ ಹಗೆತನ ಸದ್ಯಕ್ಕೆ ಶಮನಗೊಂಡಂತಾಗಿದೆ.

ಇತ್ತೀಚಿಗೆ ಬಾಲಿವುಡ್‌ನ ಎಲ್ಲರೂ ಸೇರಿ ಶಾರುಖ್‌ನನ್ನು ಮಣಿಸಲು ಸಕಲ ಪ್ರಯತ್ನವನ್ನೂ ಮಾಡುತ್ತಿದ್ದರು. ಕಳೆದ ತಿಂಗಳಷ್ಟೇ ಸಲ್ಮಾನ್‌ನ ಗರ್ಲ್‌ಫ್ರೆಂಡ್ ಕತ್ರೀನಾ ಕೈಫ್ ತನ್ನ ಬರ್ತ್‌ಡೇ ಅನ್ನು ಗೋವಾದಲ್ಲಿ ಆಚರಿಸಿಕೊಂಡ ಸಂದರ್ಭದಲ್ಲಿ ಅಂದಿನ ಪಾರ್ಟಿಗೆ ಅತಿಥಿಯಾಗಿ ಬಂದಿದ್ದ ಶಾರುಖ್ ಮೇಲೆ ಈ ಸಲ್ಲು ಮಿಯಾ ಸುಮ್ಮನೇ ರೊಳ್ಳೆ ತೆಗೆದು ದೊಡ್ಡ ರಾದ್ಧಾಂತ ಮಾಡಿದ್ದ. ಇನ್ನು ಅಕ್ಷಯ್ ಕುಮಾರ್ ಶಾರುಖ್ ವಿರುದ್ಧವೇ ಹೇಳಿಕೆಗಳನ್ನು ನೀಡಿದ್ದ. ಈ ರೀತಿ ಬಾಲಿವುಡ್‌ನವರು ಒಮ್ಮೆಲೇ ತನ್ನ ವಿರುದ್ಧ ತಿರುಗಿಬಿದ್ದಿದ್ದರಿಂದ ಶಾರುಖ್ ಕೊಂಚ ಕಳಾಹೀನನಾಗಿದ್ದು ನಿಜ.

ಆದರೆ ಈಗ ಎಲ್ಲ ಅದಲುಬದಲಾಗಿದೆ. ಇದ್ದಕ್ಕಿದ್ದ ಹಾಗೆ ಬಚ್ಚನ್ ಫ್ಯಾಮಿಲಿ ಶಾರುಖ್‌ನನ್ನು ತಮ್ಮೆಡೆ ಸೇರಿಸಿಕೊಳ್ಳಲೂ ಕಾರಣವಿದೆ. ಹೇಳಿಕೇಳಿ ಐಶ್ವರ್ಯ ರೈ ಮತ್ತು ಸಲ್ಮಾನ್ ಖಾನ್ ಮಾಜಿ ಪ್ರೇಮಿಗಳು. ಹಾಗಾಗಿ ಸಲ್ಲುನನ್ನು ಸೈಡ್‌ಲೈನ್ ಮಾಡುವ ಮೂಲಕ ಆತನ ಧಿಮಾಕನ್ನು ಅಡಗಿಸುವ ಮತ್ತು ಕೀಳರಿಮೆಗೆ ತಳ್ಳುವ ಐಡಿಯಾ ಬಚ್ಚನ್ ಫ್ಯಾಮಿಲಿಗೆ ಇರುವಂತಿದೆ.

ಹೀಗಾಗಿ, ಬಾದ್‌ಶಾ ಮತ್ತು ಬಿಗ್‌ಬೀ ಒಂದಾಗಿರುವುದು ಸಲ್ಮಾನ್‌ಗೆ ನುಂಗಲಾರದ ತುತ್ತಾಗಿದೆ. ಏನೇ ಇರಲಿ, ಇಬ್ಬರು ಖಾನ್‌ಗಳ ನಡುವೆ ನಡೆಯುತ್ತಿದ್ದ ಸಮರದಲ್ಲಿ ಬಚ್ಚನ್ ಫ್ಯಾಮಿಲಿ ಮಾತ್ರ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದೆ.

■ ಅರುಣ್.ಜಿ





ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಎರಡು ಚಿತ್ರಗಳನ್ನು ನಿರ್ದೇಶಿಸಿರುವ ಪ್ರಕಾಶ್ ಈಗ ಹೊಸಬರನ್ನು ಹಾಕಿಕೊಂಡು ಚಿತ್ರಮಾಡಲು, ನಿರ್ಧರಿಸಿದ್ದಾರೆ. ಆ ಚಿತ್ರದ ಹೆಸರು 'ಗಣಪ'.

"ದೊಡ್ಡದೊಡ್ಡ ಸ್ಟಾರ್‌ಗಳನ್ನು ಹಾಕಿಕೊಂಡು ಚಿತ್ರ ಮಾಡುವ ಮಜಾ ಮತ್ತು ಸಂಕಟ ಬೇರೆ; ಅದೇ ರೀತಿ ತೀರಾ ಹೊಸಬರನ್ನು ಹಾಕಿ ಮಾಡುವಾಗ ಆಗುವ ತೊಂದರೆ ಮತ್ತು ಸಂತೋಷವೇ ಬೇರೆ. ನಾನು ಎರಡನ್ನೂ ಅನುಭವಿಸಬೇಕು ಎಂಬ ಉದ್ದೇಶ ಹೊಂದಿರುವವನು. ಅದಕ್ಕಾಗಿ ಈಗ ಹೊಸಬರ 'ಗಣಪ' ಕೈಗೆತ್ತಿಕೊಂಡಿದ್ದೇನೆ" ಎನ್ನುತ್ತಾರೆ ಪ್ರಕಾಶ್. "ಪುನೀತ್‌ಗಾಗಿ ಇನ್ನೊಂದು ಸಿನಿಮಾ ಮಾಡಿದ್ದರೆ ನಿಮ್ಮದು ಹ್ಯಾಟ್ರಿಕ್ ಆಗುತ್ತಿತ್ತಲ್ಲಾ" ಎಂದು ಕೆದಕಿದರೆ ಪ್ರಕಾಶ್ ಯಾವುದೇ ಉತ್ತರ ನೀಡದೆ ಸುಮ್ಮನೆ ನಗುತ್ತಾರೆ.



ದಯಾಳ್ ಧಾರಾಳತನ?!

ತಮ್ಮ ಚಿತ್ರವನ್ನು ಗೆಲ್ಲಿಸುವ ದೃಷ್ಟಿಯಿಂದ ಚಿತ್ರ ನಿರ್ಮಾಪಕರು ಪತ್ರಕರ್ತರನ್ನು ಒಲೈಸಿಕೊಳ್ಳಲು ಒಂದೊಂದು ಗಿಮಿಕ್‌ಗಳನ್ನು ಮಾಡುತ್ತಿದ್ದರೆ, ನಿರ್ದೇಶಕ ದಯಾಳ್ ಮಾತ್ರ ಎಲ್ಲರಿಗಿಂತ ವಿಭಿನ್ನವಾದ, ದೊಡ್ಡದೊಂದು ಸ್ಕೀಂ ಹಾಕಿದ್ದಾರೆ.

ಇಂಥ ಕಲ್ಚರ್ ಆರಂಭವಾಗಿದ್ದು 'ಸೈನಿಕ' ಚಿತ್ರದಿಂದ. ಯೋಗೇಶ್ವರ್ ಎಂಬ ಪೊಲಿಟಿಷಿಯನ್ ಕಮ್ ಹೀರೋ ತನ್ನ 'ಸೈನಿಕ' ಚಿತ್ರಕ್ಕೆ ಪ್ರಚಾರ ಪಡೆಯುವ ಉದ್ದೇಶದಿಂದ ಜರ್ನಲಿಸ್ಟುಗಳನ್ನೆಲ್ಲಾ ಕುಲುಮನಾಲಿಗೆ ಕರೆದೊಯ್ದಿದ್ದರು. ಇತ್ತೀಚಿಗೆ ಎಸ್.ವಿ. ಬಾಬು ಪತ್ರಕರ್ತರ ಹಿಂಡನ್ನು ವಿಮಾನವೇರಿಸಿ ಹೈದರಾಬಾದಿಗೆ ಕರೆದುಕೊಂಡು ಹೋಗಿದ್ದರು. ಇನ್ನು ನಾಗೇಂದ್ರ ಪ್ರಸಾದ್ ತಮ್ಮ 'ಮೇಘವೇ ಮೇಘವೇ' ಚಿತ್ರದ ಕ್ಯಾಸೆಟ್ ಬಿಡುಗಡೆ ಕಾರ್ಯಕ್ರಮವನ್ನು ವಿಮಾನದಲ್ಲೇ ನೆರವೇರಿಸಿದ್ದರು.

ಇವರೆಲ್ಲರಿಗಿಂತ ಒಂದು ಹೆಜ್ಜೆ ಮುಂದೆ ಇಟ್ಟಿರುವ ದಯಾಳ್ ತನ್ನ 'ಸರ್ಕಸ್' ಸಿನಿಮಾ ಬಿಡುಗಡೆಯಾಗಿ ನೂರು ದಿನ ಓಡಿದರೆ ಐವತ್ತು ಜನ ಪತ್ರಕರ್ತರನ್ನು ಬ್ಯಾಂಕಾಕ್ ಟೂರ್ ಕರೆದೊಯ್ಯುವುದಾಗಿ ದೊಡ್ಡ ಆಮಿಷವೊಡ್ಡಿದ್ದಾರೆ. ಇದನ್ನು ಕೇಳಿ ದಯಾಳ್ ಎಷ್ಟು ಧಾರಾಳದ ಮನುಷ್ಯ ಎಂದು ನೀವು ಅಂದುಕೊಂಡರೆ ನಿಮ್ಮ ಊಹೆ ತಪ್ಪಾಗುತ್ತದೆ.

ಯಾಕೆಂದರೆ ಸಿನಿಮಾ ಪತ್ರಕರ್ತರಿಗೆ ಚಿತ್ರ ಬಿಡುಗಡೆಗೆ ಮುನ್ನ ಎಂಥದ್ದೇ ಆತಿಥ್ಯ, ವಿನಯ ತೋರಿಸಿದ್ದರೂ ಸಹ ಚಿತ್ರ ಬಿಡುಗಡೆಯಾದ ಮರುದಿನವೇ ನೇರ ವಿಮರ್ಶೆ ಮಾಡುತ್ತಾರೆ. ಇದಕ್ಕೆ ಇದೇ ದಯಾಳ್ ನೇತೃತ್ವದಲ್ಲಿ ಬಂದ 'ಗಾಳಿಪಟ' ಚಿತ್ರಕ್ಕೆ ಬಂದ ವಿಮರ್ಶೆಗಳೇ ಸಾಕ್ಷಿ. ಆದ್ದರಿಂದ ತಮ್ಮ ಚಿತ್ರವನ್ನು ವಿಮರ್ಶಿಸುವ ಪತ್ರಕರ್ತರ ಕೈ-ಬಾಯನ್ನು ಕಟ್ಟಿಹಾಕುವ ಉದ್ದೇಶದಿಂದ ದಯಾಳ್ ಹೀಗೆ ಮಾಡುತ್ತಿದ್ದಾರೆ ಅನ್ನಿಸುತ್ತಿದೆ.

ದಯಾಳ್‌ರ ಈ ಹಂಡ್ರೆಡ್ ಡೇಸ್ ಸ್ಕೀಮನ್ನು ನೋಡಿದರೆ, ಬಹುಶಃ ಅವರ ಚಿತ್ರದ ಮೇಲೆ ಅವರಿಗೇ ಭರವಸೆ ಇದ್ದಂತಿಲ್ಲ. ಪ್ರೀತಿ ಮತ್ತು ಪ್ರಾಮಾಣಿಕತೆಯಿಂದ ಸಿನಿಮಾ ಮಾಡುವ ಯಾರೂ ಈ ಥರದ ಆಸೆ, ಆಮಿಷ ಒಡ್ಡುವ ಕೆಲಸಕ್ಕೆ ಇಳಿಯುವುದಿಲ್ಲ.

ಅಂದಹಾಗೆ, ದಯಾಳ್ ಈ ಭರವಸೆಯ ಮಾತುಗಳನ್ನು ಚಲಿಸುತ್ತಿದ್ದ ರೈಲಿನಲ್ಲೇ ಕುಳಿತು ಹೇಳಿದ್ದು ಮಾರ್ಮಿಕವಾಗಿತ್ತು.

■

ಸರ್ಪಸಖಿ ಮಲ್ಲಿಕಾ!



ನಾಗಕನ್ಯೆಯರ ಸೇಡಿನ ಕತೆಯನ್ನಾಧರಿಸಿ ಈವರೆಗೆ ಹಿಂದಿಯಲ್ಲಿ 'ನಾಗಿನ್', 'ನಾಗಿನಾ', 'ಜಾನಿ ದುಶ್ಮನ್'ನಂಥ ಮೂರ್ನಾಲ್ಕು ಚಿತ್ರಗಳು ಬಂದು ಹೋಗಿವೆ. ಅದರಲ್ಲೂ 'ನಾಗಿನ್' ಚಿತ್ರದಲ್ಲಿ ಶ್ರೀದೇವಿ ಪಾತ್ರವನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಯಾಕೆಂದರೆ ನಾಗಕನ್ಯೆಯಾಗಿ ಆಕೆಯ ಅಭಿನಯ, ಕಣ್ಣುಗಳ ಚಲನೆ, ಸರ್ಪನೃತ್ಯಗಳ ಝಲಕ್ ಪ್ರೇಕ್ಷಕನನ್ನು ಮೋಡಿ ಮಾಡಿದ್ದವು.

ಈಗ ಬಾಲಿವುಡ್‌ನ ಹಾಟ್ ಬೇಬ ಮಲ್ಲಿಕಾ ಶೆರಾವತ್ ಕೂಡ 'ನಾವೇನು ಕಮ್ಮಿ' ಎನ್ನುವಂತೆ ಚಿತ್ರವೊಂದರಲ್ಲಿ ನಾಗಕನ್ಯೆಯಾಗಿ ಕಾಣಿಸುತ್ತಿದ್ದಾಳೆ. ಬೇರೆ ಯಾರಾದರೂ ಈ ಪಾತ್ರ ಮಾಡಿದ್ದರೆ ಅಷ್ಟು ಸುದ್ದಿಯಾಗುತ್ತಿರಲಿಲ್ಲ. ಮಲ್ಲಿಕಾ ಎಂಬ ಅರೆನಗ್ನ ಸುಂದರಿ ಈಗ ಸರ್ಪಸಖಿಯಾಗಿ ರೂಪಾಂತರಗೊಳ್ಳುತ್ತಿರುವುದರಿಂದ ಈಗ ಎಲ್ಲರ ಚಿತ್ತ ಮಲ್ಲಿಕಾಳತ್ತ ನೆಟ್ಟಿದೆ. ಹಾಗಾಗಿ ಈ ಸ್ನೇಕ್‌ವುಮನ್ ಪಡ್ಡೆ ಪೋಕರಿಗಳ ನಿದ್ರೆಯಲ್ಲೂ ಬಂದು ಕಾಡಿದರೆ ಆಶ್ಚರ್ಯವಿಲ್ಲ.

ಮತ್ತೆ ಚಿಗುರಿತು ಪುತ್ರ ವಾತ್ಸಲ್ಯ



ಹಂಸಲೇಖ ಗರಡಿಯಿಂದ ಅಪರೂಪಕ್ಕೆ ಮತ್ತೊಂದು ಸುದ್ದಿ ಕೇಳಿಬಂದಿದೆ.

ಅದೇನೆಂದರೆ ಅವರ ಮುದ್ದಿನ ಮಗ ಅಲಂಕಾರ್ ಒಂದು ಸಿನಿಮಾವನ್ನು ನಿರ್ದೇಶಿಸಲು ಹೊರಟಿದ್ದು ಆತ ಅದರ ಕಥೆಯನ್ನೂ ತಯಾರು ಮಾಡಿದ್ದಾರಂತೆ. ಜನಪ್ರಿಯ ನಟನೊಬ್ಬನನ್ನು ಹಾಕಿಕೊಂಡು ಈ ಚಿತ್ರ ನಿರ್ದೇಶಿಸಬೇಕೆಂಬುದು ಅಲಂಕಾರ್ ಅಪೇಕ್ಷೆ. ಆದರೆ ಹಂಸಲೇಖ ಅವರ ಪುತ್ರವಾತ್ಸಲ್ಯ ಮತ್ತೆ ಚಿಗುರಿದೆ. "ದೊಡ್ಡದೊಡ್ಡ ಸ್ಟಾರ್‌ಗಳನ್ನು ಹಾಕಿಕೊಂಡು ಸಿನಿಮಾ ಮಾಡೋದು ದೊಡ್ಡ ರಗಳೆ; ಅದರ ಬದಲಿಗೆ ನೀನೆ ಹೀರೋ ಆಗಿ, ನೀನೇ ನಿರ್ದೇಶನ ಮಾಡು" ಎಂದು ಹಂಸ್ ತನ್ನ ಪುತ್ರನಿಗೆ ಆದೇಶ ನೀಡಿದ್ದಾರಂತೆ.

ಹೀಗಾಗಿ ಅಲಂಕಾರ್ ನಿರ್ದೇಶಿಸಿ ಅಭಿನಯಿಸಲಿರುವ, ಹಂಸಲೇಖ ಸಂಗೀತ ನೀಡಿ ನಿರ್ಮಿಸಲಿರುವ ಹೊಸ ಚಿತ್ರ ಈ ವರ್ಷದ ಕೊನೆಗೆ ಸೆಟ್ಟೇರಬಹುದು. ಅಪ್ಪ ಮಗನ ಜೋಡಿಗೆ ಶುಭವಾಗಲಿ.

■

ಜಾಕಿ 'ಜಮಾನ'



ಹಿಂದಿಯ ಜಾಕಿ ಶ್ರಾಫ್ ತನ್ನ ಎರಡನೆಯ ಕನ್ನಡ ಚಿತ್ರದಲ್ಲೇ ಹೊಸ ವಿಕ್ರಮವೊಂದನ್ನು ಸಾಧಿಸಿದ್ದಾರೆ. ಜಾಕಿ ನಟಿಸುತ್ತಿರುವ 'ಜಮಾನ' ಎಂಬ ಕನ್ನಡ ಚಿತ್ರದಲ್ಲಿ ಅವರಿಗೆ ಪೊಲೀಸ್ ಇನ್ಸ್‌ಪೆಕ್ಟರ್ ಪಾತ್ರ. ಆ ಪಾತ್ರಕ್ಕೆ ಬೇರೆಯವರಿಂದ ಕಂಠದಾನ ಮಾಡಿಸುವ ಬದಲು ಜಾಕಿ ಸ್ವತಃ ತಮ್ಮ ಪಾತ್ರಕ್ಕೆ ತಾವೇ ಧ್ವನಿ ನೀಡಿದ್ದಾರೆ.

ಕನ್ನಡದವರೇ ಆದ ರಮ್ಯಾ, ಶರ್ಮಿಳಾ ಮಾಂಡ್ರೆ ಮೊದಲಾದ ನಾಯಕಿಯರು ಟಿವಿ ಸಂದರ್ಶನಗಳಲ್ಲೂ ಕಾನ್ವೆಂಟ್ ಇಂಗ್ಲಿಷ್ ಮಾತನಾಡುವುದನ್ನು ನೀವು ನೋಡಿರಬಹುದು. ಹಾಗೆಯೇ ಅವರ ಪಾತ್ರಕ್ಕೆ ಕಂಠದಾನ ಕಲಾವಿದರು ಧ್ವನಿ ನೀಡುತ್ತಿದ್ದಾರೆ. ಕನಿಷ್ಠ ಜಾಕಿಯ ಸಾಧನೆಯಿಂದ ಸ್ಫೂರ್ತಿಗೊಂಡು ಮುಂಬರುವ ದಿನಗಳಲ್ಲಿ ತಮ್ಮ ಪಾತ್ರಕ್ಕೆ ತಾವೇ 'ಕನ್ನಡ' ಮಾತಾಡುವಂತಾಗಲಿ ಎಂದು ಹಾರೈಸೋಣ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial ...